ಲಲಿತಸಾಹಿತ್ಯ ಮಾಲೆಯ ವರುಷ ೪; ಕುಡಿ ೪.

ಪ್ರತಿ[illegible]ಕಾರ

ಸ್ವತಂತ್ರ, ರಾಜಕೀಯ ಕಾದಂಬರಿ

-:ಮಿರ್ಜಿ ಅಣ್ಣಾರಾಯರು:-

೧೯೪೭ ೧-೧೨-೦

ಸ್ಮಶಾನ ವೈರಾಗ್ಯ

(ಟಾಲ್‌ಸ್ಟಾಯರ ಸ್ಪೆಂಟ್ ಪ್ಯಾಶನ್)

ಅನುವಾದಕರು:
ಚುಳಕಿ ಗೋವಿಂದರಾಯರು

ಪ್ರಕಾಶಕರು
ದ. ಬಾ. ಕುಲಕರ್ಣಿ
ಮನೋಹರ ಗ್ರಂಥ ಭಾಂಡಾರ
ಧಾರವಾಡ

ಮುದ್ರಕರು
ಜಿ. ಆರ್. ಪಂಡಿತ
ಕೇಳಕರ ಪ್ರೆಸ್, ಧಾರವಾಡ

ಅರಿಕೆ

ಅಗಸ್ಟ ೧೯೪೨ರ ನಂತರ ಸಾತಾರೆ ಜಿಲ್ಹೆಯಲ್ಲಿ ನಡೆದ ಸ್ವಾತಂತ್ರ್ಯ ಯುದ್ಧದ ವಿಶಿಷ್ಟ ಚಳುವಳಿಯನ್ನು ನಿರೂಪಿಸಿಸುವ ಸ್ವಾರಸ್ಯಪೂರ್ಣವಾದ ಕಥಾನಕ, ಈ ಕೃತಿ.

ಆ ಸುತ್ತಿನ ನಾಡಿಗೆ ಪ್ರತಿಸರಕಾರವನ್ನೇ ಸ್ಥಾಪಿಸಿ ಆಡಳಿತ ನಡೆಸಿದ ಕಾರಣದಿಂದ ಈ ಹೋರಾಟ 'ಪ್ರತಿಸರಕಾರ'ದ ಹೋರಾಟವೆಂದು ಪ್ರಸಿದ್ಧವಾಯಿತು. ಅಲ್ಲದೆ ಈ ಹೋರಾಟದ ವಿರೋಧಿಗಳ ಕಾಲಿಗೆ ಪತ್ರಿ ಬಡಿಯುವ ಶಿಕ್ಷೆಯನ್ನು ಪ್ರತಿಸರಕಾರದವರು ಅನುಸರಿಸಿದ ಕಾರಣದಿಂದ ಈ ಹೋರಾಟಕ್ಕೆ 'ಪತ್ರಿಸರಕಾರ'ದ ಹೋರಾಟವೆಂದೂ ಕರೆದರು.

ಈ ಕದನ ಗಾಂಧೀಜಿಯ ಅಹಿಂಸಾ ಮಾರ್ಗದಿಂದ ಬೇರೆಯಾಗಿದ್ದು ತನ್ನ ನ್ಯಾಯನಿಷ್ಠುರತೆಯಿಂದ ಪ್ರಜಾಸತ್ತೆಯ ಪ್ರತೀಕವಾಗಿ 'ಆಜಾದಹಿಂದ' ಚಟುವಟಿಕೆಗಳ ಶ್ರೇಯಸ್ಸನ್ನು ಪಡೆಯುವಂತಾಯಿತು. ಬ್ರಿಟಿಷ ಸತ್ತೆಯ ಬಲಾಢ್ಯತನವು ಈ ಒಂದು ಜಿಲ್ಹೆಯ ಹೋರಾಟದಿಂದಲೇ ಸಡಿಲಾಯಿತು. ನಾಡಿನ ಹೋರಾಟಕ್ಕೆ ಈ ಚಟುವಟಿಕೆಗಳು ಆದರ್ಶ-ಅನುಕರಣೀಯವಾದವು ಅಗಸ್ಟ ಕ್ರಾಂತಿಯು ಈ ಪ್ರತಿಸರಕಾರದಿಂದ ಬಲಗೊಂಡು ಅದರ ಪರಿಣಾಮ ದೃಷ್ಟಿಯಿಂದ ಮಹತ್ವಪೂರ್ಣವಾಯಿತು.

ಈ ಹೋರಾಟವನ್ನು ಒಂದು ವಿಶಿಷ್ಟ ಕಥನತಂತ್ರದಿಂದ ಹೆಣೆದು ಶ್ರೀ. ಮಿರ್ಜಿ … ಯನ್ನು ರಚಿಸಿದ್ದಾರೆ. ಶ್ರೀಯುತ … ಂಬ ಕಾದಂಬರಿಗಳಿಂದ ಕನ್ನಡ ವ … ಕೃತಿಯನ್ನು ನಮ್ಮ ವಾಚಕರು … ನಂಬಿದ್ದೇವೆ.

ಶ್ರೀಯುತ ಮಿರ್ಜಿ ಅಣ್ಣಾರಾಯರು ತಮ್ಮ ಈ ಕೃತಿಯನ್ನು ನಮ್ಮ ಮಾಲೆಯಲ್ಲಿ ಹೆಣೆಯಲು ಅನುವು ಮಾಡಿಕೊಟ್ಟುದಕ್ಕಾಗಿ ನಾವು ಅವರಿಗೆ ತುಂಬ ಋಣಿಯಾಗಿದ್ದೇವೆ.

ಇದಲ್ಲದೆ ಇನ್ನೊಂದು ನೂರು ಪುಟದ ಸಾಹಿತ್ಯವನ್ನು ಪ್ರಕಟಿಸಿದಲ್ಲಿ ಮಾಲೆ ತನ್ನ ನಾಲ್ಕು ದೀರ್ಘವಾದ ವರುಷಗಳನ್ನು ಮುಗಿಸುತ್ತದೆ. ಮಹರ್ಷಿ ಟಾಲ್-ಸ್ಟಾಯಿಯವರ ಸ್ಪೆಂಟ್‌ಪ್ಯಾಶನ್ ಎಂಬ ಕೃತಿಯನ್ನು ನಮ್ಮ ಮಾಲೆಯ ಸಂಪಾದಕರೇ ಕನ್ನಡಿಸಿದ್ದಾರೆ. ಬರುವ ತಿಂಗಳಲ್ಲಿ ಅದನ್ನು ಪ್ರಕಟಿಸಲಾಗುವದು.

ನಮ್ಮ ಪ್ರಕಟನೆಗಳ ಮುದ್ರಣ ಸೌಕರ್ಯಕ್ಕಾಗಿ ಒಂದು ಪ್ರತ್ಯೇಕ ಮುದ್ರಣಾಲಯವನ್ನು ಒದಗಿಸಿಕೊಳ್ಳುವ ಯತ್ನವಿದೆ. ಅದು ಕೈಗೂಡಿದಲ್ಲಿ ಮುಂದಿನ ನಮ್ಮ ಪ್ರಕಟನೆಗಳು ಇದಕ್ಕೂ ನಿಯಮಿತವಾಗಿ, ಹೆಚ್ಚು ಆಕರ್ಷಕವಾಗಿ ಬೆಳಕಿಗೆ ಬರುವವೆಂಬ ಭರವಸೆಯಿದೆ. ನಮ್ಮ ವಾಚಕರು ತಾಳ್ಮೆಯಿಂದ ನಮ್ಮ ಸೇವೆಯನ್ನು ಸ್ವೀಕರಿಸಬೇಕೆಂದು ಬಿನ್ನವಿಸುತ್ತೇವೆ.

ಧಾರವಾಡ
೧೯—೧೨—೪೭

ಪ್ರಕಾಶಕರು
ಲಲಿತಸಾಹಿತ್ಯಮಾಲೆ

ಮುಡುಪು

ಮಾಡಿ ಮಡಿದ

ಮೈಲಾರ ಮಹದೇವಪ್ಪಗೆ

—ಅಣ್ಣಾರಾಯ

ಸಾಹಿತಿಗೊಂದು ಪ್ರಚೋದಕ ಸಾಹಿತ್ಯ

'ರಾಷ್ಟ್ರಪುರುಷ'ದಲ್ಲಿ ಮೂವರು ಗೆಳೆಯರ ಬಾಳಿನಲ್ಲಿಯ ಸತ್ಯಕತೆಯನ್ನು ಕಾದಂಬರಿಯ ವಸ್ತುವನ್ನಾಗಿ ಮಾಡಿಕೊಂಡು ಕತೆ ಹೇಳುವದನ್ನು ಕಲಿಯಬೇಕಾಗಿದ್ದಿತು. ಇಲ್ಲಿ ನಾಡಿನ ಒಂದು ಭಾಗದಲ್ಲಿ—ಸಾತಾರೆ ಜಿಲ್ಹೆಯಲ್ಲಿ—ಹತ್ತೊಂಭತ್ತನೂರಾ ನಲವತ್ತೆರಡರಲ್ಲಿ ಜನತೆಯಿಂದ ನಿರ್ಮಿತವಾದ 'ಪ್ರತಿ ಸರಕಾರ'ವನ್ನೇ ವಸ್ತುವೆಂದಾಯ್ದುಕೊಂಡು ಕಾದಂಬರಿ ರಚಿಸಲು ಯತ್ನಿಸಲಾಗಿದೆ. ಇದೂ ಒಂದು ರೀತಿಯಿಂದ ಕಲಿತುಕೊಳ್ಳುವಿಕೆಯೆಂದೇ ಭಾವಿಸುವೆ.

ಸಾಹಿತಿಗೆ ಅವನ ಸುತ್ತಲಿನ ಜೀವನವು ಕೃತಿ ನಿರ್ಮಿತಿಗೆ ಪ್ರಚೋದಕವಾಗುತ್ತದೆ. ಓದುಗನಿಗೆ ಸಾಹಿತ್ಯದಲ್ಲಿ ಮೂಡಿ ಬಂದ ಜೀವನ --ತಾನು ಅನುಭವಿಸಿದ ಜೀವನವಾದಾಗ—ಆನಂದವನ್ನುಂಟು ಮಾಡುತ್ತದೆ. ವಾಚಕನು ಸಾಹಿತಿಯೂ ಆಗಿದ್ದರೆ ಮೊದಮೊದಲು ತಾನೋದಿದ ಸಾಹಿತ್ಯ ಕೃತಿಗಳಿಂದ ಸ್ಫೂರ್ತಿಗೊಂಡು ತಾನು ಕಂಡ ಜೀವನವನ್ನು ಚಿತ್ರಿಸಲು ಯತ್ನಿಸುವದುಂಟು. ಆಗ ಅವನ ಕೃತುಶಕ್ತಿಗೆ ಪ್ರೇರಕವಾದ ಸಂಗತಿಗಳೆರಡು: ತಾನೋದಿದ ಕೃತಿಯಲ್ಲಿ ತಾನನುಭವಿಸಿದ ಜೀವನ ಸರಿಯಾಗಿ ಮೂಡಿಲ್ಲ; ತನ್ನ ಅನುಭವವನ್ನು ಸಮರ್ಪಕವಾಗಿ ಚಿತ್ರಿಸಬೇಕು—ಇದಕ್ಕೂ ಸುಂದರವಾಗಿ ಚಿತ್ರಿಸಬೇಕು ಎಂಬೊಂದು ಪ್ರೇರಣೆ. ಇನ್ನು ತಾನೋದಿದ ಒಳ್ಳೆಯ ಕೃತಿಯಿಂದ ತನ್ನ ಜೀವನದಲ್ಲಿಯ ಒಂದು ಸಂದರ್ಭ ಸ್ಮರಣೆಗೆ ಬಂದು—ಆಗ ತಾನನುಭವಿಸಿದ ಸುಖವೋ ದುಃಖವೋ ಮನದ ಮುಗಿಲಿನಲ್ಲಿ ಮುತ್ತಿಬಂದು ರಸಧಾರೆಯನ್ನು ಕರೆಯುವುದು; ಸಾಹಿತಿಯ ಸ್ಫೂರ್ತಿಶಿಖಿಯು ಗರಿಗೆದರಿ ಕುಣಿಯತೊಡಗುವುದು. ಇದು ಇನ್ನೊಂದು.

ಸಾಹಿತಿಯು ಇನ್ನೂ ಸಾಧನೆಯಲ್ಲಿರುವಾಗ ಅವನು ಅನುಕರಣಪ್ರಿಯನಾಗಿರುತ್ತಾನೆ. ಅದಕ್ಕಾಗಿ ಅವನ ಕೃತಿ ನಿರ್ಮಿತಿಗೆ ಮೇಲೆ ಹೇಳಿದ

ಕಾರಣಗಳಲ್ಲಿ ಮೊದಲನೆಯ ಸಂಗತಿಯು ಪ್ರಚೋದಕವಾಗುವುದು ಹೆಚ್ಚು. ಆದರಿಂದ ಅವನ ಕೃತಿಗಳಲ್ಲಿ ಹಿರಿಯ ಸಾಹಿತ್ಯಿಕರ ಕೃತಿಗಳ ನೆರಳೋ ಅನುಕರಣವೋ ಕಾಣುವುದುಂಟು. ಆದರೆ ಅದು ಅವನ ಕೃತಿಗೆ ಎಷ್ಟರ ಮಟ್ಟಿಗೆ ಪ್ರಚೋದಕವಾಗಿದೆಯೆಂಬುದನ್ನೂ ಆ ಪ್ರಚೋದನೆಯಿಂದ ಅವನು ತನ್ನ ಸ್ವಂತ ಸೃಷ್ಟಿಯನ್ನು ನಿರ್ಮಿಸುವಲ್ಲಿ ಏನು ಕೌಶಲ್ಯ ತೋರಿಸಿರುವನೆಂಬುದನ್ನೂ ತೂಗಿ ನೋಡುವುದು, ತೆರೆದಿಡುವುದು, ವಿಮರ್ಶಕರ ಕರ್ತವ್ಯ; ಹಿರಿಯರ ಮಾರ್ಗದರ್ಶನ. ಇನ್ನು ನಾಡಿಗೆ ನಾಡೇ ಒಂದೇ ತೂಗುಯ್ಯಾಲೆಯಲ್ಲಿರುವಾಗ ಅನೇಕ ಹಿರಿಕಿರಿಯ ಸಾಹಿತಿಗಳಲ್ಲಿ ಬೀಸುವ ಭಾವದ ಬಿರುಗಾಳಿ, ಸನ್ನಿವೇಶದ ಸಂಯೋಜನೆಗಳು ಒಂದೇ ಕ್ರಮದಿಂದ ಸಾಗಬಹುದು. ಆ ಮಾತು ಬೇರೆ.

ಈ ಕೃತಿಯಲ್ಲಿ ಮೂಡಿದ ಸನ್ನಿವೇಶಗಳಲ್ಲಿ ಹಲವು ಸತ್ಯಸಂಗತಿಗಳ ಮೇಲೆ ಕಟ್ಟಿದಂಥವುಗಳು. ಅವು 'ಪ್ರತಿ ಸರಕಾರ'ಕ್ಕೆ ಸಂಬಂಧಪಟ್ಟಂಥವುಗಳು. ಅವುಗಳನ್ನೆಲ್ಲ ನಾನು ಆಯ್ದುಕೊಂಡುದು "ನವಯುಗ" (೧೨. ಮೇ. ೧೯೪೬) ಮರಾಠಿ ವೃತ್ತಪತ್ರದ ವಿಶೇಷ ಸಂಚಿಕೆಯೊಂದರಿಂದ. ಅವುಗಳಿಗೆ ಸಾಹಿತ್ಯದ ಬಣ್ಣಬಳಿಯಲಿಕ್ಕೆ 'ಪ್ರತಿಸರಕಾರ'ದ ಸದಸ್ಯನಾಗಿ ಕೆಲಸ ಮಾಡಿದ ಒಬ್ಬ ಗೆಳೆಯನ ಸಂದರ್ಶನ ಸಹಾಯ ನೀಡಿದೆ. ಇವೆರಡನ್ನೂ ಒದಗಿಸಿಕೊಟ್ಟವರು ಉಗಾರಿನ ಗೆಳೆಯ ಭಾಲಚಂದ್ರ ಪ್ರೇಮಚಂದ್ರ ಶಹಾ ಅವರು. ಗೆಳೆಯರು ಒದಗಿಸಿಕೊಟ್ಟ ಸಾಮಗ್ರಿಯು ಒಂದು ಇತಿಹಾಸ ಬರೆಯುವುದಕ್ಕೆ ತಕ್ಕುದು. ಅದನ್ನು ಬದಲಿಸುವಂತಿಲ್ಲ. ಕೃತಿ ಮಾತ್ರ ಇತಿಹಾಸವಾಗತಕ್ಕದ್ದಲ್ಲ. ಈ ಎಚ್ಚರವನ್ನಿಟ್ಟು 'ಪ್ರತಿಸರಕಾರ' ಕಾದಂಬರಿಯನ್ನು ಬರೆಯಲು ತೊಡಗಿದೆ. ನನಗೆ ಇತಿಹಾಸದ ಮೋಹ ಹೆಚ್ಚಾದಲ್ಲೆಲ್ಲ ಹಸ್ತಪತ್ರಿಯನ್ನು ಓದಿ ಎಚ್ಚರವಿತ್ತವರು ಒಳ್ಳೆಯ ವಿಮರ್ಶಕರಾದ ಶ್ರೀ. ಆರ್. ವ್ಹಿ. ಕುಲಕರ್ಣಿಯವರು. ಇಷ್ಟಾಗಿಯೂ ಆಯ್ದುಕೊಂಡ ವಸ್ತುವನ್ನು ಕಾದಂಬರಿಯನ್ನಾಗಿ ಮಾಡಬೇಕಾದರೆ ಕೆಲವು ಕಲ್ಪಿತ ಪಾತ್ರಗಳನ್ನು ತರಬೇಕಾಯಿತು. ಇಲ್ಲಿ ಕಾಣುವ ಸುಬ್ಬರಾವ, ಬಾಬಾಸಾಹೇಬ, ವಸಂತ, ಸುಲೋಚನಾ, ಸುಮಿತ್ರಾ, ಸದಾನಂದ ಮೊದಲಾದವರು ಕೇವಲ ಕಲ್ಪಿತ

ಪಾತ್ರಗಳು. ಪ್ರತಿ ಸರಕಾರಕ್ಕೂ ಇವರಿಗೂ ಏನೂ ಸಂಬಂಧವಿಲ್ಲ. ಈ ಕಲ್ಪಿತ ವ್ಯಕ್ತಿಗಳಿಂದ ಕಟ್ಟಿದ ಕತೆಯಲ್ಲಿ ಹಾಸು ಹೊಕ್ಕಾಗಿ ಬಂದ ಪ್ರತಿ ಸರಕಾರದ ಇತಿಹಾಸದಲ್ಲಿಯ ವ್ಯಕ್ತಿಗಳು ಮಾತ್ರ ಕಲ್ಪಿತವಲ್ಲ. ಅವರು ನಾಡಿನಲ್ಲಿ ಬಾಳಿದವರು, ಬಾಳುತ್ತಿರುವವರು.

'ಪ್ರತಿ ಸರಕಾರ'ದ ಸಂಗತಿಯನ್ನು ರಸವತ್ತಾಗಿ ಹೇಳಬೇಕೆಂಬುವ ಉದ್ದೇಶವನ್ನು ಸಾಧಿಸುವದಕ್ಕಾಗಿ ಕತೆಯಲ್ಲಿ ವಿಷಮ ದಾಂಪತ್ಯದ ಸನ್ನಿವೇಶವನ್ನು ಕಲ್ಪಿಸಿಕೊಂಡಿದೆ. ಆ ಸಂದರ್ಭದಲ್ಲಿ ಬರುವ ಹೆಂಣು-ಗಂಡಿನ ಸಂಬಂಧದ ಹಲವು ವಿಚಾರಗಳಲ್ಲಿ ದಿ। ಚರಶ್ಚಂದ್ರರ ವಿಚಾರ ಧಾರೆಯನ್ನು ವಾಚಕರು ಗುರುತಿಸಬಹುದು. ಅದರಂತೆ ಕಾದಂಬರಿಗೆ ಬಳಸಿಕೊಂಡ ತಂತ್ರದ ಮಾದರಿಯನ್ನು ಶ್ರೀ. ವಿ. ಸ. ಖಾಂಡೇಕರರ 'ಕ್ರೌಂಚವಧ'ದಿಂದ ಕಲಿತುಕೊಂಡುದು. ಇದಕ್ಕಿಂತ ಹೆಚ್ಚಿಗೆ ಈ ಕಾದಂಬರಿಯ ರಚನೆಯ ವಿಷಯಕ್ಕೆ ಹೇಳುವ ಅವಶ್ಯಕತೆ ಇಲ್ಲಿ ತೋರುವುದಿಲ್ಲ.

ಕೊನೆಯದಾಗಿ ಈ ಕೃತಿಯನ್ನು ತನ್ನ ಲಲಿತಸಾಹಿತ್ಯ ಮಾಲೆಯಲ್ಲಿ ಪವಣಿಸಿದ ಮಾಲೆಯ ಸಂಪಾದಕರಿಗೆ ನನ್ನ ಕೃತಜ್ಞತೆಗಳು ಸಲ್ಲಬೇಕು.

ಟ್ರೇನಿಂಗ ಕಾಲೇಜ
ಧಾರವಾಡ
೧೯-೧೨-೧೯೪೭

ಮಿರ್ಜಿ ಅಣ್ಣಾರಾಯ

ಪ್ರತಿ ಸರಕಾರ

ಖಟ್……ಖಟ್……ಖಟ್……ಖಟ್……

ಯಾರವರು ಬಾಗಿಲ ಬಡಿಯುವವರು ? ಪತ್ರಿಸರಕಾರ? ಛೆ! ಪತ್ರಿ ಸರಕಾರದವರು ಬರಲಿಕ್ಕೆ ಇದೇನು ಹಳ್ಳಿಯ ಮನೆಯೆ ? ಇದು, ಆ ನಮ್ಮ ಹಳ್ಳಿಯ ವಾತಾವರಣವಲ್ಲ. ರಾಜಧಾನಿಯಿದು ! ಎಂಥ ಕಾವಲು; ಅದೆಂಥ ಬಿಗುವು. ಕೊಟಗೊಬ್ಬ ಪೋಲೀಸು. ಕೂಗಿದಾಗ ಪೋಲೀಸಪಾರ್ಟಿ……

ಹಿಃ! ಹಿಃ! ಹಿಃ! ಹಿಃ!

ಸಂಸ್ಥಾನಿಕನ ದಿವಾಣಸಾಹೇಬರ ಕಾರಿನಲ್ಲಿ ತಿರುಗುವವನಿಗೆ ಪತ್ರಿ ಸರಕಾರದ ಹೆದರಿಕೆ! ಎಂಥ ಹುಚ್ಚಿದು? ಕಾಯ್ದು ತಲೆಯೊಳಗೆ ಏನೇನೋ ಸೇರಿಬಿಟ್ಟದೆ ಆಯಿತು. ಹೀಗೆ ಪತ್ರಿಸರಕಾರದವರು ಮನುಷ್ಯರ ಕಾಲಿಗೆ ನಾಲು ಕಟ್ಟಬೇಕಾದರೆ ದಿನಕ್ಕೊಬ್ಬರಿಗೆ ಕಟ್ಟುತ್ತ ಹೋದಾರು ? ಅದೇನು ಬೂಟಿಗೆ ನಾಲು ಕಟ್ಟುವದಿದೆಯ ?

ಯಾರು ಹಿಡಿದುಕೊಡುವದಿಲ್ಲ ಫರಾರಿಗಳನ್ನು? ಮೊನ್ನೆ ಮೊನ್ನೆ ಪೋಲೀಸರೇ ನೂರೆಂಟು ಜನರನ್ನು ಹಿಡಿದು ತಂದು ಕೋರ್ಟಿನ ಮುಂದೆ ನಿಲ್ಲಿಸಿದ್ದರಲ್ಲ! ಜ್ಞಾನು ಕುಂಬಾರನಿಗೆ ಇಪ್ಪತ್ತು ವರ್ಷ ಶಿಕ್ಷೆ ವಿಧಿಸಿತು ಸರಕಾರ. ಇಂಥದಕ್ಕೆಲ್ಲ ಪತ್ರಿಸರಕಾರ ಸುಮ್ಮನಿದೆ. ಇರದೆ ಏನು ? ಇವರ ಕೈಯಲ್ಲಿ ಇದೆಯಾದರೂ ಏನು ?

ಪ್ರತ್ಯಕ್ಷ ಹೋಗಿ ಫರಾರಿಗಳನ್ನು ಹಿಡಿದು ತರುವ ಪೋಲೀಸರಿಗೆ ಪತ್ರಿ ಸರಕಾರದ ಹೆದರಿಕೆಯಿಲ್ಲ. ನಾನಂತೂ ದೂರಿನಿಂದಲೇ ಎಲ್ಲ ಕಾರ್ಯ ಸಾಧಿಸಿದ್ದೇನೆ.

ಶಹಬ್ಬಾಶ್ !

ಧೂರ್ತನೆನ್ನಬೇಕು ನನಗೆ. ಮುತ್ಸದ್ದಿಗಿರಿಯ ಮೂರ್ತಿಮಂತ ಅವತಾರ. ಇಲ್ಲವಾದರೆ ಪುಟ್ಟ ಹಳ್ಳಿಯ ನನ್ನಂಥ ಇನಾಮದಾರ ಇಷ್ಟು ಬೆಳಕಿಗೆ ಬರುತ್ತಿದ್ದನೆ? ನನ್ನ ಕೈಗೆ ಆಸ್ತಿ ಬಂದಾಗ ಏನಿತ್ತು? ಊರೊಳಗೆ ಎಲ್ಲರಿಗಿಂತ ತುಸು ಹೆಚ್ಚು ಉತ್ಪನ್ನವಿಷ್ಟೇ. ಯಾರಿಗಿರುವದಿಲ್ಲ? ಎಲ್ಲ ವತನದಾರರಂತೆ ನನಗೂ ಇತ್ತು. ಅದನ್ನೇ ಇಷ್ಟು ಸ್ವಲ್ಪ ಅವಧಿಯಲ್ಲಿ-ಒಂದೇ ಒಂದು ತಲೆಮಾರಿನಲ್ಲಿ--ಇಷ್ಟು ಬೆಳಿಸಿದೆ. ಸಣ್ಣ ಸಂಸ್ಥಾನಿಕ ನಂತಾದೆ. ಇಂಥ ಮಹಾನಗರದಲ್ಲಿ ತಿಂಗಳಿಗೆ ಸಾವಿರಾರು ರೂಪಾಯಿ ಬಾಡಿಗೆಯನ್ನು ತರುವ ಬಂಗಲೆಗಳು............... ಥಿಯೇಟರುಗಳು ಕೊಲ್ಹಾಪೂರದಂಥ ರಾಜಧಾನಿಯಲ್ಲಿ !

ನಮ್ಮ ಥೇಟರಿನಲ್ಲಿ ಆ ಹೊಸ ಚಿತ್ರಪಟ........ಅಹುದು, ಅದೇ ಆ ಚಿತ್ರಪಟ ಅಂದೇ ಆರಂಭವಾಗಿದ್ದಿತು. ಅದಕ್ಕೆ ನನ್ನ ಕಾರಿನಿಂದಲೇ ವಸಂತ ನನ್ನು ಕಳಿಸಿದೆ! ಸಂಗಡ ಬಾಬಾಸಾಹೇಬ ಹೋಗದಂತೆ ಯುಕ್ತಿ ಹೂಡಿದೆ. ಆಗ ಅವನಿಗೆ ಏನಾದರೂ ಸಂಶಯ ಬರುವಂತಿತ್ತೇ? ಇಲ್ಲ; ಎಳ್ಳಷ್ಟೂ. ಇಲ್ಲ. ಸಂತೋಷದಿಂದ ಒಬ್ಬನೇ ಹೋದ. ನಿರ್ಭಯವಾಗಿ ಹೋಗಿ ಕುಳಿತ. ದೊಡ್ಡವರ ಆಶ್ರಯವೆಂದು ಹೆಮ್ಮೆಪಟ್ಟುಕೊಂಡನೇನೊ! ಆದರೆ ದೊಡ್ಡವರ ಆಶ್ರಯ ದೊಡ್ಡದಿದ್ದಷ್ಟೂ ಹೊಡೆತ ದೊಡ್ಡದೆಂಬುದು ಅವನಿಗೇನು ಗೊತ್ತು, ಪಾಪ!

ಮುಂದೆ ಒಂದು ತಾಸಿನಲ್ಲಿ— ಒಂದೇ ಒಂದು ತಾಸಿನಲ್ಲಿ--ಥೇಟರಿನ ಸುತ್ತೆಲ್ಲ ಪೋಲೀಸ ಪಾರ್ಟಿ! ಹೊಸ ಚಿತ್ರಪಟ ನೋಡಬೇಕೆಂದವನಿಗೆ ಕಂಡ ಚಿತ್ರಪಟನೇ ಬೇರೆ. ತಾನೊಂದೆಣಿಸಿದರೆ ದೈವವೊಂದೆಣಿಸಿತಂತೆ. ಅದೇ ನಂಬರಿನ ಕುರ್ಚಿಗೆ ಹೋಗಿ ನಿಂತ ಪೋಲೀಸ ಇನಸ್ಪೆಕ್ಟರ.

ನಿಲ್ಲದೇನು? ಹೇಳಿ ಕೇಳಿ ಇಟ್ಟ ನಂಬರದು !

ಎಲ್ಲಿ ಹೋಗುವ ವಸಂತ. ಸರಳ ಪೋಲೀಸರ ಸ್ವಾಧೀನನಾದ. ಮಾಡುವನೇನು? ಸರ್ಕಸಿನ ಸಿಂಹ!

ಸರ್ಕಸ! ಏನು ಚಪಲತೆ ನಮ್ಮ ಸಯಾಜಿಯದು? ನನ್ನ ಮಗ ನನ್ನ ಮಗ! ಎಂದು ಮೋಹಕ್ಕೆ ಬಲಿಬಿದ್ದು ಮನೆಯಲ್ಲಿಯೇ ಇಟ್ಟು ಕೊಂಡಿದ್ದರೆ ರತ್ನವನ್ನು ಒಯ್ದು ತಿಪ್ಪಿಯಲ್ಲಿ ಹುಗಿದಂತೆ ಆಗುತ್ತಿದ್ದಿತು.

ಎಂಥ ಪ್ರಗತಿ ಈಗ? ಎರಡೇ ಎರಡು ವರ್ಷಗಳಲ್ಲಿ ವೀರವೈಮಾನಿಕನೆನಿಸಿಕೊಂಡ! ಸ್ವತಃ ಸೇನಾಪತಿ ಅಚೆನ್ ಲೇಕರೂ ಸೇಕ್‌ಹ್ಯಾಂಡ ಕೊಟ್ಟರಂತೆ. ಆಗ ನಮ್ಮ ಸಂಸ್ಥಾನಿಕ ಕಣ್ದೆರೆದು ನೋಡಿದ. ವಹವ್ವ! ನಾಳೆ ಸಂಸ್ಥಾನಿಕ— ಅದೇಕೆ? ಸಂಸ್ಥಾನದ ರೆಸಿಡೆಂಟ ಇದಿರುಗೊಳ್ಳಲು ಹೋಗುವ ಹನ್ನೆರಡು ತೋಫಿನ ಸನ್ಮಾನದೊಡನೆ. ಆಗ ಸೈನಿಕವೇಷದಲ್ಲಿ ರೇಲಿನಿಂದಿಳಿಯುವ ನನ್ನ ಸಯಾಜಿ ಎಷ್ಟು ಸುಂದರವಾಗಿ ಕಾಣಬಹುದು.!

ಏನದು?

ಈ ಶೋಭೆ! ಇಂಥ ವೈಭವ!

ಚಿಕ್ಕ ಇನಾಮದಾರನ ಮಗನು ಇಂಥ ಸನ್ಮಾನವನ್ನು ಪಡೆದು ಬರುವನೆಂಬುದು ಕನಸುಮನಸಿನಲ್ಲಿಯಾದರೂ ಇತ್ತೇ? ಶೂರ ಶಿವಾಜಿಯ ವಂಶದ ರಕ್ತ ಯಾವಾಗಾದರೂ ಶೌರ್ಯ ತೋರಿಸುವುದೇ.

ಆದರೆ ಈ ಹುಡುಗ....ಬಾಬಾಸಾಹೇಬ....ಕುಲಕ್ಕೆ ಕಲಂಕಪ್ರಾಯನಾಗುವನು.

ಬಂದೀತು—ಇಂದಿಲ್ಲ ನಾಳೆ ಬುದ್ಧಿ ಬಂದೀತು. ವಂಶ ವಿಸ್ಮೃತಿ ಎಂಬುದು ಇರುವದಿಲ್ಲವೆ?

ಅಲ್ಲ; ಈತ ಇನ್ನೊಂದು ಮನೆಯ ದತ್ತಕ ಪುತ್ರ. ಆ ಮನೆಯಲ್ಲಿ ಹುಟ್ಟದಿದ್ದರೇನಾಯ್ತು? ಆಸ್ತಿಗೆ ಒಡೆಯನಾಗಲಿಲ್ಲವೆ?

ಆದ. ಆಯ್ತು. ಆ ಮನೆತನದ ಗುಣ ಇವನಿಗೆ. ಇರಲಿ, ಅಂಥದಾದರೂ ಎಲ್ಲಿದೆ?

ಬೇರೆ ಸ್ವರೂಪವನ್ನೇ ತಳೆದು ನಿಂತನಲ್ಲ ಈ ಪ್ರಾಣಿ! ಇನ್ನೂ ದತ್ತಕ ತಂದೆಯಂತೆ ಬಾಳಿದ್ದರೆ ಒಳಿತಾಗುತ್ತಿತ್ತೋ ಏನೋ. ಈ ದೇಶಭಕ್ತಿಯ ಹುಚ್ಚಿನಿಂದ ಹಾಳಾಗುತ್ತಿದ್ದಾನೆ.

ಬಾಬಾಸಾಹೇಬನ ತಂದೆಯಾದರೂ ಏನು ಪ್ರಪಂಚ ಮಾಡಿದ? ಇದ್ದೂ ಕಾಡಿದ, ಸತ್ತೂ ಕಾಡುತ್ತಿದ್ದಾನೆ. ಸ್ತ್ರೀಲೋಲನಾಗಿ ಎಲ್ಲ ಹಾಳು

ಮಾಡಿಕೊಂಡ. ಬದುಕಿರುವವರೆಗೆ ಮನೆ ಎನ್ನಲಿಲ್ಲ. ಮಗ ಎನ್ನಲಿಲ್ಲ. ಈಗ ಹಿಂದೆ ಉಪದ್ರವ ಮಾಡಿಟ್ಟಿದ್ದಾನೆ ಮಹಾತ್ಮ.

ಸುನಂದಾ !

ಎಷ್ಟಾದರೂ ವಾರಾಂಗನೆಯೇ ಅವಳು. ಅವಳಿಗೇನು ವಿನಯ ಲಜ್ಜೆಗಳಿರುವವೆ? ಯಾರಿಗೋ ಹುಟ್ಟಿದ ಹುಡುಗನ ಹೆಸರನ್ನು ಜನನ ಮರಣ ರಜಿಸ್ಟರಕ್ಕೆ ದಾಖಲು ಮಾಡಿಸಿಟ್ಟು, ಹೆಂಡತಿಯೆಂದು ಸಾರು ತ್ತಿದ್ದಾಳೆ.

ಸಾರಲಿ; ಈ ಸುಬ್ಬರಾಯನ ಕೈಚಳಕ ಅವಳಿಗೆ ಗೊತ್ತಿಲ್ಲ. ಇಂಥ ಹೆಂಗಸಿನ ಪಾಲಿಗೆ ಆಸ್ತಿ ಹೋಗಗೊಡುವೆನೆ? ಕೊಟ್ಟರೆ ನನ್ನ ಪೌರುಷ ವೇನು ಉಳಿಯಿತು? ನೋಡುವೆ ಇವಳಾದರೂ ಎಲ್ಲಿಯವರೆಗೆ ತಡೆಯು ವಳು. ಪ್ರಿವ್ಹಿ ಕೌನ್ಸಿಲವರೆಗೆ ಹೋಗಲಿ. ಆದರೂ ಪಾಲು ಕೊಡಲಿಕ್ಕಿಲ್ಲ ನಾನು. ವೀರ ಮರಾಠಾ ಶಾಹಿಯ ರಕ್ತವೇನು ಸಾಮಾನ್ಯವೆ?

ಖಟ್........ಖಟ್........ಖಟ್........ಖಟ್....

\+ \+ \+ \+

ಮುಸುಕು ತೆಗೆದ ಸುಬ್ಬರಾವ. ಇನ್ನೂ ನಸುಕು. ಎದುರಿಗಿನ ಕಿಡಿಕಿ ಯೊಳಗಿಂದ ತಂಗಾಳಿ ತೀಡುತ್ತಲಿದೆ. ದೂರ ದಿಗಂತದಲ್ಲಿ ಮುಂಬೆಳಗಿನ ಚಿನ್ನ ತೋರುತ್ತಲಿತ್ತು. ಯಾವಳೋ ಒಬ್ಬ ತರುಣಿಯು ಕುದುರೆಯೊಂದ ನ್ನೇರಿ ಕಿಡಿಕಿಯ ಎದುರಿನ ಬೀದಿಯಿಂದಲೇ ಸಾಗಿದ್ದಳು.

‡ ‡ ‡ ‡

ಅಹುದು, ದಿನಾಲು ಇವಳೇ ಹೋಗುವಳು. ಅದಾರೋ ಜಾಧವ ರಾವನ ಮಗಳಂತೆ. ಈಗ ಹತ್ತೆಂಟು ನಿಮಿಷಗಳ ಹಿಂದೆ ಕೇಳಿದ ಸಪ್ಪಳ ಇವಳ ಕುದುರೆಯ ಹೆಜ್ಜೆಗಳ ಸಪ್ಪಳವೇ ಇರಬೇಕು.

ಏನು ನನ್ನ ಕಲ್ಪನೆ! ಪತ್ರಿ ಸರಕಾರ ಬಂದು ಬಾಗಿಲ ಮುರಿಸುವ ರಂತೆ, ಛೀ!

ಏನು ಹುಡುಗಿಯು [illegible]

§ § §

ಹಾಗೆಯೇ ಇನ್ನೊಂದು ಮಗ್ಗುಲಿಗೆ ಹೊರಳುವಾಗ ಎದುರಿನ ಗೋಡೆಯ ಮೇಲಿರುವ ಹೆಂಡತಿಯ ಛಾಯಾಚಿತ್ರದ ಕಡೆಗೆ ಅವನ ಲಕ್ಷ್ಯ ಹರಿಯಿತು.

* * * *

ಅದೆಂಥ ಮೋಹಕ ಮೂರ್ತಿ? ಅವಳೊಬ್ಬಳು ನನಗೆ ಚೈತನ್ಯ ಸ್ವರೂಪವಾಗಿದ್ದಳು. ಅಂತೇ ಇಷ್ಟೆಲ್ಲ ಮಾಡಿದೆ. ಆದರೆ ಇಂದಿನ ಈ ಸೌಖ್ಯ ವನ್ನುಣ್ಣಲು ಅವಳು ಬದುಕಿಲ್ಲ......

ಅದೊಂದು ದಿನ. ಬಾಬಾಸಾಹೇಬನನ್ನು ಬಸಿರಿದ್ದಳಾಕೆ. ಸಯಾಜಿ ಹುಟ್ಟಿದ ಹನ್ನೆರಡು ವರುಷಗಳ ಮೇಲಿನ ಬಸಿರದು. ಎಂಥ ಹಿಗ್ಗು ಆವಳಲ್ಲಿ! ಇನ್ನು ತಮಗೆ ಮಕ್ಕಳೇ ಆಗುವದಿಲ್ಲವೆಂದು ನಿರಾಶೆಗೊಂಡಾಗಿನ ಬಸಿರದು. ಸಂತಸದ ಸುಗ್ಗಿ !

ಮನೆಯಲ್ಲಿ ಇನ್ನೊಂದು ಪುಟ್ಟ ಮಗು ಸುಳಿದಾಡುವುದರ ಸೂಚನೆ ಯೆಂಬಂತೆ ಮೆಲ್ಲಡಿಯಿಡುತ್ತ ನನ್ನ ಕೋಣೆಗೆ ಬಂದಳು. ಊಟವಾದ ಮೇಲೆ ತಾಂಬೂಲ ಅವಳೇ ಕೊಡಬೇಕು. ಎಂದರೆ ತಿಂದ ಅನ್ನ ಅಮೃತ ವಾಗುವುದು.

ಅದೇ ತಾಂಬೂಲ ಕೊಡಲಿಕ್ಕೆ ಬಂದಳಂದು. ತಾನೂ ಹಾಕಿಕೊಂಡಳು. ಆಗ ಅವಳ ಚೆಂದುಟಿಗಳು ಎಂಥ ಮೋಹಕವಾಗಿದ್ದುವು! ಆಕರ್ಷಕವಾಗಿ ದ್ದುವು! ಕೈ ಹಿಡಿದು ಸಹಜ ಬಳಿಗೆಳೆದೆ. ಮಲ್ಲಿಗೆಯಂತೆ ಮೈಗೆ ಆತು ಕೊಂಡಳು. ಮೃದುವಾಗಿ ಕುರುಳಿನ ಮೇಲೆ ಕೈಯಾಡಿಸಿದೆ. ಹಾಗೇ ಹೇಗಿ ರುವುದಾದೀತು? ಬೆರಳು ಬೆರಳುಗಳನ್ನು ತೀಡಿದುವು. ಮೆಲ್ಲಗೆ ಮುದ್ದಿಡುವು ದರಲ್ಲಿದ್ದೆ. ದೂರ ಸರಿದಳಾಕೆ ಮೆಲ್ಲಗೆ.

"ಮೂ....ರು....ತಿಂ....ಗ....ಳು...."

"ಕೈಯು ಕೈಯಲ್ಲಿತ್ತು. ಮುಖ ಬೆಳ್ಳಗಾಯಿತು."

"ಅಕ್ಕಾ ತಂದೆ...."

ಕೆಲಸದವಳು ಹೊರಗಿನಿಂದ ಹೇಳಿದಳು.

" ಹೂಂ ! "

" ಏನದು ? "

" ಆ....ಟ....ಗೆ...."

" ವಹವ್ವ ! ಕೂಸು ಹುಟ್ಟುವ ಮುನ್ನ ಆಟಿಗೆಯೇ ? "

ನಾಚಿ ತಲೆ ತಗ್ಗಿಸಿದಳಾಕೆ. ಎಂಥ ಬೆಡಗದು. ಫಲಭಾರದಿಂದ ಬಾಳೆ ಗೊನೆ ಬಾಗಿದ ಶೀವಿಯದು. ಇಂದಿಗೂ ಆ ಆಕೃತಿ ಕಣ್ಣಿಗೆ ಕಟ್ಟುವುದು. ಮುಂದೆ ಹಡವ ಒಂಭತ್ತು ದಿನಗಳಲ್ಲಿಯೇ....

\+ + + +

ರೆಪ್ಪೆ ಭಾರವಾದುವು. ಎದ್ದು ಕುಳಿತ ಸುಬ್ಬರಾವ. ಸುತ್ತಲೂ ನೋಡಿದ. ಬೆಳಕು ಹರಿದಿದ್ದಿತು.

ಈಗಾಗಲೇ ಬಾಬಾಸಾಹೇಬ ಎದ್ದಿರಬೇಕು.

ತಾಯಿಯಿಲ್ಲದ ತಬ್ಬಲಿಯೆಂದು ಒಳ್ಳೆಯ ಅಕ್ಕರತೆಯಿಂದ ಬಾಬಾ ಸಾಹೇಬನನ್ನು ಸುಬ್ಬರಾವ ಜೋಕೆ ಮಾಡಿದ್ದನು. ಇಪ್ಪತ್ತೆರಡು ವರ್ಷದ ಮಗನಾಗಿದ್ದರೂ ಅವನನ್ನು ಬಿಟ್ಟು ಆತ ಚಹ ಕುಡಿಯುತ್ತಿದ್ದಿಲ್ಲ. ಮಗನ ಮೇಲೆ ಅಷ್ಟು ಮೋಹ.

§ § § §

ಎಂಥ ಒಳ್ಳೆಯ ಹುಡುಗನೀತ! ತಾಯಿಯಂತೆಯೇ ಮಗನು. ಬಹಳ ಮೃದು ಸ್ವಭಾವ. ಹಿರಿಯ ಹುಡುಗ ಹಾಗಲ್ಲ. ಆತ ನನ್ನನ್ನು ಹೋಲುವ. ಈತ ಮಾತ್ರ ಅವಳ ಪ್ರತಿರೂಪ. ಹೋಗುವಾಗ ತನ್ನ ಆಕೃತಿ ಯೊಂದನ್ನು ಈ ಜಗತ್ತಿನಲ್ಲಿ ಇಟ್ಟು ಹೋದಳೇನೋ.

ಅಹುದು. ಮಕ್ಕಳಿಗಾಗಿ ಮಡಿಯುವದು ತಾಯಿಯ ಧರ್ಮ!

† † † †

ಸುಬ್ಬರಾವ ಹಾಸಿಗೆಯಿಂದ ಎದ್ದ. ಹೃದಯ ಭಾರವಾಗಿದ್ದಿತು. ಆದರೂ ಭಾವಚಿತ್ರದ ಎದುರಿಗೆ ಹೋಗಿನಿಂತ. ನೆಟ್ಟ ದೃಷ್ಟಿಯಿಂದ ನೋಡ ತೊಡಗಿದ. ಒಂದೊಂದೇ ದೃಶ್ಯಗಳು ಕಣ್ಣ ಮುಂದೆ ಸುಳಿಯ ತೊಡಗಿದುವು.

§ § § §

ಅವಳು ಮದುವೆಯಾಗಿ ಹೊಸದಾಗಿ ಮನೆಗೆ ಬಂದ ಕಾಲ. ಆಗಿನ ಮಧುರ ಕನಸುಗಳು. ಒಮ್ಮೆ ಕೆಲವು ದಿನಗಳವರೆಗೆ—ಅಂದರೆ ಬಹಳ ದಿನಗಳಲ್ಲ—ಮೂರು ದಿನಗಳ ಮಟ್ಟಿಗೆ ಮಾತ್ರ ಪರಸ್ಥಳಕ್ಕೆ ಹೋಗಬೇಕಾಗಿತ್ತು. ಗೋವೆಯಲ್ಲಿ ಒಂದು ಆಸ್ತಿಯ ಕೆಲಸವಿತ್ತು.

ಹೋಗುವ ಮುಂಚಿನ ದಿನ ಇರಳು ಬೆಳದಿಂಗಳಿನಲ್ಲಿ ಬಿಸಿಲು-ಮಚ್ಚಿನ ಮೇಲೆ ಕುಳಿತ ಸಮಯ. ಅವಳು ನನ್ನ ಹೆಗಲಮೇಲೆ ಒರಗಿದ್ದಳು. ಅವಳ ಬಿಸಿಯುಸಿರೊಂದು ಮೆಲ್ಲನೆ ನನ್ನ ಗಲ್ಲಕ್ಕೆ ತಾಗಿತು.

"ಏಕೆ ಯಮುನಾ, ಬಿಸಿಯುಸಿರು?"

ತುಸು ಹೊತ್ತು ಮೌನ.

"…. …. …. …."

"ನಾಳೆ ನಾನು ಹೊರಡಲೇ ಬೇಕು. ಆದರೆ……."

"ಆದರೇನು ಮತ್ತೆ?"

"ಒಂದೆರಡು ದಿನಗಳಲ್ಲಿ ತಿರುಗಿ ಬರುವೆನಲ್ಲ."

"ಒಂದು ತಾಸೆಂದರೆ ಆಗದ ಮಾತು. ದಿನಗಳಂತೆ!"

ಯಮುನೆಯ ಗಲ್ಲ ಉಬ್ಬಿದ್ದುವೀಗ.

"ಅಷ್ಟು ಮೋಹ ನೆಟ್ಟ ಗಲ್ಲ ಯಮುನಾ……."

"ನೀವೇನು ಗಂಡಸರು ಬಿರುಸುಗರುಳಿನವರು……."

"ಇಲ್ಲ; ಕೋರ್ಟಿನ ಕೆಲಸ ತೀರಿದೊಡನೆಯೇ ಬರುತ್ತೇನೆ……."

* * * *

ಸುಬ್ಬರಾವನ ಕೈಗಳು ಭಾವಚಿತ್ರದ ಕಟ್ಟುಗಳನ್ನು ತೀಡತೊಡಗಿದವು. ಅದರಲ್ಲಿ ಒಂದು ತರದ ಮಿಡಿತವಿದ್ದಿತು, ಹೃದಯದ ಮಿಡಿತವಿದ್ದಿತು. ಹೊರಗೆ ಯಾರದೋ ಹೆಜ್ಜೆಯ ಸಪ್ಪಳಾಯಿತು. ಹೊರಳಿ ನೋಡಿದ ಸುಬ್ಬರಾವ. ಕೇಳಿದ,—

"ಯಾರು, ಬಾಬಾಸಾಹೇಬ?"

"ಅಲ್ಲ, ನಾನು."

ಅಡಗಿಯವನ ಧ್ವನಿಯದು.

"ಯಾಕೊ?"

"ಚಹ ಆಗಿದೆ ಅಣ್ಣಾ........"

"ಬಾಬೂ ಎದ್ದು ಮುಖ ತೊಳೆದುಕೊಂಡನೇನೋ ?"

"ಇನ್ನೂ ಇಲ್ಲ........"

"ಇಲ್ಲ !"

ಜಗತ್ತಿನೊಳಗಿನ ಬೆರಗು ಎಂಬುದೆಲ್ಲ ಈ ಎರಡಕ್ಷರಗಳಲ್ಲಿಯೇ ತುಂಬಿ ಬಂದಂತಿದ್ದಿತು. ಬಾಬಾಸಾಹೇಬ ಇಷ್ಟು ಹೊತ್ತೇರುವವರೆಗೆ ಎಂದೂ ಮಲಗಿಕೊಂಡವನಲ್ಲ. ಸೂರ್ಯೋದಯಕ್ಕಿಂತ ಮುಂಚೆ ಎದ್ದು ವ್ಯಾಯಾಮ ಮಾಡುವ. ಸ್ನಾನ ಮಾಡಿ ನನ್ನನ್ನು ನಿತ್ಯ ಚಹಕ್ಕೆ ಕರೆಯಲು ಬರುವವ. ಇಂದು ಇನ್ನೂ ಎದ್ದಿಲ್ಲವೆ? ಪ್ರಕೃತಿ ಚನ್ನಾಗಿಲ್ಲಲಿಕ್ಕಿಲ್ಲವೆ? ಈ ವಿಚಾರ ಬಂದೊಡನೆ ಅವನ ಹೃದಯ ನಡುಗಿತು. ಮಗನ ಪ್ರಕೃತಿ ಕೆಟ್ಟಿರಬೇಕೆಂಬ ಕಲ್ಪನೆಯೂ ಕೂಡ ಅಷ್ಟು ಅಸಹ್ಯವಾಗಿತ್ತವನಿಗೆ. ಹಾಗೆಯೇ ಕೇಳಿದ.

"ಅವನ ಕೋಣೆಯ ಬಾಗಿಲು ತೆರೆದಿದೆಯೆ ?"

"ಇಲ್ಲ"

"ರಾತ್ರಿ ಎಲ್ಲಿಯಾದರೂ ಹೋಗಿದ್ದನೆ ?"

"ಇಲ್ಲ, ಬಹಳ ಹೊತ್ತಿನವರೆಗೆ ದೀಪಮಾತ್ರ ಇಟ್ಟಂತಿತ್ತು."

"ಓದುತ್ತಿರಬೇಕು ಕಾಲೇಜ ಅಭ್ಯಾಸ."

"ಯಾರೋ ಬಂದಿದ್ದರು........"

"ಯಾರವರು ?"

ಆಳು ಹೇಳಲಿಕ್ಕೆ ಅನುಮಾನಿಸಹತ್ತಿದ. ಆ ವಿಷಯವನ್ನೇ ಬದಲಿಸಲೆಂದು ಕೈಯೊಳಗೆ ಪಾಕೀಟೊಂದನ್ನು ಕೊಟ್ಟು ಹೇಳಿದ,—

"ಈಗ ಯಾರೋ ಒಬ್ಬರು ಬಂದು ತಮಗೆ ಮುಟ್ಟಿಸಲಿಕ್ಕೆಂದು ಕೊಟ್ಟು ಹೋದರು."

ಸುಬ್ಬರಾವ ಪಾಕೀಟು ಕೈಯಲ್ಲಿ ತಕ್ಕೊಂಡು ಕೆಳಗೆ ಮೇಲೆ ಹೊರಳಿಸಿ ನೋಡಿದ. ಯಾರಿಂದಲೋ ಬಂದ ಕಾಗದವಿರಬೇಕು. ವಿಳಾಸಿನ ಅಕ್ಷರ ಗುರುತಿನವಲ್ಲ. ಯಾರೋ ಹಳ್ಳಿಯಿಂದ ಕಳಿಸಿಕೊಟ್ಟಿರಬೇಕು.

"ಯಾರು ಕೊಟ್ಟರೊ ?" ಸುಬ್ಬರಾವ ಕೇಳಿದ.

" ಯಾವನೋ ಒಬ್ಬ ಹಳ್ಳಿಯ ಮನುಷ್ಯನಿರಬೇಕು. ನನಗೆ ಅವನ ಗುರುತಿಲ್ಲ."

" ಹೂಂ ! " ಎಂದ ಸುಬ್ಬರಾವ.

ವಿಚಾರ ಮತ್ತೆ ಮಗನ ಕಡೆಗೆ ಹೊರಳಿತು.

ಹುಡುಗ ಯಾರ ಯಾರ ಸಂಬಂಧ ಇಟ್ಟುಕೊಂಡು ಹಾಳಾಗುತ್ತಾನೋ? ಮನೆತನದ ಮೇಲೆಯೇ ದಾಳಿ ತಂದಿಡುವ. ಕಾಂಗ್ರೇಸ ಕೆಲಸಗಾರರೆಂದರೆ ಸರಕಾರದ ವೈ ಉರಿಯುವದು, ಅಂಥವರ ಸಂಗತಿ ಇವನಿಗೆ. ಇದು ದಿವಾಣ ಸಾಹೇಬರಿಗೆ ತಿಳಿದರೆ ಅವರು ನಮ್ಮ ಮನೆಗೆ ಕಾಲಿಟ್ಟಾರೆಯೆ?

ಅವರ ಕೃಪೆ ಕಳೆದುಕೊಂಡರೆ!

ಈ ಕಲ್ಪನೆಯೂ ಅವನಿಗೆ ಹೆದರಿಕೆಯನ್ನುಂಟುಮಾಡಿತು.

ದಿವಾಣ ಸಾಹೇಬರ ಆಶ್ರಯವಿದೆಯೆಂದೇ ಇಷ್ಟೆಲ್ಲ ನಮ್ಮ ಚಲ್ಲಾಟ. ಅವರ ವಕ್ರದೃಷ್ಟಿಯಾದರೆ ಬಾಬಾಸಾಹೇಬ ನಾಳೆ ಕೈಯಲ್ಲಿ ಪರಟೆ ಹಿಡಿದು ಮನೆ ಮನೆ ತಿರುಗಬೇಕಾದೀತು. ಸ್ವಂತ ಹುಟ್ಟಿದ ಮಗನಿರಲಿಕ್ಕೆ ಈ ದತ್ತಕ ಪುತ್ರನಿಗೆ ಆಸ್ತಿ ಹೇಗೆ ಸಿಕ್ಕೀತು? ಈ ಹುಚ್ಚ ಹುಡುಗನಿಗೆ ಇದರ ಅರಿವೂ ಇಲ್ಲ.

ಹಿಂದೆ ವಸಂತನಿಗೆ ಹೀಗೆಯೇ ಆಶ್ರಯ ಕೊಟ್ಟ. ಅವನು ಬರುಹೋಗುವುದು ಬೆಳೆಯಿತು. ಇರುಳು ಇಲ್ಲದ ಸಲ್ಲದ ವೇಳೆಯಲ್ಲಿ ಬರತೊಡಗಿದ. ಮೊದಮೊದಲು ನನಗೆ ಅದರ ಸುಳುವು ಹತ್ತಗೊಟ್ಟಿರಲಿಲ್ಲ. ರಾತ್ರಿ ನಾನು ಮಲಗಿದ ಮೇಲೆ ಹೊರಗಿನ ಬಾಗಿಲ ತೆಗೆಯಿಸಿ ಬಂದು ಬೆಳತನಕ ಇದ್ದು, ಉಂಡು ತಿಂದು ಹೋಗಬೇಕು.

ಆ ದಿನ—ಸಭೆಯಲ್ಲಿ ಭಾಷಣ ಮಾಡಿ, ದಿವಾಣರ ಕಣ್ಣಲ್ಲಿ ಮಣ್ಣೆರಚಿ ಬಂದ ದಿನ—ನಮ್ಮ ಬಂಗಲೆಯಲ್ಲಿಯೇ ಅಡಗಿ ಕುಳಿತಿದ್ದನಂತೆ. ಅಯ್ಯೋ! ಬೆಳ್ಳ ಬೆಳತನಕ ಪೋಲೀಸರು ಊರೆಲ್ಲ ತಿರುಗಿದರು, ಹುಡುಕಿದರು; ಮನೆ ಮನೆ ಶೋಧಿಸಿದರು. ಆದರೂ ಸಿಕ್ಕಲಿಲ್ಲ.

ಹೇಗೆ ಸಿಕ್ಕಬೇಕು, ದಿವಾಣ ಸಾಹೇಬರ ಗೆಳೆಯನ ಮನೆಯಲ್ಲಿಯೇ ಇದ್ದ ಮೇಲೆ?

§ § § §

ಅದೇನೋ ಆ ದಿನವೇ ದಿವಾಣರು ಬೇರೆ ನಮ್ಮ ಮನೆಗೆ ಬಂದಿದ್ದರು! ಕೆಳಗೆ ಅವರ ಕೂಡ ನಾನು ಮಾತಾಡುತ್ತ ಕುಳಿತಾಗ ಅಟ್ಟದ ಮೇಲೆ ಬಾಬಾ ಸಾಹೇಬನ ಕೂಡ ವಸಂತನ ಮಾತುಕತೆಗಳೇ! ಇದರ ಸುಳಿವು ಮನೆಯವನಾದ ನನಗೂ ಗೊತ್ತಿಲ್ಲ. ಮೂರುದಿನದ ಮೇಲೆ ತಿಳಿಯಿತು. ಎಷ್ಟು ಸಿಟ್ಟು ಮಾಡಿದೆ ಬಾಬಾಸಾಹೇಬನಿಗೆ! ಅಷ್ಟು ಕಟುವಾಗಿ ನಾನೆಂದೂ ಮಗನಿಗೆ ಮಾತಾಡಿರಲಿಲ್ಲ.

“ಬಾಬೂ!”

ಎಂದು ಕೂಗಿದೆ. ದನಿ ಕಠೋರವಾಗಿದ್ದಿತು. ಓಡಿಬಂದು ನಿಂತು ಬಾಬು ಕೇಳಿದ.

“ಏಕೆ, ಕರೆದಿರೇನು?”

“ಏನಿದು ಹುಚ್ಚುಚ್ಚಾರ?”

ವಸಂತ ಬಂದು ಹೋದ ಸುದ್ದಿ ನನಗೆ ಗೊತ್ತಾಗಿದೆಯೆಂಬದು ಅವನಿಗೆ ತಿಳಿದಿರಲಿಲ್ಲ. ನನ್ನ ಮುಖಮುದ್ರೆಯನ್ನು ನೋಡಿಯೇ ಆತ ಅವಾಕ್ಕಾದ.

“ನಿಮಗೆ ಯಾರು ಹೇಳಿದರು?”

“ದಿವಾಣರೂ ಪೋಲೀಸರೂ ಮಾತಾಡುತ್ತಿದ್ದಾರೆ. ನನಗೆ ಗೊತ್ತಾಗದೆ? ಹಾಗಾದರೆ ಮೊನ್ನೆ ವಸಂತ ನಮ್ಮಲ್ಲಿ ಇದ್ದದ್ದು ನಿಜವೆನ್ನು.”

“ಅಹುದು, ನಿಜವೇ. ಸಹಜ ಬಂದಿದ್ದ. ಆ ರಾತ್ರಿ ಇದ್ದುಹೋದ.”

“ಏನು ಕಾರಭಾರ ಮಾಡಿ ಬಂದಿದ್ದ ಗೊತ್ತಿತ್ತೊ?”

“ಕೆಟ್ಟ ಕೆಲಸವಲ್ಲ; ಸಭೆಯಲ್ಲಿ ಭಾಷಣ ಮಾಡಿ ಬಂದಿದ್ದ.”

“ಸರಕಾರದ ವಿರುದ್ಧ ಬಾಯಿಗೆ ಬಂದದ್ದನ್ನು ಬೊಗಳಿ ಬಂದಿದ್ದ!”

“ಸರಕಾರದ ವಿರುದ್ಧವೇನಲ್ಲ. ಅವರ ಆಡಳಿತೆಯ ವಿರುದ್ಧ ಮಾತಾಡಿದ್ದ. ರಾಜೇಸಾಹೇಬರ ಮೇಲೆ ವೈಯುಕ್ತಿಕ ಸಿಟ್ಟೇನೂ ಅವನಿಗೆ ಇಲ್ಲ.”

“ಕಾಲೇಜಿನ ಅಭ್ಯಾಸ ಬಿಟ್ಟು, ಇಂಥವರ ಸಂಗತಿ ನಿನಗೇಕೆ?”

“ದೇಶಕ್ಕೆ ಸ್ವಾತಂತ್ರ್ಯವಿಲ್ಲದವಿನಾ ಈ ಅಭ್ಯಾಸದಿಂದ ಏನಾಗಬೇಕಾಗಿದೆ?”

" ಹುಚ್ಚು ಹುಡುಗ. ನಿನಗೇನೂ ತಿಳಿಯುವದಿಲ್ಲ. ಇನ್ನೊಮ್ಮೆ ಅವನಿಗೆ ಇಲ್ಲಿ ಕಾಲಿಡಬೇಡವೆಂದು ಹೇಳು. ತಿಳಿಯಿತೆ ? "

ಎಂದೇನೇನೋ ಬಹಳ ಹೊತ್ತಿನವರೆಗೆ ಬೆದರಿಸಿದೆ. ಆ ದಿನ ನನ್ನ ಜೊತೆಗೆ ಊಟಕ್ಕೂ ಕೂಡಲಿಲ್ಲವಾತ. ಹುಡುಗ ಸಲ್ಲದ ಕೆಲಸ ಮಾಡಿದ್ದಾನೆ. ನಾಚಿಕೊಂಡಿರಬೇಕು. ಇರಲಿ ಎಂದುಕೊಂಡು, ನಾನೂ ಅವನನ್ನು ಕರೆಯಲು ಹೋಗಲಿಲ್ಲ. ಅಷ್ಟು ಮೃದು ಸ್ವಭಾವ ಅವನದು.

ಅಂದರೂ ವಸಂತನ ಹಾವಳಿ ತಪ್ಪಲಿಲ್ಲ. ಆ ಮೇಲೆ ಯುಕ್ತಿ ಹೂಡಬೇಕಾಯಿತು. ಹೂಡಿದೆ. ಉಪಟಳ ಕಳೆದೆ. ಈಗ ಮತ್ತಾರು ಬರತೊಡಗಿದರೊ ?

" ರಾತ್ರಿ ಯಾರು ಬಂದಿದ್ದರೋ ? "

"…. …. …. …."

" ಅನುಮಾನಿಸಬೇಡ, ಇದ್ದುದನ್ನು ಹೇಳಿಬಿಡು. "

" ಸು….ಮಾ…. "

" ಹೀಗೋ, ನಮ್ಮ ಸುಮಿತ್ರಾ ಬಂದಿದ್ದಳೊ ? ಇದನ್ನು ಹೇಳಲಿಕ್ಕೆ ಇಷ್ಟೇಕೆ ಅನುಮಾನ ? "

ಈಗ ಸುಬ್ಬರಾವನ ಮುಖ ಅರಳಿತ್ತು.

ಸುಮಾ ಎಷ್ಟು ಒಳ್ಳೆಯ ಹುಡಿಗೆ! ಅವಳಿರುವಾಗ ಇಂಥ ಯೋಗ ಒದಗಿಬರಲಿಲ್ಲ. ಆಕೆ ಹೆಣ್ಮಕ್ಕಳನ್ನು ಬಹಳ ಪ್ರೀತಿಸುತ್ತಿದ್ದಳು. ಎರಡನೆಯ ಬಸುರಿನಲ್ಲಿ ಹೆಣ್ಣಿರಬಹುದೆಂದು ಬಯಸಿದ್ದಳೂ ಕೂಡ. ಆದರೆ ಅವಳ ಇಚ್ಛೆ ಯಾವುದೂ ಈಡೇರಲಿಲ್ಲ. ಅವಳು ಹೋದ ಮೂರು ವರ್ಷದ ಮೇಲೆ ಈ ಸುಮಾ ನಮ್ಮಲ್ಲಿ ಬಂದಳು. ಪರದೇಶಿ ಕೂಸೆಂದು ಇಟ್ಟುಕೊಂಡೆ. ಇಲ್ಲಿಯೇ ಬೆಳೆದಳು. ಮನೆಯನ್ನು ತುಂಬಿದಳು. ಬಾಬಾಸಾಹೇಬನಿಗೆ ಜೊತೆಯಾಗಿದ್ದಳು. ಎಷ್ಟಾದರೂ ಹೆಣ್ಣು ಜೀವಿಗೆ ಕರುಳು ಹೆಚ್ಚು. ಈಗಾದರೂ ದಿನ ಬಿಟ್ಟು ದಿನಕ್ಕೆ ಮನೆಗೆ ಬರುತ್ತಿದೆ ಹುಡಿಗೆ. ನನ್ನ ಮನಸ್ಸೂ ಅಂಥದೇ. ಒಮ್ಮೆ ಒಬ್ಬರ ಮೇಲೆ ಮನಸ್ಸು ಒಲಿಯಿತೆಂದರೆ ತೀರಿತು. ಅಗಲಿರಲು ಆಗದು. ಅದಕ್ಕೆಂದೇ ಮನೆಯ ಕರಣಿಕ ಸದಾನಂದನಿಗೇ ಮದುವೆ ಮಾಡಿಕೊಟ್ಟು ಹತ್ತರಸೇ ಇರುವಂತೆ ಮಾಡಿದೆ.

ಬಾಬಾಸಾಹೇಬನ ಹೃದಯ ನನಗಿಂತ ಇನ್ನೂ ಕೋಮಲ. ಅವಳನ್ನು ಮದುವೆ ಮಾಡಿಕೊಡಬೇಕೆಂದೊಡನೆಯೇ ಎಷ್ಟು ಕಳವಳಗೊಂಡ, ಮರುಗಿದ, ನೋದುಕೊಂಡ. ಎರಡು ದಿನ ಊಟ ಕೂಡ ಚೆನ್ನಾಗಿ ಮಾಡಲಿಲ್ಲ. ಅವನ ಕರುಳು ಬಲು ಬಲು ಮೃದು. ಬೆಣ್ಣೆಗಿಂತ ಮೃದು.

ಸುಬ್ಬರಾವನ ತಲೆಯಲ್ಲಿ ವಿಚಾರಗಳು ಸುತ್ತುತ್ತಿದ್ದಂತೆಯೇ ಅವನ ಕೈಗಳು ಪಾಕೀಟನ್ನು ಹರಿದು ಕಣ್ಣೆದುರಿಗೆ ಹಿಡಿದುವು.

" ನೀನು ಪ್ರತಿಸರಕಾರದ ಪ್ರತಿನಿಧಿಯಾದ ವಸಂತನನ್ನು ಮೋಸತನದಿಂದ ಹಿಡಿದು ಕೊಟ್ಟದ್ದಕ್ಕಾಗಿ ನಿನಗೆ ಹನ್ನೊಂದನೆಯ ಕಲಮಿನ ಶಿಕ್ಷೆ ವಿಧಿಸಿದೆ. ಮೇಲೆ ಐನೂರು ರೂಪಾಯಿ ದಂಡ. "

" ಆಂ ! " ಎಂದು ಉದ್ಗರಿಸಿದ ಸುಬ್ಬರಾವ. ಕಣ್ಣಿಗೆ ಕತ್ತಲೆ ಕವಿದಂತಾಯಿತು. ನೆಲಕ್ಕೆ ಪಟ್ಟನೆ ಕುಳಿತ. ಒಂದು ಕ್ಷಣ ಏನೂ ಹೊಳೆಯದಾಯಿತು. ಮರುಕ್ಷಣದಲ್ಲಿ,—

ನನಗೆ ಶಿಕ್ಷೆ ವಿಧಿಸುವರಂತೆ! ಹಃ! ಹಃ! ಹಃ! ಯಾವ ಗಂಡಸವನು ನನಗೆ ಶಿಕ್ಷೆ ವಿಧಿಸುವಂತಹನು? ಅಂಥ ಶೂರನಿದ್ದರೆ ವಸಂತ ಬೆಕ್ಕಿನಂತೆ ಪೋಲೀಸರ ಕೈಯೊಳಗೇಕೆ ಸಿಕ್ಕುತ್ತಿದ್ದ ? ಯಾವುದೋ ಹುಚ್ಚ ಬರೆದಿರುವದಾಯಿತು.

ಮೇಲೆ ಪ್ರತಿಸರಕಾರದ ಮುದ್ರೆ ಬೇರೆ.

ಎಲ್ಲ ಆ ಸುನಂದೆಯ ಆಟ. ಇಂಥದಕ್ಕೆಲ್ಲ ನಾನು ಅಂಜುವೆನೇ ? ಮೊರ ಬಡಿದು ಬೆಕ್ಕನ್ನು ಅಂಜಿಸಿದಂತೆ ಮಾಡುವರು. ಇಲ್ಲಿ ಈ ಇನಾಮದಾರ ಬೆಕ್ಕಲ್ಲ. ಹುಲಿ ಎಂಬುದು ಗೊತ್ತಿಲ್ಲ ಅವರಿಗೆ.

ಕೋರ್ಟಿನಲ್ಲಿ ಸೋತು ಹೀಗೆ ಇಲ್ಲದ ಬೆದರಿಕೆ ಹಾಕಿದರೆ ಸೊಪ್ಪು ಹಾಕುವರೆ ?

ಹಃ ! ಹಃ ! ಹಃ ! ಹುಚ್ಚುಗಳು !

ಬಾಬಾಸಾಹೇಬನಿಗೆ ಸಿಕ್ಕಿದ ಆಸ್ತಿ ಎತ್ತಿಹಾಕಬೇಕೆನ್ನುವರು ! ಹೀಗೆ ಆಸ್ತಿ ಪಾಸ್ತಿ ಸಿಗುವಂತಿದ್ದರೆ ದಿನಕ್ಕೊಬ್ಬ ಸೂಳೆ ಸಂಪಾದಿಸಿಯಾಳು.

*   *   *   *

" ಹೋಗು, ಬಾಗಿಲ ತೆರೆದು ನೋಡು...."

ಆಳು ನಾಲ್ಕು ಹೆಜ್ಜೆ ಹೋಗುವಷ್ಟರಲ್ಲಿ ಸುಬ್ಬರಾವ ಕರೆದು ಹೇಳಿದ.

" ಬೇಡ, ನಾನೇ ನೋಡುವೆ. ನೀನೆಲ್ಲಿಯಾದರೂ ಜೋರಿನಿಂದ ಬಾಗಿಲ ಬಡಿದೆಯಾದರೆ ನಿದ್ರೆಯಲ್ಲಿ ಬಾಬಾಸಾಹೇಬ ಹೆದರಬಹುದು. ನಿಲ್ಲು ನಾನೇ ಹೋಗುವೆ "

ಎಂದು ಸುಬ್ಬರಾವ ನಡೆದ. ಬಾಬಾಸಾಹೇಬನ ಕೋಣೆಯ ಕಡೆಗೆ ಸಾಗಿದ. ಗೋಡೆಯ ಮೇಲೆ ತೂಗು ಹಾಕಿದ ಮಗನ ಚಿಕ್ಕಂದಿನ ಭಾವ ಚಿತ್ರದ ಕಡೆಗೆ ಅವನ ದೃಷ್ಟಿ ಓಡಿತು.

† † † †

ಚಿಕ್ಕಮಗು !

ಆಗ ಬಾಬಾಸಾಹೇಬ ನನ್ನ ಹಾಸಿಗೆಯಲ್ಲಿಯೇ ಮಲಗುತ್ತಿದ್ದ. ಊಟ ತಿನಿಸು ನನ್ನ ಎಲೆಯಲ್ಲಿಯೇ. ಯಾತಕ್ಕೂ ನಾನೇ ಬೇಕವನಿಗೆ. ಇನ್ನಾರು ಮಾಡಿಸಿದರೂ ನಡೆಯದು. ಇಂದು ಅನ್ಯರು ಎಚ್ಚರಿಸಿದರೆ ಹೇಗೆ ?

ಎಂದುಕೊಂಡು ಮೆಲ್ಲಗೆ ಕೋಣೆಯ ಬಾಗಿಲ ಬಳಿಗೆ ಹೋದ. ಗಡಿಯಾರದಲ್ಲಿ ಎಂಟು ಹೊಡೆದುದು ಕೇಳಿಸಿತು.

ಎಂಟಾಯಿತೆ ? ಇಷ್ಟು ಹೊತ್ತು ಏರುವವರೆಗೆ ಎಂದೂ ಮಲಗುವವನಲ್ಲ ಹುಡುಗ. ಚಿಕ್ಕವನಿರುವಾಗಲೂ ಕೂಡ. ನಾನಿನ್ನೂ ಹಾಸಿಗೆಯಲ್ಲಿ ಹೊರಳಾಡುತ್ತಿರುವಾಗಲೇ ಎದ್ದು ಕೋಣೆಯ ಹೊರಗೆ ಹೋಗಿ ಬಿಡುತ್ತಿದ್ದ.

ಒಂದು ದಿನ ನಸುಕಿನಲ್ಲಿ ತಂಗಾಳಿ ತೀಡಿತು. ಎಚ್ಚರಾಯಿತು. ಹುಡುಗ ಮೈತೆರೆದುಕೊಂಡು ಮಲಗುವನೆಂಬ ಕಲ್ಪನೆ ತಲೆಯಲ್ಲಿ ಸುಳಿಯಿತು. ಹೊದಿಸಲು ಕೈನೀಡಿದೆ. ಆದರೆ ಅಲ್ಲೆಲ್ಲಿದ್ದಾನೆ ? ಎದೆ ಧಸ್ಸೆಂದಿತು. ಇನ್ನೂ ನಸುಕು. ಹೊರಗೆಲ್ಲ ದೂರದವರೆಗೆ ಮಂಜು ಮುಸುಕಿದೆ. ಅದರಲ್ಲೂ ವಿಪರೀತ ಚಳಿ. ಇಂಥ ಚಳಿಯಲ್ಲಿ ಮಗು ಎದ್ದು ಎಲ್ಲಿ ಹೋದನೆಂದು ದಡಬಡಿಸಿ ಎದ್ದೆ. ಸುತ್ತಲೂ ನೋಡಿದೆ. ಅಲ್ಲೇನಿದೆ ? ಎಲ್ಲಿಯೂ ಇಲ್ಲ. ಅತ್ತಿತ್ತ ನೋಡಿದೆ ಕೋಣೆಯ ಬಾಗಿಲು ತೆರೆದಿತ್ತು. ಹೊರಗೆ ಬಂದೆ. ಆಳಿಗೆ ಕೇಳಿದೆ. ಅವನಿಗೂ ಸುದ್ದಿಯಿಲ್ಲ. ಸಮಾಜಿಯ ಕೋಣೆಯಲ್ಲಿ ಹಣಿಕಿಕ್ಕಿದೆ. ಆತ ಓದುತ್ತ ಕುಳಿತಿದ್ದ. ಪರೀಕ್ಷೆಯ ಅಭ್ಯಾಸ.

" ಬಾಬಾಸಾಹೇಬ ಬಂದಾನೇನೋ? " ಎಂದು ಕೇಳಿದೆ ಗಾಬರಿಯಿಂದ.

" ಇಲ್ಲ! ಇನ್ನೂ ಮಲಗಿರಬೇಕವನು " ಎಂದನಾತ.

" ಹತ್ತಿರ ಮಲಗಿಸಿಕೊಂಡವ ಹುಡುಕಲು ಬರುವನೆ "

ಎಂದು ಮನದಲ್ಲಿಯೇ ಎಂದುಕೊಂಡು ಹೊರಬಿದ್ದೆ. ತೆರಳಿದೆ ಮತ್ತೆ ತಿರುಗಿ ಮಲಗುವ ಕೋಣೆಗೆ ಬಂದೆ. ಹೊತ್ತುಕೊಳ್ಳುವ ಶಾಲನ್ನೆತ್ತಿ ನೋಡಿದೆ. ಅಲ್ಲೇ ಎಲ್ಲಿಯಾದರೂ ಒತ್ತಟ್ಟಿಗೆ ಮುದುರಿಕೊಂಡು ಮಲಗಿರುವನೇನೋ ಎಂದು. ಇಲ್ಲ, ಎಲ್ಲಿಯೂ ಇಲ್ಲ. ಹೊಟ್ಟೆಯಲ್ಲಿ ಉರಿಬಿದ್ದಂತಾಯಿತು. ಎಲ್ಲಿ ಹೋಗಿರಬೇಕು ಹುಡುಗ? ದತ್ತಕ ಮನೆಯವರು ವೈರಿಗಳು! ಆ ಸುನಂದಾ ಏನಾದರೂ ಮಾಡಿಸಿರಬಹುದೇ? ಹುಡುಗನನ್ನು ಒಯ್ಯುವವರೆಗೆ ನನಗೆಂಥ ಕಾಳುನಿದ್ರೆ ಹತ್ತಿದ್ದಿತೋ. ಥೂ! ಹಾಳಾಗಿ ಹೋಗಲಿ ಆ ಇಸ್ಟೇಟು. ತನ್ನ ಮಗನಿಗೇ ಆಕೆ ತಕ್ಕೊಳ್ಳಲಿ. ಆದರೆ ನನ್ನ ಹುಡುಗನನ್ನು ತಂದುಕೊಟ್ಟರೆ ಸಾಕು, ಎಂದುಕೊಂಡು ಹೊರಗೆ ಮಲಗುವ ಆಳನ್ನು ಕರೆದೆ.

" ರಾತ್ರಿ ಬಾಗಿಲ ಯಾರು ತೆರೆದಿದ್ದರು ?" ಎಂದು ಗದರಿಸಿದೆ. ಆಳು ನಡುಗಿದ. " ಯ್ಹಾರೂ ಇಲ್ಲ ಮಹಾರಾಜ" ಎಂದ.

ಅಂಥ ಚಳಿಯಲ್ಲಿಯೂ ಅವನ ಮೈ ಬೆವತಿತ್ತು.

" ಏನು ಬೊಗಳುವೆ ನೆಟ್ಟಗೆ ಹೇಳು" ಎಂದು ತಿರುಗಿ ಹರಿಹಾಯ್ದೆ. ಹೊಟ್ಟೆಯ ಕರುಳು ಸುಮ್ಮನೇ ಕೂಡಗೊಡುವುದೇ ?

" ಇಲ್ಲ ದೇವರು...."

" ರಾತ್ರಿ ಯಾರು ಕರೆದರೂ ಮೊದಲು ನನ್ನನ್ನು ಎಚ್ಚರಿಸಬೇಕೆಂದು ಹೇಳಲಿಲ್ಲವೆ ?"

" ನಿಮಗೆ ಹೇಳದೆ ಎಂದೂ ರಾತ್ರಿ ಬಾಗಿಲ ತೆಗೆಯುವದಿಲ್ಲ."

" ಹೌದೌದು. ಏಕೆ ಬಾಗಿಲ ತೆರೆದೆ ನನ್ನನ್ನು ಕೇಳದೆ ? "

ಸಿಟ್ಟಿನ ಭರದಲ್ಲಿ ಅವನಿಗೆ ಪೂರ್ಣ ಮಾತಾಡಗೊಡದೆ ಕೇಳಿದೆ.

" ಇಲ್ಲ; ನಾನು ತೆರೆದಿಲ್ಲ." ತೊದಲುತ್ತ ನುಡಿದನಾತ.

" ಹಾಗಾದರೆ ಎಲ್ಲಿಂದ ಒಳಗೆ ಬಂದರೋ ಅವರು ? " ಎಂದು ಗುಡುಗಿದೆ.

" ಯಾರು ? "

ಗಾಬರಿ ಬೆರಗುಗಳಿಂದ ಸುತ್ತಲೂ ನೋಡಿದನಾತ.

" ಇಂಥ ಸೋಗು ನನಗೆಲ್ಲ ಗೊತ್ತಿದೆ. ಎಷ್ಟೋ ಜನರ ಹುಟ್ಟುಹಬ್ಬ ಮಾಡಿದ್ದೇನೆ ನಾನು. ತಿಳಿಯಿತೋ ? ಒಳ್ಳೆಯ ಮಾತಿನಿಂದ ಹೇಳು ! ಹುಡುಗನನ್ನು ಯಾರೊಯ್ದರೆಂಬುದನ್ನು. ಇಲ್ಲವಾದರೆ ನೋಡು, ಪೋಲೀಸರ ಕೈಯಲ್ಲಿ ಕೊಟ್ಟು, ನಿನ್ನ ತೊಗಲ ಸುಲಿಸುವೆ. "

" ಹುಡುಗ ! ಒಯ್ದರು ! " ಎಂದ ಆತ ತಡವರಿಸುತ್ತ.

ಏರಿ ಮೈಮೇಲೆ ಹೋದೆ ನಾನು. ಕಪಾಳಕ್ಕೆರಡು ಬಿಗಿದೆ.

ಅಷ್ಟರಲ್ಲಿ ಎದುರಿನಿಂದ ಕೊಟ್ಟಿಗೆಯೊಳಗಿನ ಆಳು ಬಾಬಾಸಾಹೇಬನನ್ನು ಎತ್ತಿಕೊಂಡು ಬಂದ.

" ಇನ್ನೊಂದು ತುಸು ನೋಡದಿದ್ದರ ...ಕಾಗರ ಕಾಲ ತುಳಿತಿತ್ತ ನೋಡಿರಿ ! "

ಎಂದು ಮೃದುವಾಗಿ ಮಗುವಿನ ಮೈಮೇಲೆ ಕೈಯಾಡಿಸುತ್ತ ಹೇಳಿದ.

ಆಳಿನ ಮೇಲಿನ ಸಿಟ್ಟು ಮಗುವಿನ ಮೇಲೆ ಒಮ್ಮೆಲೇ ಹೊರಳಿತು. ನಸುಕಿನಲ್ಲಿ ಎದ್ದು ಅಲ್ಲೇಕೆ ಹೋಗಿರುವನೆಂದು ರೇಗಿದೆ. ಆದರೂ ಸುರಕ್ಷಿತವಾಗಿದ್ದುದಕ್ಕೆ ಸಂತಸವಾಗದಿರಲಿಲ್ಲ. ಕೂಡಲೆ ಎತ್ತಿ ಮುದ್ದಿಟ್ಟೆ. ಎಂಥ ಅನರ್ಥಕ್ಕೆ ಕಾರಣವಾಗಿದ್ದನೀತ. ಒಂದು ಕ್ಷಣದಲ್ಲಿ ಎಂಥೆಂಥ ಕಲ್ಪನೆಗಳೆಲ್ಲ ತಲೆಯಲ್ಲಿ ಸುಳಿದು ಹೋದುವು.

ಮೆಲ್ಲಗೆ ಬಾಗಿಲ ಮೇಲೆ ಕೈಯಿಟ್ಟ ಸುಬ್ಬರಾವ. " ನೂಕಲೆ ? " ಎಂದು ತನ್ನಲ್ಲಿಯೇ ತಾನು ಕೇಳಿಕೊಂಡ.

ಹುಡುಗ ಹಾಸಿಗೆಯಲ್ಲಿ ಅಸ್ತವ್ಯಸ್ತವಾಗಿ ಮಲಗಿಕೊಂಡಿದ್ದರೆ ನಾಚಿಕೊಂಡಾನಲ್ಲ. ಮಗನಾದರೇನಾಯಿತು ? ಅವನ ಕೋಣೆಯಲ್ಲಿ ಹೋಗುವದಾದರೂ ಅಕಸ್ಮಾತ್ ಹೀಗೆ ಪ್ರವೇಶಿಸುವುದು ಅನುಚಿತ. ಇಲ್ಲಿಂದಲೇ ಕೂಗಿ ಕರೆಯುವೆ. ಅದೇ ಸಮಂಜಸ. ಪರೀಕ್ಷೆಯ ಅಭ್ಯಾಸ. ಇರುಳೆಲ್ಲ ಓದಿ ಈಗ ಮಲಗಿದ್ದರೆ ?

ರಾತ್ರಿ ಸುಮಾ ಜೇರಿ ಬಂದು ಬಹಳ ಹೊತ್ತು ಕುಳಿತಿದ್ದಳಂತೆ. ಸಣ್ಣಂದಿನಿಂದ ಕೂಡಿ ಆಡಿದ ಜೀವಗಳು. ಮಾತಾಡುತ್ತ ಕುಳಿತಿರಬೇಕು. ಈಗಿನ ತರುಣರಿಗೇನು? ಹರಟೆಗೆ ಕುಳಿತರೆಂದರೆ ವೇಳೆಯ ಪರಿವೆ ಉಳಿಯು ವದೇ? ಮಾತಿಗೆ ತುದಿ ಮೊದಲಿರುವದೆ? ಒಮ್ಮೆ ಆರಂಭವಾಯಿತೆಂದರೆ ತೀರಿತು. ಕೂಲಿಕಾರನ ಕರುಳಿನ ಕೂಗನ್ನು ಹಿಡಿದು ವ್ಹಾಯಿಸರಾಯನ ರೇಡಿಯೋ ಭಾಷಣಗಳವರೆಗೆ ಎಲ್ಲ ವಿಷಯುಗಳು ಅದರಲ್ಲಿ ಬಂದು ಹೋಗ ತಕ್ಕುವೆ? ವೇಳೆ ಗೊತ್ತಿಲ್ಲ, ಹೊತ್ತು ಗೊತ್ತಿಲ್ಲ. ಅದರಲ್ಲೂ ಸುಮಾ ಬಾಬಾ ಸಾಹೇಬರು ಕೂಡಿದರೆಂದರೆ ಕೇಳುವುದೇ ಬೇಡ. ಇಬ್ಬರೂ ಗಾಂಧಿ ಭಕ್ತರು. ದೇಶ ಸೇವಕರು. ಹುಚ್ಚು ಹುಡುಗರು, ಈ ಗಾಂಧಿಯ ಬೆನ್ನು ಹತ್ತಿ ಕೆಟ್ಟು ಹೋದರು. ಆ ಒರಟು ಅರಿವೆಯನ್ನು ಸುಮಾ ತೊಟ್ಟರೆ ಚಂದ ಕಾಣು ವುದೇ? ಎಂಥ ಸುಕುಮಾರ ಗೇಹ. ಅದಕ್ಕೆ ಇಂಥ ಕೈನೂಲಿನ ಅರಿವೆ. ಜಗತ್ತಿನಲ್ಲಿ ದೇವರು ಇಂಥ ಸುಖ-ಸೌಭಾಗ್ಯಗಳನ್ನು ಕಟ್ಟಿಸಿದನೇತಕ್ಕೆ? ನಮ್ಮಂತಹರು ಭೋಗಿಸಲಿಕ್ಕೆಂದಲ್ಲವೆ? ಅದನ್ನೆಲ್ಲ ಬಿಟ್ಟು ಬೈರಾಗಿಗಳಂತೆ ಇರುವದೆಂದರೇನು? ಏನಿದೆ ಈ ಜನ್ಮದಲ್ಲಿ ಅರ್ಥ?

ಈ ಹುಡುಗರಿಗೆ ಎಷ್ಟು ಹೇಳಿದರೂ ತಿಳುವಳಿಕೆಯೇ ಇಲ್ಲ. ಯಾವುದೋ ಜನ್ಮದಲ್ಲಿ ಪುಣ್ಯಮಾಡಿದ್ದಕ್ಕೆ ಸಿರಿವಂತರ ಮನೆಯಲ್ಲಿ ಹುಟ್ಟಿ ದಿದ್ದರೂ ಬೆಳೆದಿದ್ದಾಳೆ ಸುಮಾ. ತಿಂಗಳಿಗೆ ನೂರಾರು ರೂಪಾಯಿ ಸಂಬಳ ವಿರುವ ಮ್ಯಾನೇಜರನ ಮಡದಿಯಾಗಿದ್ದಾಳೆ.

ಸದಾನಂದ ಹೆಂಡತಿ ಉಡಲಿ ತೊಡಲಿ ಎಂದು ಎಷ್ಟು ಆಕ್ಕಸ ಬಡು ವನು. ಒಂದೆರಡು ಸಲ ನನ್ನಿಂದಲೂ ಹೇಳಿಸಿ ನೋಡಿದ. ಆದರೆ ಹುಚ್ಚ ಹುಡಿಗೆ ಎನ್ನುವಳು,—

“ಭಾರತದ ಬಡ ಮಹಿಳೆಯರಿಗೆ ಮೈ ಮುಚ್ಚಿಕೊಂಡು, ಮಾನ ಕಾಯ್ದುಕೊಳ್ಳುವಷ್ಟು ಅರಿವೆ ಸಿಕ್ಕುವದಿಲ್ಲ. ನನಗೇಕೆ ಹತ್ತೆಂಟು ಸೀರೆಗಳು ಬೇಕು?”

“ಅವರ ಕರ್ಮ ಅವರು ಭೋಗಿಸುವರು...” ಪತಿಯ ಸಮಾಧಾನ ವಿದು.

“ ಅವರ ಕರ್ಮವಲ್ಲ. ಸಿರಿವಂತರ ಕರ್ಮ. ಅವರನ್ನು ಈ ಸ್ಥಿತಿಯಲ್ಲಿ ಇಟ್ಟಿದೆ. ದೇವರು ಆರ್ಥಿಕ ವ್ಯವಸ್ಥೆ ಮಾಡಲಿಲ್ಲ. ಆಡಳಿತೆ ಮಾಡಿದೆ. ಸಿರಿವಂತರ ಆಡಳಿತೆ....”

ಹೀಗೆ ತಲೆಯಲ್ಲಿ ಏನೇನೋ ಹುಚ್ಚು ತುಂಬಿಕೊಂಡಿರುವಳು. ನಮ್ಮ ಬಾಬಾಸಾಹೇಬನ ಸಂಗತಿಯ ಫಲ. ಇದನ್ನರಿತೇ ಸದಾನಂದ ಆಗಾಗ ನನ್ನ ಮುಂದೆ ಬಾಬಾಸಾಹೇಬನ ವಿರುದ್ಧ ದೂರು ತರುತ್ತಿರುವುದು. ದಿನ ದಿನಕ್ಕೆ ಅವನ ಮನಸ್ಸು ಬಾಬಾವಿನ ಬಗ್ಗೆ ಕಲುಷಿತವಾಗತೊಡಗಿದೆ.

ನಿಲ್ಲು. ಇನ್ನು ಒಬ್ಬರ ಭೆಟ್ಟಿ ಇನ್ನೊಬ್ಬರಿಗೆ ಆಗದಂತೆ ಇಡುವೆ.

ಇದೇನು ? ಬೆಳತನಕ ಹರಟೆ ಹೊಡೆಯುವದು ಹೀಗೆ ಹೊತ್ತೇರುವವರೆಗೆ ಮಲಗುವದು.

ಎಬ್ಬಿಸಿಬಿಡುವೆ. ಬಾಗಿಲ ತೆರೆದು ಹೋಗಿಯೇ ಎಚ್ಚರಿಸುವೆ. ಒಳಗೆ ಚಿಲಕ ಇರುವದೇನೋ. ಇಲ್ಲಿಂದಲೇ ಕೂಗುವೆ.

“ ಬಾಬಾಸಾಹೇಬ....ಬಾಬು....ಬಾಬಾ....ಬಾಬಾಸಾಹೇಬ ”

ಜೋರಿನಿಂದ ಕೂಗಲೇ ?

ಅರನಿದ್ದೆಯಾದೀತೇನು ?

ಬೇಡ; ಈಗ ನಾನು ಎಚ್ಚರಿಸುವದೇ ಬೇಡ. ಸುಲೋಚನೆಗೆ ಹೇಳುವೆ. ಅವಳೇ ಎಬ್ಬಿಸಲಿ.

ನನ್ನಿಂದ ಎಬ್ಬಿಸುವದಾಗದು.

ಬಾಬಾಸಾಹೇಬನನ್ನು ನಾನು ಅಕ್ಕರತೆಯಿಂದ ಜೋಕೆ ಮಾಡಿದರೇನಾಯ್ತು ? ಎಂದು ಅವಳು ಮದುವೆಯಾದಳೋ ಅಂದೇ ಸುಲೋಚನೆಗೆ ಬಾಬಾಸಾಹೇಬನನ್ನು ಒಪ್ಪಿಸಿಬಿಟ್ಟೆ. ಅವಳೇ ಅವನ ಯೋಗಕ್ಷೇಮವನ್ನು ನೋಡುವವಳು. ಅಲ್ಲವೆ ?

ಎಂದು ಯೋಚಿಸಿ ಹೊರಳಿದ ಸುಬ್ಬರಾವ.

ಅವಳೇನು ನೋಡುವಳು ತನ್ನ ತಲೆ. ಅವನ ಕೂದಲೆಳೆಗೂ ನೋವಾಗದಂತೆ ಇಲ್ಲಿಯವರೆಗೆ ನಾನು ನೋಡಿಕೊಂಡವ. ನಿನ್ನೆ ಮೊನ್ನೆ ಬಂದವಳಿಗೇನು ಅಧಿಕಾರ ? ಮದುವೆಯಾದನೆಂದರೆ ಅವನೇನು ಅವಳವನಾದನೆ ?

+ + + +

" ಮಾಮಾ ನೀವು ಚಹ ತಕ್ಕೊಳ್ಳಬರ್ರಿ !"

ಸುಲೋಚನೆ ಒಳಗಿನಿಂದ ಕರೆದಳು.

ಒಮ್ಮೆಲೇ ಸಿಟ್ಟು ಬಂತು ಸುಬ್ಬರಾವನಿಗೆ. ನೋಡಿದೆಯಾ ಇವಳ ಅವಿನಯ ವರ್ತನೆ. ಎಂದಾದರೂ ಮಗನನ್ನು ಬಿಟ್ಟು, ನಾನೊಬ್ಬನೇ ಚಹ ತಕ್ಕೊಂಡಿರುವೆನೆ? ಗೊತ್ತಿದ್ದರೂ ಕರೆಯುವಳು ಏನನ್ನಬೇಕಿವಳಿಗೆ?

" ನಾನೊಬ್ಬನೇ! "

ಬೆರಗು ಬಿಗುವುಗಳಿಂದ ಸುಬ್ಬರಾವ ಕೇಳಿದ.

ಅವರಿದ್ದಾಗ ತಕ್ಕೊಳ್ಳುವರಲ್ಲ. ಬೆಳತನಕ ಬೇಕಾದವರೊಡನೆ ಹರಟೆ ಹೊಡೆಯುವದು. ಈಗ ಹೊತ್ತೇರುವವರೆಗೆ ಮಲಗಿಕೊಳ್ಳುವದು. "

ಎಂದಳಾಸೊಸೆ ಸುಲೋಚನೆ. ಅವಳ ಸ್ವರದಲ್ಲಿ ಎಂದಿಲ್ಲದ ಮಾತ್ಸರ್ಯ ವಿತ್ತು. ಸಿಡುಕಿತ್ತು.

ಸುಬ್ಬರಾವ ಚಕಿತನಾಗಿ ಕೊಂಚಕಾಲ ನಿಂತ. ಆ ಮೇಲೆ ನಿದಾನ ವಾಗಿ ನುಡಿದ,—

" ಯಾರು ? ಸುಮಾತಾಯಿ ಬಂದಿದ್ದಳಲ್ಲವೆ ? "

ಮಾವನ ಮಾತು ಮುಗಿಯುವ ಮೊದಲೇ ಸುಲೋಚನೆ ಒದರಿದಳು.

" ಹೀಗೆ ನನ್ನ ಕುತ್ತಿಗೆ ಕೊಯ್ಯಬಾರದಿತ್ತು ನೀವು. ನಿಮ್ಮ ಸುಮಾ ತಾಯಿ ಇದ್ದಳಲ್ಲ...."

ಬಹುದಿನಗಳಿಂದ ಅವಳ ಹೃದಯದಲ್ಲಿ ಹೊತ್ತುತ್ತಿದ್ದ ಬೆಂಕಿ ಹೀಗೆ ಹೊರಗೆ ಬಿತ್ತು. ಸಮೀಪದಲ್ಲಿ ಯಾರೂ ಇಲ್ಲದುದನ್ನು ಕಂಡು, ಸುಬ್ಬ ರಾವನ ಸಿಟ್ಟು ನೆತ್ತಿಗೇರಿತು.

ಮಗನ ಮೇಲೆ ಎಂಥ ಅಪವಾದ ಹೊರಿಸುವಳಲ್ಲ ಈಕೆ, ಎಂದು. ನನ್ನ ಬಾಬಾಸಾಹೇಬ ಅಂಥವನೆ? ಎಂದೂ ಆಗಲಾರ. ಎಂಥ ಪವಿತ್ರ ಜೀವಿ ಯಾತ. ಸರಳ ಹೃದಯಿ. ಅವನಿಗೆ ಹೀಗೆನ್ನುವದೆಂದರೆ....

" ಬಾಯ್ಮುಚ್ಚು ! ಅವನಿಗೆ ಹೆಸರಿಟ್ಟರೆ ಬಾಯಲ್ಲಿ ಹುಳಬಿದ್ದಾವು. "

" ಹೂಂ ! ಅನ್ನುವವರಿಗೆ ಹುಳಬೀಳುವವು. ಮಾಡುವವರಿಗೆ ಇಲ್ಲೇನೋ. "

ಗಲ್ಲ ಉಬ್ಬಿಸಿ ನುಡಿದಳು ಸುಲೋಚನೆ.

“ಏನು ಮಾಡಿದನೇ ಚಾಂಡಾಲಿನಿ?”

ಒದರಿದ ಸುಬ್ಬರಾವ, ಮನೆಯ ಹಂಚು ಹಾರಿಹೋಗುವಂತೆ. ಕೂಡಲೆ ಚಮಕಿತನಾದ. ತನ್ನ ಅಬ್ಬರಣೆಯಿಂದ ಬಾಬಾಸಾಹೇಬ ಹೆದರಿ ಎದ್ದನೇನೋ ಎಂದುಕೊಂಡ. ಕೋಣೆಯತ್ತ ಕಿವಿಗೊಟ್ಟು ಆಲಿಸಿದ. ಸದ್ದಿಲ್ಲ. ಸಪ್ಪಳಿಲ್ಲ. ಇದ್ದುದರಲ್ಲಿಯೇ ಸ್ವಲ್ಪ ಸಮಾಧಾನವಾಯಿತು. ಬೆರಗೂ ಆಯಿತು.

ಸೊಸೆಯೂ ಸುಮ್ಮನಾದಳು. ಮಾವನ ಮುಂದೆ ಮಾತನಾಡಲು ಬಾಯಿರಲಿಲ್ಲ. ಹಿರಿಯರ ಮುಂದೆ ಬಿಚ್ಚಿ ಹೇಳುವ ವಿಷಯವೂ ಅದಾಗಿರಲಿಲ್ಲ. ಹೇಳುವಷ್ಟು ಧೈರ್ಯದ ಹುಡಿಗೆಯೂ ಅವಳಲ್ಲ. ಚಾಣಾಕ್ಷ ಮಾವನಾಗಿದ್ದರೆ ಈ ಪ್ರಶ್ನೆಯನ್ನೇ ಮಾಡುತ್ತಿರಲಿಲ್ಲ. ಹೇಗೋ ಪ್ರಶ್ನೆಯೊಂದು ಬಂದಿದೆಯೆಂದ ಮೇಲೆ ಉತ್ತರ ಒಂದು ಬೇಕಲ್ಲ.

“ಗಂಡ ಬೇಡ ಅಂದರೂ ಆ ಖಾದಿ ತೊಟ್ಟಳೇ. ಗೋಪಾದಲ್ಲಿರು ಅಂಬೆಕೆ-ಸಭೆಗೆ ಹೋದಳೇ. ಆ ನಿಮ್ಮ ಸುಮಾ. ಬೇಕಲ್ಲ. ಹೊರಗೆ ಒಬ್ಬ ಇನಾಮದಾರನ ಜೋಡಿ ತಿರಗಲಿಕ್ಕೆ.”

ಬಹಳ ತೂಗಿ ತೂಗಿ ಬಂದ ಮಾತಾಗಿತ್ತಿದು.

ಸುಬ್ಬರಾವನ ಮನಸ್ಸಿನಲ್ಲಿ ಈಗ ಪ್ರಕಾಶ ಬಿತ್ತು. ಸೊಸೆಯ ಮನಸ್ಸಿನ ಇಂಗಿತ ಹೊಳೆಯಿತು. ಅದರಲ್ಲಿಯೇ ಒಂದೆರಡು ಸಂಗತಿಗಳು ಮನ-ದೆರೆಯ ಮೇಲೆ ಮೂಡಿ ಮಾಯವಾದುವು.

ಸುಮಿತ್ರೆಯ ಮದುವೆಯ ಪ್ರಸಂಗವದು. ಹಗಲೆಲ್ಲ ಉತ್ಸಾಹದಿಂದ ಆಲೆದಾಡುವ ಬಾಬಾಸಾಹೇಬ ಯಾರೂ ಇಲ್ಲದ ಒಂದು ಕೋಣೆಯಲ್ಲಿ ಕುಳಿತು ಕಣ್ಣೀರು ಹಾಕುತ್ತಿರುವ ಆ ಸನ್ನಿವೇಶ. ಮುಂದೆ ತನ್ನ ಮದುವೆಯ ಕಾಲಕ್ಕೆ “ಮದುವೆಯಾಗದೆ ಇದ್ದರೇನಾಗುವುದು?” ಎಂದು ಕೇಳಿದ ಮಾತಿನ ಮರೆಯಲ್ಲಿರುವ ಮಗನ ವಿರಾಗಭಾವನೆಗಳೆಲ್ಲ ನೆನಪಾಗಿ ಸುಬ್ಬರಾವನ ಮನಸ್ಸಿನಲ್ಲಿ ಬಿರುಗಾಳಿಯನ್ನೆಬ್ಬಿಸಿದುವು. ಕೊಳೆಯನ್ನು ತಂದು ತುಂಬ ತೊಡಗಿದುವು. ಆದರೂ ಮಗನ ನಡತೆಯ ಮೇಲಿದ್ದ ಅಚಲ ಶ್ರದ್ಧೆಯು ಅದನ್ನು ಬಹುಕಾಲ ಉಳಿಯಗೊಡಲಿಲ್ಲ. ಕೂಡಲೆ ಹುಬ್ಬು ಗಂಟಿಕ್ಕಿ, ಸೊಸೆಯ ಕಡೆಗೊಮ್ಮೆ ಸೂಕ್ಷ್ಮ ದೃಷ್ಟಿಯನ್ನು ಬೀರಿ ತನ್ನ

ಕೋಣೆಗೆ ತೆರಳಿದ. ಹೋಗುವಾಗ "ಬಾಬಾಸಾಹೇಬ ಎದ್ದ ಮೇಲೆಯೇ ಚಹ ತಕ್ಕೊಂಡರಾಯಿತು!" ತನ್ನಲ್ಲಿಯೇ ಎಂದುಕೊಂಡ.

ಭಾರವಾದ ಹೆಜ್ಜೆಗಳಿಂದ ಸಾವಕಾಶವಾಗಿ ಹೋಗಿ ಆರಾಮ ಕುರ್ಚಿಯ ಮೇಲೆ ದೊಪ್ಪೆಂದು ಹೋಗಿ ಕುಕ್ಕರಿಸಿದ, ಸುಬ್ಬರಾವ. ಗಡಿಯಾಳದಲ್ಲಿ ಒಂಭತ್ತಾಯಿತು. ಗಂಟೆ ಹೊಡೆಯಲು ಆರಂಭವಾಯಿತು. ದಿನಕಿಂತ ನೀರಸ ವೆನಿಸಿತದರ ಸಪ್ಪಳ. ಹಾಗೆಯೇ ಎದುರಿನ ಗೋಡೆಯ ಮೇಲಿರುವ ಭಾವ ಚಿತ್ರದ ಕಡೆಗೆ ಸುಬ್ಬರಾವನ ದೃಷ್ಟಿ ಓಡಿತು.

ಚಿಕ್ಕಂದಿನಲ್ಲಿ ಬಾಬಾಸಾಹೇಬ ಸುಮಿತ್ರೆಯರನ್ನು ಒಂದೇ ಕುರ್ಚಿಯ ಮೇಲೆ ಕೂಡಿ ಕೂರಿಸಿ ತೆಗೆದ ಭಾವಚಿತ್ರವದು. ಎಷ್ಟು ಮುದ್ದು ಮುಖ ಗಳವು! ನಿಜವಾಗಿಯೂ ಎಳೆಯ ಮಕ್ಕಳ ಮುಖದ ಮೇಲೊಂದು ಪ್ರಾಸಾ ದಿಕ ತೇಜವಿರುತ್ತದೆ. ಅವೊಂದು ವನದೊಳಗಿರುವ ಕುಸುಮ ಯುಗ್ಮದಂತೆ. ಒಂದೇ ಗಿಡದಲ್ಲರಳಿದ ಗುಲಾಬಿಗಳಂತೆ ಹೇಗೆ ಒಪ್ಪುತ್ತಿದ್ದಾರೆ ಇವರು! ಎಂದ ಒಂದು ಕ್ಷಣ. ಮರುಕ್ಷಣದಲ್ಲಿ ವಿಚಾರ ಬೇರೆ ಕಡೆಗೆ ತಿರುಗಿತು.

ಕುರ್ಚಿಯ ಮೇಲಿಂದ ಎದ್ದ. ಮೆಲ್ಲಗೆ ಆ ಭಾವಚಿತ್ರದ ಕಡೆಗೆ ಹೋದ. ದಿಟ್ಟಿಸಿ ನೋಡತೊಡಗಿದ.

ಕುಲು ಕುಲು ನಗುವ ಸುಮ. ಅವಳ ಪಕ್ಕದಲ್ಲಿ ಕುಳಿತ ಬಾಬಾ ಸಾಹೇಬ. ಎಂಥ ಸುಂದರ ಜೋಡಿಯಿದು!

ಸುಮಾ—ಸುಲೋಚನಾ.

ಸುಮಿತ್ರೆಯ ಮಾಧುರ್ಯ ಸುಲೋಚನೆಯಲ್ಲಿ ಇಲ್ಲ.

ಸುಮಾ ವನಸುಮ. ಉಪಯೋಗವಿಲ್ಲದ ಹೂ.

ಸುಲೋಚನೆಯಲ್ಲಿ ಸೆಳೆತವಿಲ್ಲ. ಮಾದಕತೆಯಿಲ್ಲ. ಮೋಹಕತೆಯಿಲ್ಲ. ಮೃದುತ್ವವಿಲ್ಲ.

ಇರಲೇಬೇಕಿಲ್ಲ. ಶಿವಾಜಿಯ ತಾಯಿ ಜೀಜಾಬಾಯಿಯಲ್ಲಿ ಮೃದುತ್ವ ವಿತ್ತೇ? ಕ್ಷತ್ರಿಯ ರಕ್ತವದು! ಯಾವುದಕ್ಕೂ ಹೆದರಿಕೆ ಎಂಬುದಿಲ್ಲ. ಅಂತೇ ಇದೀಗ ಹೀಗೆ ಸ್ಪಷ್ಟ ನುಡಿದಳಲ್ಲ.

ಆದರೆ ಬಾಬಾಸಾಹೇಬ ಅವಳೆಂದಂತಿರುವನೆ?

ಎಂದೂ ಶಕ್ಯವಿಲ್ಲ.

ಅವಳಲ್ಲಿಯೇ ತಪ್ಪು ಕಲ್ಪನೆಯಾಗಿದೆ. ಇನ್ನೂ ಏನೇನು ತಿಳಿದು ಕೊಂಡಿರುವಳೋ! ತನ್ನ ತಂದೆಯಂತೆ ತಿಳಿದಿದ್ದಾಳಾದೀತು. ನಮ್ಮ ಮನೆ ತನ ಎಂಥದು! ನನ್ನ ನಡತೆ ಏನು? ಅದೇ ರೀತಿ ನಮ್ಮ ಹುಡುಗರದ್ದು ಕೂಡ. ನಿನ್ನೆ ಬಂದಾಕೆ ಇವಳಿಗೇನು ಗೊತ್ತು? ತನ್ನ ವ ನೆಯ ರೀತಿ ಯಂತೆಯೇ ತಿಳಿದುಕೊಂಡಿದ್ದಾಳೆ ಪಾಪ! ಅವರ ತಂದೆಯೊಬ್ಬ ಮನೆಯಲ್ಲಿ ಇನ್ನೊಬ್ಬಾಕೆಯನ್ನು ತಂದಿಟ್ಟಿರುವನೆಂದು ನಮ್ಮ ಹುಡುಗನ ಮೇಲೆಯೂ ಅಂಥ ಆರೋಪವೇ?

ಅಂದರೂ ಹಾಲಿನಂತಹ ದಾಂಪತ್ಯಸಮುದ್ರವನ್ನು ಕೆಡಿಸಲಿಕ್ಕೆ ಹುಳಿಯ ಒಂದು ತೊಟ್ಟಾದರೂ ಸಾಕಲ್ಲವೆ?

ಅಹುದು. ಅದು ಭಯಂಕರ ವಿಷ್ರಬಿಂದು. ಅರಳಿಯ ಗಂಟಿನಲ್ಲಿ ಬೆಂಕಿಯ ಕಿಡಿಯಿದ್ದಂತೆ.

ನನ್ನಾಕೆ! ಅಂತಹ ಧೀರಮನಸ್ಸಿನ ಯಮುನಾ?

ಅಂದು ನಮ್ಮ ಮದುವೆಯಲ್ಲಿ ಗಾಯನಕ್ಕೆಂದು ಕರೆಯಿಸಿದ ಗೋವೆಯ ವೇಶ್ಯೆಯೊಬ್ಬಳನ್ನು ಮುಂದೆಯೂ ಒಂದೆರಡು ಸಲ ಮನೆಯ ಲ್ಲಿಯೂ ಸಂಗೀತ ಕಚೇರಿಗೆ ಕರೆಯಿಸಿದುದಕ್ಕಾಗಿ ನನ್ನ ವಿಷಯಕ್ಕೆ ಏನನ್ನೋ ಕಲ್ಪಿಸಿಕೊಂಡಿದ್ದಳಲ್ಲ. ಅಯ್ಯೋ ಪಾಪ! ಹೆಣ್ಣು ಹೃದಯ. ಇದ್ದುದನ್ನು—ಅಲ್ಲ—ಇಲ್ಲದುದನ್ನು ಕಲ್ಪಿಸಿ—ಕಲ್ಪಿಸಿದುದನ್ನು ಮನದಲ್ಲಿ ನೆನೆದು ನೆನೆದು ಕೊರಗುವ ಜೀವಿಯದು. ಎರಡು ಮಕ್ಕಳನ್ನು ಹೆತ್ತರೂ ನನ್ನ ಮೇಲಿನ ಆ ಸಂಶಯ ದೂರವಾಗಲಿಲ್ಲ. ಕೊನೆಗೂ ಅತೃಪ್ತಜೀವನ ಅವ ಳದು! ಇತ್ತಿತ್ತಲಾಗಂತೂ ಬಾಬಾಸಾಹೇಬನನ್ನು ಬಸುರಿದ್ದಾಗ ಇನ್ನೂ ಕೊರಗಿದಳು. ಸಣ್ಣಾದಳು. ಕರುಣ ದೃಷ್ಟಿಯಿಂದ ನನ್ನ ಕಡೆಗೆ ನೋಡು ವಳು. ಆ ದೃಷ್ಟಿ ಎಂಥ ಅರ್ಥಪೂರ್ಣವಾದುದು, ಸಾಶಂಕವಾದುದು. ಆಗ ಆಕೆಗೆ ನಾನು ನನ್ನ ಹೃದಯ ಬಿಚ್ಚಿ ತೋರಿಸಬೇಕೆನಿಸುತ್ತಿದ್ದಿತು.

ಮನೆಗೆ ಬರುವ ಹೋಗುವ ಹೆಂಗಸರಲ್ಲಿ ಬೇರೆ ಭಾವನೆಯಿಂದ ಸ್ನೇಹ ಬೆಳೆಸಲಾಗದೆ?

ಆದರೆ ಆ ಸಂಗತಿ ನಮ್ಮ ದಾಂಪತ್ಯಸಾಮರಸ್ಯಕ್ಕೆ ಎಷ್ಟೊಂದು ತೊಡಕಾಗಿ ನಿಂತಿತು.

ಹೀಗೆಯೇ ಬಾಬಾಸಾಹೇಬನ ಜೀವನದಲ್ಲಿ ಏನಾದರೂ ಪ್ರಸಂಗ ಬಂದರೆ....?

ಬರಬಾರದು. ಎಂದೂ ಬರಬಾರದು.

ಅದಕ್ಕೆಲ್ಲ ಇಂಥ ಸನ್ನಿವೇಶಗಳು ಕಾರಣವಾಗಿದ್ದವೆ?

ಈ ಭಾವಚಿತ್ರ! ಅವರಿಬ್ಬರೂ ಆಗಾಗ ಭೆಟ್ಟಿಯಾಗುವಿಕೆ. ಎಲ್ಲವೂ ಸಂಶಯಕ್ಕೆ ಕಾರಣಗಳೇ. ಇನ್ನು ಮುಂದೆ ಇಂಥ ಯಾವ ವಸ್ತುಗಳೂ ಸುಲೋಚನೆಯ ದೃಷ್ಟಿಗೆ ಬೀಳದಂತೆ ಎಚ್ಚರ ವಹಿಸಬೇಕು.

ಸದಾನಂದನನ್ನು ಹಳ್ಳಿಯಲ್ಲಿ ಜಮೀನುಗಳ ತೆರಿಗೆ ವಸೂಲಿಗೆಂದು ಕಳಿಸಿಬಿಡಬೇಕು. ಅಂದರೆ ಸುಮಿತ್ರಾ ತನ್ನಿಂದ್ದ ತಾನೇ ದೂರ ಹೋಗ್ತು ವಳು. ಬಾಬಾಸಾಹೇಬನೂ ದೂರ ಉಳಿಯುವನು.

ಸುಲೋಚನೆಯ ದೃಷ್ಟಿ ತಿಳಿಯಾಗುವುದು.

ನಮ್ಮ ಮನೆತನವೇ ಅಂಥದಲ್ಲ. ಇಲ್ಲವಾದರೆ ಇಂದಿಗೆ ನಾನು ಇನ್ನೊಂದು ಮದುವೆಯಾಗಬಹುದಿತ್ತು. ಇಂಥ ಉತ್ಪನ್ನಕ್ಕೆ ಒಂದಲ್ಲ ಹತ್ತು ಹೆಣ್ಣುಗಳನ್ನು ಇಡಬಹುದಿತ್ತಲ್ಲ ನಾನು. ಆದರೆ ಅದು ಬೇಡ. ತಮ್ಮ ನೊಬ್ಬ ಹಾಗೆ ಮಾಡಿ ಸುಖವುಂಡ. ಈಗ ನಮ್ಮನ್ನೂ ಕೋರ್ಟಿಗೆ ಒಯ್ದಿದೆ ಅವನ ಆಚಾರ! ಅವನೇ ಹಾಗೆ ವರ್ತಿಸದಿದ್ದರೆ ಈ ಆಸ್ತಿಗೆ ನಾನೇ ಬಾಧ್ಯಸ್ಥ ನೆಂದು ಹೇಳಲು ಸುನಂದೆ ಎಲ್ಲಿರುತ್ತಿದ್ದಳು?

ಇರಲಿ. ಕಾಡುವವರು ಮನುಷ್ಯನಿಗೆ ಅಲ್ಲದೆ ಇನ್ನಾರಿಗೆ ಇರಬೇಕು?

‡ ‡ ‡ ‡

ಸುಬ್ಬರಾವನ ವಿಚಾರ ಬೇರೆ ಕಡೆಗೆ ಓಡಿದರೂ ಕೈಗಳು ಮಾತ್ರ ಆ ಭಾವಚಿತ್ರವನ್ನು ತೆಗೆದು ಕಪಾಟಿನೊಳಗೆ ಇಡುವುದರಲ್ಲಿ ತೊಡಗಿದ್ದುವು. ಅದನ್ನು ಒಳಗಿಟ್ಟ ಮೇಲೆ ಅವನಿಗೊಂದಿಷ್ಟು ಸಮಾಧಾನವಾಯಿತು. ಅದೇಕೋ ಅವನಿಗೇ ಇನ್ನೊಮ್ಮೆ ಭಾವಚಿತ್ರ ನೋಡಬೇಕೆಂದೆನಿಸಿತು. ಕಪಾಟಿನ ಬಾಗಿಲ ತೆರೆದು ಕೈಯಲ್ಲಿ ತಕ್ಕೊಂಡ.

ನೋಡಿದ. ಸಿಡುನೋಟದಿಂದ ನೋಡಿದ. ಎಂಥ ಜೊತೆಯಿದು! ಎಂದ ಮನದಲ್ಲಿಯೇ. ಹಾಗೆಯೇ ಕಪಾಟಿನಲ್ಲಿಟ್ಟು ಬಾಗಿಲ ಹಾಕಹೋದ. ಅದೇಕೋ ಕೈ ನಡುಗದಿರಲಿಲ್ಲ. ಆದರೂ ಹೃದಯದ ಭಾರವೊಂದಿಳಿದಂತಾಯಿತು. ಕಪಾಟಿನ ಬಾಗಿಲ ಮುಚ್ಚುತ್ತಿರುವಾಗಲೇ ದೃಷ್ಟಿ ಹೊರ ಮುಖವಾಯಿತು. ಕಪಾಟಿನಲ್ಲಿ ಮೇಲಿನ ಖಾನೆಯೊಳಗೆ ಇಟ್ಟ ಕಾಡತೂಸಿನ ಪೆಟ್ಟಿಗೆಯ ಕಡೆಗೆ ದೃಷ್ಟಿ ಓಡಿತು. ಅಸ್ತವ್ಯಸ್ತವಾಗಿದ್ದಿತದು. ತಟ್ಟನೆ ಕೈಯಲ್ಲಿ ತಕ್ಕೊಂಡು ನೋಡಿದ ಸುಬ್ಬರಾವ. ಅದರಲ್ಲಿ ಒಂದೂ ಕಾಡತೂಸಃ ಇರಲಿಲ್ಲ. ಬೆರಗಿನಿಂದ ಹೊರಳಿ ನೋಡಿದ. ಗೂಟಕ್ಕೆ ತೂಗು ಹಾಕಿದ ಕೋವಿಯೂ ಕಣ್ಮರೆಯಾಗಿದ್ದಿತು.

"ಹಾ!"

ಎಂದು ನೆಲಕ್ಕೆ ಕುಳಿತ ಸುಬ್ಬರಾವ.

+ + + +

ಮೊನ್ನೆ ಮೊನ್ನೆಯೇ ಮುಂಬಯಿಯಿಂದ ತರಿಸಿಕೊಂಡಿದ್ದೆ. ಕೆಟ್ಟದಿನ, ಪತ್ರಿಸರಕಾರದ ಹಾವಳಿಯೊಂದು ನಮ್ಮ ಸುತ್ತ ಇದೆ. ಮನೆಯಲ್ಲಿ ಹೆಚ್ಚು ಕಡಿಮೆ ಇರಲಿ. ಎಂದು ಇದನ್ನೊಂದು ತರಿಸಿದ್ದೆ. ಆದರೆ ಕಾಡತೂಸೂ ಇಲ್ಲ. ಕೋವಿಗಳೂ ಇಲ್ಲ.

ಏನಾದುವು? ನನ್ನ ಕಪಾಟಿನೊಳಗಿನ ಕಾಡತೂಸು ಮಾಯವಾದವು.

ಅಂ! ಏನಿದು? ಏನಾಯಿತು ಬಂದೂಕು? ಗೂಟಕ್ಕಿಟ್ಟ ಬಂದೂಕು ಮಾಯವಾಯಿತು! ಎಲ್ಲಿ ಯಾರು ಒಯ್ದರು? ನಿನ್ನೆ ಸಾಯಂಕಾಲವೇ ಒರಸಿ ಇಟ್ಟಿದ್ದೆನಲ್ಲ. ಅದರಲ್ಲಿ ಕಾಡತೂಸು ಹಾಕಿಯೂ ಇಟ್ಟಿದ್ದೆ.

ವೇಳೆ ಹೇಳಿ ಕೇಳಿ ಬರುವದಿಲ್ಲ. ವಸಂತನನ್ನು ಹಿಡಿದು ಕೊಟ್ಟಾಗಿನಿಂದ ನನ್ನ ಮೇಲೆ ಕಾಂಗ್ರೇಸ ಕ್ರಾಂತಿಕಾರಕರ ಕಣ್ಣು ಇದೆ. ಅದಕ್ಕಾಗಿ ಇರಲಿ ಎಂದಿದ್ದೆ. ಬಂದೂಕನ್ನೇ ನೆಚ್ಚಿ ಬಾಳುತ್ತಿದ್ದೆ. ಕೈಯಲ್ಲಿ ಕೋವಿಯಿದ್ದರೆ ಈ ಇನಾಮುದಾರನ ಮುಂದೆ ನೂರು ಜನವೂ ತಡೆಯದು. ಶೂರ ಮರಾಠರ ರಕ್ತ. ಆದರೆ ಬಂದೂಕು? ಬಂದೂಕು?

ಕಳವಾಗಿದೆಯೆಂದು ಸರಕಾರಕ್ಕೆ ತಿಳಿಸಲೆ?

ಈಗ ಖಾಸಗಿ ಬಂದೂಕುಗಳನ್ನು ಒಯ್ದು ಚಳವಳಖೋರರು ಉಪಯೋಗಿಸುತ್ತಿದ್ದಾರೆಂದು ಸರಕಾರ ಕಸಿದುಕೊಳ್ಳಹತ್ತಿದೆ.

ಇಂಥದರಲ್ಲಿ ಕಳವಾಯಿತೆಂದರೆ ಯಾರು ವಿಶ್ವಾಸವಿಡುವರು ?

ವಿಶ್ವಾಸವಿಡದೆ ಏನು ? ನಾನು ರಾಜನಿಷ್ಠನಾಗಿರುವೆನೆಂಬುದು ದಿವಾಣ ಸಾಹೇಬರಿಗೆ ಗೊತ್ತಿಲ್ಲವೆ ?

ಯುದ್ಧ ಸಹಾಯಕ ಸಮಿತಿಯ ಸದಸ್ಯ ನಾನು. ಆದರೆ ಬಾಬಾ ಸಾಹೇಬನೊಬ್ಬ ಹೆಸರು ಕೆಡಿಸುತ್ತಿದ್ದಾನಲ್ಲ. ಅಯ್ಯೋ ! ಅವಿಚಾರಿ ಹುಡುಗನಿಗೆ ಏನು ಮಾಡಲಿ ?

ಅವನೇನಾದರೂ ಬಂದೂಕನ್ನು ತೆಗೆದು ಎಲ್ಲಿಯಾದರೂ ಇಟ್ಟಿರಬಹುದೆ ? ಕೇಳಬೇಕೆ ? ಕೇಳಲೇ ?

ಬಾಗಿಲವರೆಗೆ ಎದ್ದು ನಡೆದು ಹೋದ ಸುಬ್ಬರಾವ.

ಅಷ್ಟರಲ್ಲಿ ಆಳು ಚಹದ ಕಪ್ಪನ್ನು ಕೈಯಲ್ಲಿ ಹಿಡಿದುಕೊಂಡು ಎದುರಿಗೆ ಬಂದ.

" ಯಾಕೆ, ಚಹ ಇಲ್ಲಿಗೇ ತಂದೆ ? ಬಾಬಾಸಾಹೇಬ ಇನ್ನೂ ಏಳಲಿಲ್ಲವೇ ? "

" ಇಲ್ಲ. ನೀವು ತಕ್ಕೊಂಡುಬಿಡಿರಿ. ಅವರು ಎದ್ದ ಮೇಲೆ ಮತ್ತೆ ಮಾಡಿಕೊಡುವೆ. "

" ಇನ್ನೂ ಏಳಲಿಲ್ಲ ? "

ತುಂಬ ಬೆರಗಿನ ಧ್ವನಿಯಲ್ಲಿತ್ತೀ ಮಾತು.

" ನಡೆ ನೋಡೋಣ "

ಎಂದು ಮುಂದಾಗಿ ನಡೆದ ಸುಬ್ಬರಾವ.

ಆಗ " ಬಾಬು ಎದ್ದಿಲ್ಲ. ಇನ್ನೂ ಏಳಲಿಲ್ಲ " ಎಂದು ಬಾಯಲ್ಲಿ ತಿರುತಿರುಗಿ ಎಂದುಕೊಂಡ.

ಹುಡುಗನಿಗೆ ಜಡ್ಡಾಗಿರಬಹುದೆ ? ನಿದ್ರೆ ಕಾಯಬೇಡವೆಂದು ಹೇಳಿ ಹೇಳಿ ಬೇಸತ್ತೆ. ಆದರೆ ನನ್ನ ಮಾತನ್ನೇ ಕೇಳುವದಿಲ್ಲ ಹುಡುಗ. ಹೀಗೆ ಆಗಾಗ ಜಡ್ಡು-ಜಾಪತ್ತುಗಳಿಗೆ ಒಳಗಾಗುತ್ತಾನೆ. ಇನ್ನೂ ಇವನನ್ನು

ಎಷ್ಟು ಕೆಳಗೆ ಮೇಲೆ ನೋಡಬೇಕು? ಮನೆಯಲ್ಲಿ ಹೆಂಡತಿ ಬಂದಳು. ಇನ್ನೂ ಕೂಸಿನಂತೆ ಇದ್ದಾನೆ.

ಆಹುದು. ಬಾಬಾಸಾಹೇಬನಿಗೆ ಇನ್ನೂ ಏನು ತಿಳಿಯುತ್ತದೆ? ನೋಡಿ ಕೊಂಡಾಳೆಂದು ಮದುವೆ ಮಾಡಿದೆ. ಆದರೆ ಅವಳೂ ಹಾಗೆಯೇ.

ಇನ್ನೂ ಸುಮಾ ಒಂದು ದೃಷ್ಟಿಯಿಂದ ನೆಟ್ಟಗೆ. ಆಗಲೇ ಬಾಬಾ ಸಾಹೇಬನ ಆರೈಕೆಯನ್ನು ಎಷ್ಟು ಚೆನ್ನಾಗಿ ಮಾಡುತ್ತಿದ್ದಳು? ಒಮ್ಮೆ ಬಾಬಾಸಾಹೇಬ ಬೇನೆ ಬಿದ್ದಾಗ ಸುಮಾ ನಿದ್ದೆಗೆಟ್ಟು ಸೇವೆ ಮಾಡಿದಳು. ವೇಳೆ ವೇಳೆಗೆ ಔಷಧ ಕೊಡುವದೇನು? ಹಾಸಿಗೆ ಬದಲಿಸುವದೇನು? ಬಾಯಿಂದ ಅನ್ನಲೂ ಸಂಕೋಚವೆನಿಸುತ್ತದೆ. ಅಂಥ ಕೆಲಸಗಳನ್ನೆಲ್ಲ ಮಾಡಿ ದಳು. ನಿಜವಾಗಿ ಅವಳ ಆರೈಕೆಯಿಂದಲೇ ನನ್ನ ಬಾಬಾಸಾಹೇಬ ಬದು ಕಿದುದು.

ಸುಮಾ ನನ್ನ ಊಟ ಉಡಿಗೆಗಳನ್ನು ನೋಡಿಕೊಳ್ಳುವ ರೀತಿಯೂ ಹಾಗೆಯೇ. ಎಷ್ಟು ಜಾಗರೂಕತೆ! ಎಂಥ ಮಮತೆ!

ಆ ನಯವಿನಯ ಸುಲೋಚನೆಗೆ ಇಲ್ಲ. ಹೃದಯವೂ ಇಲ್ಲವೇನೋ!

ಇಷ್ಟರಲ್ಲಿ ಬಾಬು ಎದ್ದಿರಬೇಕಿತ್ತು. ಇನ್ನೂ ಎದ್ದಿಲ್ಲ.

ಎಲ್ಲಿಯಾದರೂ ನಸುಕಿನಲ್ಲಿ ಎದ್ದು ಬಂದೂಕು ತಕ್ಕೊಂಡು ಬೇಟೆಗೆ ಹೋಗಿರಬಹುದೆ?

ಛೀ! ಅವನಿಗೇನೂ ಬೇಟೆಯ ನಾದವಿಲ್ಲ. ಅಹಿಂಸಾವಾದಿಯಾತ. ಗಾಂಧೀ ಭಕ್ತ.

ಅದೇಕೆಣೋ ಇತ್ತಿತ್ತಲಾಗಿ ಬಂದೂಕು ಹಿಡಿಯುತ್ತಾನೆಯಲ್ಲ. ಯಾರೂ ಇಲ್ಲದಾಗ ಗುರಿ ಹಿಡಿಯುವ ರೂಢಿಯನ್ನೂ ಮಾಡಿಕೊಳ್ಳುತ್ತಾನೆ.

ನನಗೆನಿಸಿತು, ಬಹಳ ದಿನಗಳ ಮೇಲೆ ಹುಡುಗನಿಗೆ ಬುದ್ಧಿ ಬಂದಿ ತೆಂದು. ಮನದಲ್ಲಿಯೇ ಆನಂದಪಟ್ಟೆ.

ಕ್ಷತ್ರಿಯರಕ್ತ ಎಷ್ಟು ದಿನ ಸುಮ್ಮನಿದ್ದೀತು? ಯಾವಾಗಾದರೊಮ್ಮೆ ಕೈಯೆತ್ತುವುದೆ?

ಗಾಂಧಿ!

ಮರೆತು ಹೋಗಿರುವನ್ನೇ. ಅಂಥ ಅರವು ಮರವಿನ ಹುಡುಗನೇ ಆತ. ಬಂದೂಕು! ಓ! ಇನ್ನೂ ಕತ್ತಲಿರಬೇಕು ಹೊರಟಾಗ. ಕೈಯಲ್ಲಿ ಒಯ್ದಿದ್ದಾನೆ ಆಯ್ತು! ಕಾಡತೂಸು!"

ತನ್ನ ಮನಸ್ಸಿಗೆ ಹೇಗಾದರೂ ಸಮಾಧಾನ ಮಾಡಿಕೊಳ್ಳಬೇಕೆಂದು ಹೊರಟ ವಿಚಾರ ಸರಣಿ ಅವನಿಗೇ ಸಮಾಧಾನವನ್ನುಂಟು ಮಾಡಲಿಲ್ಲ. ತಲೆ ಕೊಡಹಿದ. ನುಣ್ಣಗಿನ ತಲೆಯ ಮೇಲೆ ಕೈಯಾಡಿಸಿದ. ಏನೂ ಹೊಳೆಯದಾಯಿತು. ಅಸ್ಥಿರ ಮನಸ್ಸಿನಲ್ಲಿ ತುಂಡು ತುಂಡಾದ ವಿಚಾರಗಳು ಬರತೊಡಗಿದವು.

ಬಂದೂಕು ಹಿಡಿದು ತಿರುಗಲಿ, ಬಾಬಾಸಾಹೇಬ. ಎಂದರೆ ಆ ಜನಕ್ಕೂ ಹೆದರಿಕೆ. ಅವನ ಸಮೀಪಕ್ಕೆ ಯಾರೂ ಬರಲಿಕ್ಕಿಲ್ಲ. ಆ ಸುನಂದೆಯವರಿಗಂತೂ ಕಣ್ಣಿಗೆ ಅಂಜನ ಹಾಕಿದಂತಾಗುವದು.

ಶಹಾಬ್ಬಾಶ! ಇದ್ದರೆ ಹೀಗಿರಬೇಕು ಹುಡುಗರು. ಇವನು ಏನು ಮಾಡುವುದೂ ಬೇಡ. ಬರೇ ತಾನು ತನ್ನ ಬಿಗುಹಿನಲ್ಲಿ ತಿರುಗಿದರೆ ಸಾಕು. ಇನ್ನೂ ನೂರು ಜನರ ಆಸ್ತಿಗಳನ್ನು ಎತ್ತಿ ಹಾಕುವೆ........

ಸುಬ್ಬರಾವನ ಮುಖದಲ್ಲಿ ಹಠಾತ್ತಾಗಿ ಮುಗುಳು ನಗೆಯೊಂದು ಮೂಡಿತು. ತಲೆಯ ಮೇಲೆ ಕೈಯಾಡಿಸಿದ. ಬೋಳು ತಲೆ ತಂಗಾಳಿಗೆ ತಣ್ಣಗಾಗಿದ್ದಿತು.

"ಸುಲಾ, ಚಹ ಕೊಡು ನನಗೆ. ಆತ ಬಂದು ಹಿಂದಿನಿಂದ ಕುಡಿದಾನಂತೆ." ಎಂದು ಹೇಳಿ ಸುಬ್ಬರಾವ ನೆಟ್ಟಗೆ ಒಳಗೆ ಹೋದ.

ದಿನದಂತೆ "ಹೂಂ!" ಎಂದಳು ಸುಲೋಚನೆ.

ಸುಲೋಚನೆಯು ವಿಚಾರದ ಗೊಂದಲದೊಳಗಿಂದ ಎಚ್ಚತ್ತು, ಲಗುಬಗೆಯಿಂದ ಒಳಗೆ ಹೋಗಿ ಚಹ ತಂದುಕೊಟ್ಟಳು. ಮಾವನಿಗೆ ಸಮಾಧಾನವಾಗಬೇಕೆಂಬುದೇ ಅವಳ ಇಚ್ಛೆ. ಆದರೆ ಅವಳ ಮನಸ್ಸಿನ ಶಾಂತಿಯೇ ಮಾಯವಾದಂತಿತ್ತು.

ಅವರು ಇರುಳಿನಲ್ಲಿಯೇ ಹೋದರೆ? ರಾತ್ರಿ ಹಾಸಿಗೆಯಲ್ಲಿ ಮಲಗಲೇ ಇಲ್ಲವೇನು? ನಾನು ಸಿಟ್ಟಿನಿಂದ ಬಂದ ಮೇಲೆ ಅವರೂ ಎದ್ದು ಹೋಗಿಬಿಟ್ಟಿರಬೇಕು.

ಸದಾನಂದ ಹೀಗೇಕೆ ಅಂದ?

ಅವನು ಇಲ್ಲಿ ನಿಲ್ಲಲಿಲ್ಲವೇಕೆ?

ಸುಮಿತ್ರೆಯೂ ಹೋಗಿರುವಳೆಂದು ಅಂದಂತಾಯಿತಲ್ಲ!

ಸುಲೋಚನೆ ಈ ಎಲ್ಲ ವಿಚಾರಗಳ ತಾಕಲಾಟದಲ್ಲಿಯೇ ಇದ್ದಳು. ಮುಂಜಾನೆಯ ಜರ್ಬು ಈಗ ಅವಳಲ್ಲಿ ಉಳಿದಿರಲಿಲ್ಲ.

ಸುಬ್ಬರಾವ ಚಹ ಗುಟುಕಿಸುತ್ತ ಒಂದೆರಡು ಸಲ ಸುಲೋಚನೆಯ ಮುಖವನ್ನು ನಿರೀಕ್ಷಿಸಿದ. ಅವಳ ಅಡಿಯಿಂದ ಮುಡಿಯವರೆಗೆ ದೃಷ್ಟಿ ಹರಿಯಿಸಿದ. ಮ್ಲಾನವಾದ ಮುಖ. ಮುದಡಿದ ಸೀರೆ. ಸೊಸೆಯನ್ನು ನೋಡಿ ಹೇಗೊ ಹೇಗೊ ಅನ್ನಿಸಿತು. ಆಗಲೇ ಅವಳ ಕೈಯೆಡೆಗೆ ಅವನ ದೃಷ್ಟಿ ಹೋದುದು.

"ಕೈಗೆ ಬಹಳ ಗಾಯವಾದಂತಿದೆಯಲ್ಲ ಸುಲು?" ಎಂದು ಕೇಳಿದ.

"ಇಲ್ಲ, ಸ್ವಲ್ಪ ಹತ್ತಿದೆ."

ಸುಲೋಚನೆಯ ಮುಖದಲ್ಲಿ ಹೆದರಿಕೆ ಆವರಿಸಿತ್ತು.

ಅವರು ಬೇಗ ತಿರುಗಿ ಬರದಿದ್ದರೆ?

ನಮ್ಮ ಜಗಳದ ಸುದ್ದಿ ಮಾವನಿಗೆ ತಿಳಿದರೆ?

ನನ್ನ ಪರಿಣಮವೇನು ಒಳ್ಳೆಯದಾಗದು.

ಈ ವಿಚಾರಗಳು ಅವಳ ಹೆದರಿಕೆಗೆ ಬಲವಾದ ಕಾರಣವಾಗಿದ್ದುವು.

ಸುಲೋಚನೆಗೆ ಮಾವನ ಎದುರಿಗೆ ಹೆಚ್ಚು ಹೊತ್ತು ನಿಲ್ಲುವ ಧೈರ್ಯವಾಗಲಿಲ್ಲ. ತನ್ನ ಕೋಣೆಗೆ ನಡೆದಳು. ಆಗಲೇ ಮನದಲ್ಲಿ,—

ಸದಾನಂದ ಕೈಲಾಗದವ. ತನ್ನ ಹೆಂಡತಿಯನ್ನು ಕರೆದುಕೊಂಡು ಬೇರೆಕಡೆಗೆ ಹೋಗಲಿಲ್ಲ. ತನ್ನ ಹೆಂಡತಿ ಇನ್ನೊಬ್ಬರೊಡನೆ ಸಲಿಗೆ ಬೆಳೆಯಿಸುವದನ್ನು ಕಂಡು ಸುಮ್ಮನಿರುವುದೆಂದರೆ ಅವನೇನು ಗಂಡುಸೆ?

ನಮ್ಮ ಮಾವನ ಮುಂದೆ ನಿಂತು ಹೇಳಲೂ ಧೈರ್ಯವಿಲ್ಲ.

ಇವರಾದರೂ ಏನು? ಕಂಡೂ ಕಾಣದವರಂತೆ ಇದ್ದಾರೆ. ಮನೆಯ ಸೊಸೆ 'ಗೋಷೆ'ಯಲ್ಲಿ ಸಾಯಬೇಕಂತೆ. ಸತ್ತು ಕೊಳೆತು ನಾರಬೇಕಂತೆ. ಅವರು ಪುರುಷರು ಬೇಕಾದ ಸೂಳೆಯನ್ನು ಬೆನ್ನು ಹಚ್ಚಿಕೊಂಡು ತಿರುಗಬೇಕಂತೆ. ಆಗಲಿ.

" ಸುಲಾ ! ಸುಲಾ ! "

ಸುಲೋಚನೆ ಓಡಿ ಬಂದಳು. ಮಾವನನ್ನು ಎತ್ತಿದಳು. ನಿರ್ವಿಣ್ಣನಾಗಿ ಮೂರ್ಛೆ ಹೋಗುತ್ತ ಒರಲಿದ ಸುಬ್ಬರಾವ.

" ಅಯ್ಯೋ ನನ್ನ ಬಾಬು ! ನನ್ನ ಬಾಬು ! "

ಸುತ್ತಲೂ ಆಳು ಹೋಳುಗಳು ನೆರೆದರು. ಎತ್ತಿ ಒಯ್ದು ಪಡಸಾಲೆಯಲ್ಲಿ ಪಲ್ಲಂಗದ ಮೇಲೆ ಹಾಕಿದರು.

" ಘಾತ ಆಯಿತ್ತು ! ಘಾತ ಆಯಿತ್ತು ! ಸುಮೀ, ಏ ನೀಚ ಸುಮೀ ನಿನ್ನನ್ನು ಇದೇ ಕೈಗಳಿಂದ ಎತ್ತಿ ಆಡಿಸಿದ್ದೆನಲ್ಲ. ಈ ತೊಡೆಯ ಮೇಲೆ ಕೂಡಿಸಿಕೊಂಡು ಹಾಲುಣಿಸಿದ್ದೆನಲ್ಲ. ನೀನಿಂಥ ಕೆಲಸವನ್ನು ಮಾಡಿದೆಯಾ? ಕ್ರೂರ ರಾಕ್ಷಸಿ ನನ್ನ ಮನೆಯನ್ನು ಹಾಳಿಗೆ ಹಚ್ಚಿದೆ. ಅಯ್ಯೋ ! ಬಾಬೂ ನನ್ನ ಬಾಬು ! "

ಸುಬ್ಬರಾವ ಎದೆ ಎದೆ ಬಡಿದುಕೊಳ್ಳತೊಡಗಿದ.

ಇಷ್ಟರಲ್ಲಿ ಸದಾನಂದ ಹೊರಗಿನಿಂದ ಬಂದ. ಸುಬ್ಬರಾವನ ಸ್ಥಿತಿಯನ್ನು ಕಂಡು ಬೆರಗಾದ. ಇಲ್ಲಿ ಇನ್ನೇನು ಆಗಿರುವದೋ ಎಂದು ಕೊಂಚ ಕಾಲ ಯೋಚಿಸಿದ. ಆದರೂ ಅವನಿಂದ ತಡೆಯುವದಾಗಲಿಲ್ಲ.

" ಬಾಬಾಸಾಹೇಬ ನನ್ನ ಕುತ್ತಿಗೆ ಕೊಯ್ದ. ಹೀಗಿದ್ದರೆ ಮೊದಲೇ ಹೇಳಬೇಕಿತ್ತು. ಮನೆಯವಳೇ ಇದ್ದಳಲ್ಲ. ನನಗೆ ಮದುವೆ ಮಾಡಿ ಕೊಟ್ಟು........"

" ಇಲ್ಲ; ನನ್ನ ಬಾಬಾಸಾಹೇಬ ಇಲ್ಲ. "

" ಇಬ್ಬರೂ ಕೂಡಿಯೇ ಹೋಗಿರುವರು ! ಪೋಲೀಸರಿಗೆ ಫೋನ ಮಾಡುವೆ. "

ಸದಾನಂದ ಅಲ್ಲಿ ನಿಲ್ಲದೆ ಹೋಗಿಬಿಟ್ಟ.

ಸುಬ್ಬರಾವನಿಗೆ ಹಾಸಿಗೆಯ ಮೇಲೆ ಕೂಡುವದಾಗಲಿಲ್ಲ. ಎದ್ದು ಬಾಬಾಸಾಹೇಬನ ಕೋಣೆಯ ಕಡೆಗೆ ನಡೆದ. ಉಳಿದವರೂ ಸಂಗಡ ಹೋದರು. ಕೋಣೆಯನ್ನು ಹೊಕ್ಕರು. ಹಾಸಿಗೆಯ ಮೇಲೆಲ್ಲ ಸಣ್ಣ ಸಣ್ಣ ರಕ್ತದ ಕಲೆಗಳು. ಹಾಸಿಗೆ ಹಾಸಿದಂತೆಯೇ ಇತ್ತು. ದೀಪ ಉರಿಯುತ್ತಿದ್ದಿತು.

ಸುಲೋಚನೆಗೆ ಬೆರಗು. ಇವೇನು, ಎಲ್ಲಿ ಹೋದರಿವರು? ಹಾಸಿಗೆಯ ಮೇಲೆ ಮಲಗಿದ ಲಕ್ಷಣಗಳೇ ಇಲ್ಲ. ಬೆಳತನಕ ಓದಿದರೇ? ಕಾಲೇಜಿನ ಅಭ್ಯಾಸ. ಒಮ್ಮೊಮ್ಮೆ ಓದುತ್ತಲೇ ಇರುವರು. ಆದರೆ ನಿನ್ನೆ ರಾತ್ರಿಯ ನನ್ನ ಹಟಕ್ಕೆ ಬೇಸತ್ತು ಎಲ್ಲಿಗಾದರೂ ಹೋದರೊ! ಹೊರಗೆ ಹೋಗಲು ಅಡ್ಡಿ ಮಾಡಿದ್ದೆ. ದಯೆ ಇಲ್ಲ ಅವರಿಗೆ. ರಕ್ತದ ಕಲೆ ಬಿದ್ದ ಹಾಸಿಗೆ ಹಾಗೇ ಇದೆ. ಮಾವ ಕೇಳಿದರೆ ಏನೆಂದು ಹೇಳಲಿ? ಗಾಯವನ್ನೇನೋ ಮುಚ್ಚಿಕೊಂಡಿರುವೆ.

ಆ ಸುಮಿತ್ರೆಯ ಸಲುವಾಗಿಯೇ ಇದೆಲ್ಲ. ಇಲ್ಲವಾದರೆ ನನ್ನ ಮೇಲೆ ಇಷ್ಟೇಕೆ ಕಠೋರವಾಗುತ್ತಿದ್ದರು, ಎಂದು ಸುಲೋಚನೆ ಯೋಚಿಸುತ್ತಿದ್ದಳು.

"ರಕ್ತ!" ಎಂದು ಉದ್ಗರಿಸಿದ ಸುಬ್ಬರಾವ.

"ಅಹುದು. ರಾತ್ರಿ ಅವರಿಗೆ ಹಣ್ಣು ಹೆಚ್ಚಿ ಕೊಡುವಾಗ ನನ್ನ ಕೈಗೆ ಚಾಕು ಹತ್ತಿ ಗಾಯವಾಯಿತು."

ಸಮಯೋಚಿತ ಯುಕ್ತಿ ಸಿಕ್ಕಿದ್ದಕ್ಕೆ ಸಮಾಧಾನವಾಯಿತವಳಿಗೆ.

"ಹೌದೊ?"

ಎಂದು ಅವಳ ಕಡೆಗೆ ನೋಡಿದ ಸುಬ್ಬರಾವ. ಸುಲೋಚನೆಯ ಕೈಯು ಅರಿವೆಯಿಂದ ಕಟ್ಟಿದ್ದಿತು. ಅವನಿಗೆ ಸರಿಯೆನಿಸಿತು. ಯಾವುದೋ ಒಂದು ಭಾವನೆಯು ಚೇತರಿಸಿ ಸ್ವಲ್ಪ ಸಮಾಧಾನವೂ ಆಯಿತು.

"ಸುಲಾ, ಬಾಬಾಸಾಹೇಬನನ್ನು ಹೀಗೆಯೇ ನೋಡಿಕೊಳ್ಳುತ್ತಿರಮ್ಮ."

ಈಗ ತನ್ನ ಮೇಲಿನ ಒಂದು ಹೊಣೆಯಿಳಿದಂತೆ ಆಗಿದ್ದಿತವನಿಗೆ. ಮನದಲ್ಲಿಯೇ, ಈಗ ಇಬ್ಬರಲ್ಲಿಯೂ ಒಳ್ಳೇ ಪ್ರೇಮವಿದೆ. ಇನ್ನು ಮೇಲಿಂದ ಮೇಲೆ ಸುಮಾ ಇಲ್ಲಿ ಬರದಂತೆ ನೋಡಿದರಾಯಿತು. ಎಂದುಕೊಂಡ. ಹಾಗೆಯೇ ಹೊರಗೆ ಹೋಗುತ್ತ,—

"ಸದಾನಂದ ಸಂಶಯದ ಮನುಷ್ಯ, ಹೀಗನ್ನುವನಾಯಿತು. ನನ್ನ ಬಾಬಾಸಾಹೇಬ ನಸುಕಿನಲ್ಲಿ ಓದಿ ಬೇಸರ ಬರಲು ಹೊರಗೆ ಅಡ್ಡಾಡಲು ಹೋಗಿರಬೇಕು. ಈಗ ಬಂದಾನು. ಹೋಗುವಾಗ ದೀಪವನ್ನೂ ಆರಿಸಲು

ಆಹುದು. ಅವರ ಭೆಟ್ಟಿಯೇ ನಮ್ಮ ಹುಡುಗನ ತಲೆ ಕೆಡಿಸಿತು. ದೇಶ ವನ್ನೇ ಹಾಳಿಗೆ ಹಚ್ಚಿದ ಗಾಂಧಿ ಮಹಾರಾಯಾ. ಸರಕಾರಕ್ಕೆ "ಚಲೇಜಾವ" ಎಂದು ಹೇಳಿ, ಜೇಲಿಗೆ ಹೋಗಿ ಕುಳಿತ.

ಇತ್ತ ದೇಶಕ್ಕೇನೇ ಬೆಂಕಿ ಹತ್ತಿದೆ. ಕೊಲೆಗಳೇನು? ಸುಲಿಗೆಗ ಳೇನು? ಸುಡುವುದೇನು? ಎಲ್ಲವೂ ಹಾಳುಗೇಡಿಯೇ. ಟಪಾಲು ಒಡಿದರೆ ಸ್ವರಾಜ್ಯ ಸಿಕ್ಕೀತೆ?

ಸ್ಟೇಶನ್ ಸುಟ್ಟು ಸ್ವಾತಂತ್ರ್ಯ ಸಿಗುವುದಿದ್ದರೆ ಎಂದೋ ಸಿಕ್ಕಿ ಹೋಗುತ್ತಿತ್ತು.

ಇದು ನಮಗೇ ಅನಿಷ್ಟಕರ. ಹುಂಬರ ಕೂಡ ವ್ಯವಹಾರ! ಅಂತೇ ಬ್ರಿಟಿಷ ಸರಕಾರ ಮುಳ್ಳಿನಿಂದಲೇ ಮುಳ್ಳು ತೆಗೆಯುವ ಯುಕ್ತಿ ಹೂಡಿದೆ ಯಲ್ಲ. ಫಂಡ ದಂಡ ನಮ್ಮ ಮೇಲೆಯೇ ಹೇರಿದೆ. ಬಹಾದ್ದೂರ ಸರಕಾರ ವದು!

ಆಯ್ತು, ಬಾಬಾಸಾಹೇಬ ಬಂದೂಕು ತಕ್ಕೊಂಡು ಹೊರಗೆ ಏತಕ್ಕೆ ಹೋದಾನು?

ನನಗೆ ಹೇಳದೆ ಹೊಸ್ತಿಲ ಹೊರಗೆ ಕಾಲಿಡುವದಿಲ್ಲನಾತ.

ಇನ್ನೂ ಮಲಗಿರಲೇಬೇಕು.

§ § § §

ಎಂದು ವಿಚಾರಿಸುತ್ತಲೇ ಹೋಗಿ ಕೋಣೆಯ ಬಾಗಿಲ ಮೇಲೆ ಕೈಯಿಟ್ಟ. ಅವನ ಕೈ ಆಘಾತಕ್ಕೆ ಬಾಗಿಲ ತೆರೆದು ಒಮ್ಮೆಲೇ ಗೋಡೆಗೆ ಬಡೆದವು. ಸುಬ್ಬರಾವನಿಗೆ ಆ ಸಪ್ಪಳ ಹತ್ತು ತೋಫಿನಷ್ಟು ಭೀಕರ ಎನಿ ಸಿತು. ಎದೆ ನಡುಗಿತು. ಎದುರಿನ ಕಿಡಿಕಿಯಿಂದ ತಂಗಾಳಿ ಒಳನುಗ್ಗಿತು. ಮೈಮೇಲೆ ಮುಳ್ಳುಗಳೆದ್ದುವು. ಒಂದು ಕ್ಷಣ ಸುಮ್ಮನೆ ನಿಂತ ಸುಬ್ಬರಾವ.

ಇಂಥ ಸಪ್ಪಳಕ್ಕೆ ಬಾಬಾಸಾಹೇಬ ಎಚ್ಚರಾಗಲೇಬೇಕು. ಈಗ ಎದ್ದು ಹೊರಗೆ ಬಂದೇ ಬರುವನು. ಈ ವೇಳೆಯಲ್ಲಿ ಅಂಥ ಗಾಢ ನಿದ್ರೆ ಹತ್ತಲು ಶಕ್ಯವಿಲ್ಲ.

ಹೆದರಿದನೇನೋ ಹುಡುಗ. ಆಂ! ಇನ್ನೂ ಬರಲಿಲ್ಲವಲ್ಲ. ಏಳಲಿಲ್ಲ ವೇನೋ. ಜ್ವರ ಬಂದು ಶುದ್ಧಿಹಾರಿ ಬಿದ್ದಿರುವನೇನೋ?

ಎಂದು ಒಳಗೆ ಹಣಿಕಿಹಾಕಿದ ಸುಬ್ಬರಾವ. ಎದೆ ಧಸ್ಸೆಂತು, ಆ ದೃಶ್ಯ ನೋಡಿ! ಏನಾದರೂ ಮಾಡಿಸಿದಳೇ ಆ ಸುನಂಧಿ! ಚಾಂಡಾಳಿನಿ! ಕೆಟ್ಟ ಹೆಂಗಸರ ಕಾರಸ್ಥಾನ ಎಂದೂ ತಿಳಿಯುವದಿಲ್ಲ.

ನಾನೆಷ್ಟೋ ಹುಡುಗನಿಗೆ ಹೇಳುತ್ತಬಂದೆ. ರಾತ್ರಿ ಒಬ್ಬನೇ ಹೊರಗೆ ಹೋಗಬೇಡ. ಯಾರು ಏನಾದರೂ ಕೊಟ್ಟರೆ ತಿನ್ನಬೇಡ. ಅಪರಿಚಿತರ ಸಂಗತಿಬೇಡ. ಬೇರೆ ಕಡೆಗೆ ತಿನ್ನುಣ್ಣುವುದೇ ಬೇಡ. ಅದಕ್ಕಾಗಿ ಅವನಿಗೆ ಹಟ್ಟೀಎಲ್ಲಿ ಕಾಲಿಡದಂತೆ ಕಟ್ಟಪ್ಪಣೆ ಮಾಡಿದ್ದೆ.

ಯಾರ ವಿಶ್ವಾಸ ಯಾರಿಗೆ? ಒಂದಲ್ಲ ಎರಡಲ್ಲ; ವರ್ಷಕ್ಕೆ ಇಪ್ಪತ್ತು ಸಾವಿರ ಉತ್ಪನ್ನ ಬರುವ ಆಸ್ತಿ. ಅದಕ್ಕಾಗಿ ಅವಳು ಬೇಕಾದುದನ್ನು ಮಾಡಿಸ ಬಹುದೆಂಬುದು ನನಗೆ ಗೊತ್ತಿತ್ತು. ಕೊನೆಗೆ ಹಾಗೇ ಆಗಿರಬೇಕು.

ಹಾ! ಬಾಬಾಸಾಹೇಬ! ಇಷ್ಟು ಹೊತ್ತಿನವರೆಗೆ ನೀನೆಂದೂ ಮಲಗಲಾರೆ, ಎಂಬುದು ನನಗೆ ಗೊತ್ತಿತ್ತು.

ಇರುಳು ಸುಮಿತ್ರಾ ಅಷ್ಟೇ ಬಂದಿದ್ದಳಲ್ಲ! ಅವಳಿಂದೇನಾದರೂ ಘಾತ ವಾಗಿರಬಹುದೆ? ಹೆಣ್ಣಿನ ನಂಬುಗೆಯೇನು? ಸಾಕಿ ಸಲುಹಿದ ಮನೆಯಿದು. ಅದನ್ನು ನೆನೆಯಬಾರದೆ? ಒಲಿದರೆ ನಾರಿ, ಮುನಿದರೆ ಮಾರಿ.

ಅಹುದು. ಮುನಿಯಲೂ ಬಹುದು. ಅವಳನ್ನು ಸದಾನಂದನಿಗೆ ಮದುವೆ ಮಾಡಿಕೊಟ್ಟಾಗಲೇ ಅಸಂತುಷ್ಟಳಾಗಿದ್ದಳು.

ಹುಚ್ಚ ಹುಡಿಗೆ! ಇನಾಮದಾರನ ಮಗನನ್ನು ಮದುವೆಯಾಗಲು ಬಯಸಿದರೆ ಸಾಧ್ಯವಾದೀತೆ? ಪರದೇಶಿ ಕೂಸೆಂದು ಜೋಕೆ ಮಾಡಲಿಕ್ಕೆ ತಂದರೆ ಮನೆಯ ಒಡತಿಯಾಗ ಬಯಸಿದಳು. ಇದೆಲ್ಲಿಯ ನ್ಯಾಯ?

ಹೆಂಗಸರ ಅಸಮಾಧಾನ ಏನನ್ನು ಮಾಡಿಸದೆ ಇದ್ದೀತು? ನಿನ್ನಿನ ಇರಳು ಬಹಳ ಹೊತ್ತಿನವರೆಗೆ ಕುಳಿತಿದ್ದಳಂತೆ. ನನ್ನ ಮಗನನ್ನು ಯಾವ ಪೇಚಿನಲ್ಲಿ ತಂದಳೋ. ಕೊನೆಯ ನಿರ್ಧಾರಕ್ಕೇ ಬಂದಿದ್ದಳೇನೋ!

* * * *

ಸುಬ್ಬರಾವನ ಬಾಯಿಂದ ಮಾತೇ ಹೊರಡದಾದುವು. ಬಾಗಿಲ ತೋಳನ್ನು ಎಷ್ಟು ಗಟ್ಟಿಯಾಗಿ ಹಿಡಿದಿದ್ದರೂ ನೆಲಕ್ಕೆ ಕುಸಿದುಬಿದ್ದ. ಆಗ ಆತನ ಬಾಯಿಂದ ಹೊರಟ ಉದ್ಗಾರವಿದು:—

ಹೀಗೆಯೇ ಇನ್ನೆಷ್ಟು ದಿನ ನಡೆಯುವದೋ ನೋಡುವೆ. ಆ ಗದಾ ಸಂರಕ್ಷನ್ನೆ ಹೊರಗೆ ಹಾಕಿಸುವೆ. ಅಂದಮೇಲೆ ಇವಳೇಕೆ ಇಲ್ಲಿಗೆ ಬರುವಳು?

ಆ ಸುಮಿತ್ರೆಯಿಂದಲ್ಲವೆ ನಮ್ಮವರು ನನ್ನ ಮೇಲೆ ಇಷ್ಟು ಕಠೋರ ರಾದುದು. ಬಳೆಗಳೊಡೆದು, ಕೈಯಿಂದ ರಕ್ತಸುರಿಯುತ್ತಿದ್ದರೂ ಹಾಗೆಯೇ ನುಗಿಸುಕೊಟ್ಟು ಇರುಳು ಹೋದರಲ್ಲ. ರಾತ್ರಿ ಅವಳು 'ಮಹಾದ್ವಾರ'ದ ಬಳಿಯಲ್ಲಿ ದಾರಿಕಾಯುತ್ತ ನಿಲ್ಲುವೆನೆಂದು ಹೇಳಿ ಹೋಗಿದ್ದಳು!

ಚಾಂಡಾಲಿನಿ! ಇನ್ನೊಮ್ಮೆ ಬರಲಿ ನನ್ನ ಮನೆಗೆ! ಹೇಳ್ತೇನಿ. ನನ್ನ ಮುಂದೆ ಎಷ್ಟು ಸೆಡವೋ ಇವಳದು! ತೊತ್ತಿನಮಗಳು!

ಇದೇ ವಿಚಾರದ ಕಾವಿನಲ್ಲಿ, ತಲೆಬಾಚಿಕೊಂಡು ಸ್ನಾನಮಾಡ ಲಿಕ್ಕೆಂದು ತನ್ನ ಶೃಂಗಾರದ ಪೆಟ್ಟಿಗೆ ತೆಗೆದಳು. ಇರುಳು ಒಡೆದುಬಿದ್ದ ಬಳೆಯ ತುಣುಕುಗಳು ಇನ್ನೂ ಅಲ್ಲಿಯೇ ಇದ್ದುವು. ಅವು ಇವಳಕಡೆಗೆ ನೋಡಿ ಕೊಂಕುನಗೆ ಬೀರಿದಂತೆ ಭಾಸವಾಯಿತವಳಿಗೆ. ಒಂದು ಕ್ಷಣ ಅವುಗಳಕಡೆಗೆ ನೋಡಿದಳು. ನಿಶ್ಚಲನಯನಗಳಿಂದ ಅವುಗಳನ್ನೇ ದಿಟ್ಟಿಸಿ ನೋಡಿದಳು. ಅವಳಿಗೆ ಅಸಹ್ಯ ವೇದನೆಯಾಯಿತು. ಆಗಲೇ ಎದುರಿಗಿನ ನಿಲುಗನ್ನಡಿಯ ಮೇಲೆ ಅವಳ ದೃಷ್ಟಿಬಿತ್ತು. ಕೊರಳೊಳಗಿನ ಮಂಗಳ ಸೂತ್ರದ ಎಳೆಯೊಂದು ಹರಿದಿದೆ! ಒಮ್ಮೆಲೇ ಹೃದಯ ನಡುಗಿತು.

ಇದೇನು? ಅಶುಭಚಿನ್ಹಗಳು! ನನ್ನ ಮಾಂಗಲ್ಯವೇ ಹರಿಯುತ್ತಲಿದೆ ಹರಿದಿದೆ. ಬಳೆ ಒಡೆದವು. ಇವೆಲ್ಲ ಅಶುಭಚಿನ್ಹಗಳೇ. ಇದಕ್ಕಿಂತ ಅಮಂಗಲ ಇನ್ನೇನಾಗಬೇಕಾಗಿದೆ?

ಅವರು ತಿರುಗಿ ಬರಲಿಕ್ಕಿಲ್ಲವೆ?
ಜೀವಕ್ಕೇನಾದರೂ ಮಾಡಿಕೊಂಡಿರಬೇಕೆ?
ರಾತ್ರಿ ಯಾವಾಗ ಹೋದರು?
ಎಲ್ಲಿ ಹೋದರೋ?
ಏನಾಯಿತೋ?
ನಾನು ಕೋಣೆಬಿಟ್ಟು ಹೊರಗೆ ಬರಬಾರದಿತ್ತು.
ನಾನೇಕೆ ಹಾಗೆ ಅವರನ್ನು ತಡವಿದೆ?

ಪ್ರತಿ ಸರಕಾರ

ಸುಮಿತ್ರಾ ಬಂದರೆ ಅವರದೇನು ತಪ್ಪು ?

ಬಂದವಳ ಕೂಡ ಮಾತಾಡದೆ ಇರುವುದು ಹೇಗೆ ?

ಮನೆಗೆ ಬಂದಿದ್ದಳು. ಮೊದಲಿನಿಂದಲೂ ಕೂಡಿ ಆಡಿ ಬೆಳೆದವರು ! ಬರಬೇಡವೆಂದು ಹೇಗೆ ಹೇಳಲಿಕ್ಕಾದೀತವರಿಗೆ ?

ಮಾತಾಡಿದರೆ ಕೂಡಿ ಕುಳಿತರೆ ಎಲ್ಲರೂ ಹಾಗೇ ಇರುವರೆ ?

ಇದ್ದರೇನಾಯಿತು ?

ಗಂಡಸರು! ಭ್ರಮರಗಳಿದ್ದಂತೆ. ಎಷ್ಟು ಸುಮಗಳನ್ನು ಮೂಸಿದರೇನಾಯಿತು ? ಮುಡಿದರೇನಾಯಿತು ?

ನಾವು ಅವರನ್ನು ಕಾಯ್ದರೆ ನಡೆದಿತೇ ? ತಮ್ಮ ಮನಸ್ಸಿನಿಂದಲೇ ಉಳಿದರೆ ಉಳಿದರು.

ಹೆಂಗಸರ ಹಣೆಬರಹವೇ ಹೀಗೆ.

ಗಂಡಸು ಒಂದು ಬಿಟ್ಟು ಹತ್ತು ಲಗ್ನವಾಗಬಹುದಂತೆ. ಹೆಂಗಸು ಗಂಡ ಸತ್ತರೆ ಸತಿ ಹೋಗಬೇಕು !

ಏನು ನಮ್ಮ ಧರ್ಮಶಾಸ್ತ್ರ ! ಎಂಥ ಪಕ್ಷಪಾತ ! ಗಂಡಸರೇ ಶಾಸ್ತ್ರಗಳನ್ನು ಬರೆದರೆಂದು ಈ ನಿಯಮಗಳನ್ನು ಹಾಕಿರಬೇಕು. ಅದೇ ಸ್ತ್ರೀಯರಲ್ಲಿ ಯಾರಾದರೂ ಶಾಸ್ತ್ರಗಳನ್ನು ಬರೆದಿದ್ದರೆ............

ಬರೆಯಲಿಲ್ಲ. ಆಗ ಬರೆಯುವ ಸಾಮರ್ಥ್ಯ ಸ್ತ್ರೀಯರಿಗೆ ಇರಲಿಲ್ಲ. ಅದನ್ನು ಪುರುಷರು ಬರಗೊಟ್ಟಿರಲಿಲ್ಲ. ಈಗ ಬರೆದಾರು ? ಬರೆಯದೇನು ?

ಮದುವೆ ಮಾಡಿಕೊಳ್ಳುವದೆಂದರೆ ಪುರುಷನು ಲೋಕರೀತಿಯಿಂದ ಒಬ್ಬ ಸ್ತ್ರೀಯ ಸೌಂದರ್ಯವನ್ನು ಕೊಂಡುಕೊಂಡಂತೆಯೇ. ವೇಶ್ಯೆಗೂ ಗೃಹಿಣಿಗೂ ಅಂತರವೇನಾಯಿತು ?

ಅವಳು ಕಿರುಕಳ ವ್ಯವಹಾರಿ. ಇವಳು ಠೋಕ ವ್ಯಾಪಾರಿ !

ಅಂತೂ ಪುರುಷ ಗಿರಾಕಿ ! ಅವನ ಮನಸ್ಸು ಎಳೆಯುವಂತೆ ವೇಶ್ಯೆ ಆಗಾಗ ಸಿಂಗರಿಸಿಕೊಂಡು ತನ್ನ ಸೌಂದರ್ಯವನ್ನು ಪೇಟೆಯ ಮಾನಕ್ಕೆ ಬೆಲೆ ಹೆಚ್ಚುವಂತಿಡುವಳು. ಗೃಹಿಣಿ ಒಮ್ಮೆಲೇ ಗುತ್ತಿಗೆಕೊಟ್ಟದರಿಂದ ಅವಳಿಗೆ ಕ್ರಯ ಏರುವ ಆಶೆಯಿಲ್ಲ. ಸಾದಾ ಇದ್ದು ಬಿಡುವಳಾಯಿತು. ಇಷ್ಟೇ.

ಮಾಂಗಲ್ಯ, ಸೌಭಾಗ್ಯ, ಶುಭ ಅಶುಭಗಳ ಕಲ್ಪನೆಯೆಲ್ಲ ಕಪೋಲ ಕಲ್ಪನೆಗಳೇ.

ಇದೊಂದು ವ್ಯವಹಾರ.

ಈ ವ್ಯವಹಾರ ಸಾಧಿಸಿಕೊಂಡವಳು ಕುಶಲೆ. ಅವಳ ಕಡೆಗೆ ಗಿರಾಕಿ ಹೊರಳುವದು ಸ್ವಾಭಾವಿಕ. ಅಂಥವಳ ಚಾತುರ್ಯಕ್ಕೆ ನಾವೇಕೆ ಕರುಬಬೇಕು ?

ಇನ್ನೂ ಸ್ಪರ್ಧಿಸುವದೊಳಿತು. ಸುಮಿತ್ರಾ ನನ್ನ ಪ್ರತಿಸ್ಪರ್ಧಿ. ಅವಳ ಮೇಲೇಕೆ ನಾನು ಮುನಿಯಬೇಕು ? ಆಕೆ ತನ್ನ ಕರ್ತವ್ಯವನ್ನೇ ತಾನು ಮಾಡುತ್ತ ಇರುವಳು.

ನಾನೂ ನನ್ನ ಕರ್ತವ್ಯ ಮಾಡಿದರಾಯಿತು.

ಯಾರ ಚಾತುರ್ಯ ಮಿಗಿಲೋ ಅವರ ಕಡೆಗೆ ಪುರುಷ ಒಲಿದೇ ಒಲಿಯುವ. ಇದೇನು ಮಹಾ !

ಎಂದುಕೊಂಡು, ಸುಲೋಚನೆ ಸ್ನಾನಮಾಡಿ ದಿನದಕಿಂತ ಸ್ವಲ್ಪ ಹೆಚ್ಚಾಗಿಯೇ ಸಿಂಗರಿಸಿಕೊಂಡಳು. ಕನ್ನಡಿಯ ಎದುರಿಗೆ ನಿಂತು, ನೋಡಿ ನೋಡಿ ನಲಿದಳು. ತನ್ನಷ್ಟಕ್ಕೆ ತಾನೇ ನೋಡಿಕೊಂಡಳು.

ಸಿರಿವಂತಿಕೆಯ ಸುಖದಲ್ಲಿ ಬೆಳೆದ ಆ ದೇಹ ರಸಬಾಳೆಯಂತೆ ಒಪ್ಪುತ್ತಿದ್ದಿತು. ತಿಳಿಗುಲಾಬಿ ಬಣ್ಣದ ಕೆನ್ನೆ, ನಸುಗೆಂಪು ತುಟಿ, ಕೊಂಚ ಕಂದು ಬಣ್ಣಕ್ಕೆ ತಿರುಗಿದ ಮಿರುಗುವ ರೇಶ್ಮೆಯಂತಹ ಕೂದಲು, ಆ ಮೈಯ ಸೌಕುಮಾರ್ಯಕ್ಕೆ ಸರಿದೂಗುವ ನಯವಾದ ರೇಶಿಮೆಯ ತಿಳಿವು ಸೀರೆ, ಬಿಗಿದು ತೊಟ್ಟ ರವಕೆಯಿಂದಾಗಿ ಎದ್ದು ಕಾಣುತ್ತಿದ್ದ ಆಕರ್ಷಕವಾದ ಎದೆಕಟ್ಟು, ಸೆರಗು ಸರಿದುದರಿಂದ ಇನ್ನೂ ಸ್ಫುಟವಾಗಿ ತೋರುವ ಎದೆಯವಗಟ. ನವಜವ್ವನದ ರಸಭರಿತ ನಗೆಯು ಮುಖವನ್ನರಳಿಸುವುದು, ಗಲ್ಲಗಳನ್ನು ಹಿಗ್ಗಿಸುವುದು. ಕಣ್ಣುಗಳು ಹರವಾಗುವವು. ಹುಬ್ಬುಗಳು ತಳುಕುವವು, ಕುಣಿಯುವವು.

ಈಗ ಅವರು ಬಂದರೆ ?

ಈ ವಿಚಾರ ಬಂದೊಡನೆಯೇ ಅವಳ ಕೆನ್ನೆಗಳಿಗೆ ಇನ್ನಿಷ್ಟು ರಂಗೇರಿತು. ಅವಳ ಸಂಪೂರ್ಣ ಶರೀರವೂ ಉಲ್ಲಾಸದಿಂದ ಅರಳಿ ನಿಂತಿತು. ಬಾಗಿಲವರೆಗೆ ಹೋಗಿ,—

" ರಾವಸಾಹೇಬರು ಬಂದರೇನೊ ?"

ಎಂದು ಸಿಂಗರದ ಬೆಡಗಿನಿಂದ ಕೇಳಿದಳು.

" ಯಾರು ? ಸಣ್ಣವರೋ ದೊಡ್ಡವರೋ ? "

" ದೊಡ್ಡವರು ಬರಲಿಕ್ಕೆ ಎಲ್ಲಿ ಹೋಗಿದ್ದಾರೆ."

ಸುಲೋಚನೆ ಅಡಿಗೆಯವನಿಗೆ ಸಿಡುಕಿನಿಂದ ಕೇಳಿದಳು.

" ಹಾಗಲ್ಲ, ಬಾಯಿಸಾಹೇಬ. ದೊಡ್ಡವರು ಉಟಕ್ಕೆ ಬಂದದ್ದು ಕೇಳಿದಿರೆಂದು ಭಾವಿಸಿದೆ. ಸಣ್ಣವರು ಬರಲೇ ಇಲ್ಲ. ಇನ್ನೂ ಮುಂಜಾನೆ ಚಹ ಹಾಗೇ ಕೂತಿದೆ ?"

ವಿನೀತನಾಗಿ ನುಡಿದನಾತ.

" ಊಟದ ಹೊತ್ತಾಯಿತು. ಇನ್ನೂ ಬರಲಿಲ್ಲವೊ ?"

ನಿಟ್ಟುಸಿರಿನಲ್ಲಿ ತೇಲಿ ಬಂದಿತೀ ಮಾತು. ಚಿಂತೆಯಿಂದ ಒಮ್ಮೆಲೇ ಆವಳ ಮುಖವಳಿಯಿತು. ಒಳಗೆ ಹೋಗಿ ಕುಳಿತಳು.

ನನ್ನ ಶೃಂಗಾರ ಕಾನನದ ಬೆಳದಿಂಗಳಾಯಿತೆ ?
ಕೆಟ್ಟ ಮೇಲೆ ಬುದ್ಧಿ ಬಂದೇನು ಪ್ರಯೋಜನ ?
ಎಂದು ಅಂಗೈಯಲ್ಲಿ ಗಲ್ಲನ್ನೂರಿ ಕುಳಿತುಬಿಟ್ಟಳು. ಕುಳಿತಲ್ಲಿಯೇ ಲಿವಿ ಲಿವಿ ಒದ್ದಾಡಿದಳು, ಕಿಚ್ಚಿನಲ್ಲಿ ಬಿದ್ದ ಕೀಡಿಯಂತೆ.

ಈ ಹಾಳು ಸಂಪ್ರದಾಯ ಎಲ್ಲಿಂದ ಬಂದಿದೆಯೋ ? ಹೆಂಗಸರು ಹೊರಗೆ ಕಾಲಿಡಕೂಡದಂತೆ. ಇಲ್ಲವಾದರೆ ನಾನೇ ಹೋಗಿ ನೋಡಿ ಬರುತ್ತಿದ್ದೆ.

ಎಲ್ಲಿ ಹೋದರೊ ?

ಈ 'ಗೋಷಾ' ಪದ್ಧತಿ ಎಂದು ಹಾಳಾಗಿಹೋಗುವುದೋ !

" ಖಂಡೂ !" ಎಂದು ಒಮ್ಮೆಲೇ ಕೂಗಿದಳು. ದನಿ ಕಿರುಚಾಗಿದ್ದಿತು.

ಖಂಡು ಬಾಗಿಲ ಹೊರಬದಿಗೆ ಬಂದುನಿಂತ. ವಿನಮ್ರ ಸ್ವರದಿಂದ ಕೇಳಿದ.

" ಏನು ತಾಯಿ ? "

“ ಹೊರಗೆ ಅವರು ಬಂದರೇನು ನೋಡೋ ? ”

ಅವನು ಓಡಿದ. “ ಹೂಂ! ” ಎನ್ನುವ ಸ್ವರ ಆ ಮೇಲೆ ಅವನ ಬಾಯಿಂದ ಹೊರಟಿತು.

ಸುಬ್ಬರಾವ ಒಳಗೆ ಬಂದ.

“ ಊಟದ ಹೊತ್ತಾದರೂ ಇನ್ನೂ ಬಾಬಾಸಾಹೇಬನ ಸುಳಿವಿಲ್ಲವೆ ? ಛೆ! ಎಂಥ ಹುಡುಗರಿವರು. ತಮ್ಮ ಹೊಟ್ಟೆಯ ಚಿಂತೆಯೂ ತಮಗೆ ಇರಬಾರದೆಂದರೆ ? ಎಲ್ಲಿಯಾದರೂ ಹರಟೆಗೆ ಕುಳಿತರೆ ತೀರಿಯೇ ಹೋಯಿತು. ಹೊತ್ತು ಹೋದ ಕಲ್ಪನೆಯೂ ಇರದು. ಮನೆಯಲ್ಲಿ ಊಟಕ್ಕೆ ದಾರಿ ಕಾಯುವರೆಂಬ ವಿಚಾರವಾದರೂ ಬರಬಾರದೆ? ಕಾಲೇಜಿನಲ್ಲಿ ಕಲಿಯುತ್ತಾರಂತೆ! ಉಚ್ಚ ಶಿಕ್ಷಣವಂತೆ! ಚಿಕ್ಕ ಪುಟ್ಟ ವ್ಯವಹಾರಗಳೂ ತಿಳಿಯದ ಆ ಶಿಕ್ಷಣ ಏತಕ್ಕೋ ಏನೋ ? ಈಗಿನ ಹುಡುಗರಿಗೆ ಏನೂ ಅನ್ನುವಂತಿಲ್ಲ ಬೇರೆ. ಹಿರಿಯರ ಮನಸ್ಥಿತಿಯನ್ನೇ ಅರಿಯರವರು ! ”

ಎಂದು ಸುಬ್ಬರಾವ ಬಾಯಲ್ಲಿಯೇ ಏನೇನೋ ಅನ್ನುತ್ತ ತಿರುಗಿ ಹೊರಟ.

ಅದೇನೋ ವಿಚಾರ ಬಂದು ಹೊರಳಿ ಕೇಳಿದ.

“ ಬಾಬಾಸಾಹೇಬ ನಿನಗೂ ಹೇಳಿ ಹೋಗಿಲ್ಲವೆ ಸುಲು ? ”

“ ಇ....ಲ್ಲ ! ನಾನು ಏಳುವ ಮುಂಚೆಯೇ ಹೋಗಿಬಿಟ್ಟಿದ್ದಾರೆ. ”

“ ಮುಂಚೆಯೇ ಹೋಗಿದಾನೋ ರಾತ್ರಿಯೇ ಹೋಗಿದಾನೋ ಯಾರಿಗೆ ಗೊತ್ತು ? ”

“ .... ”

“ ಎಲ್ಲಾ ಹೀಗೇ, ತಮ್ಮ ಗಂಡಂದಿರ ಚಿಂತೆ ತಮಗಿಲ್ಲ. ಹೊತ್ತು ಏರುವವರೆಗೆ ಹಾಸಿಗೆಯಲ್ಲಿ ಬೀಳ್ತಾರೆ. ನಾವೇ ಇನ್ನೂ ಎಷ್ಟು ದಿನ ಅಂತ ಇವರನ್ನು ಕೆಳಗೆ ಮೇಲೆ ನೋಡಬೇಕೊ ? ”

ಸಿಡುಕಿನಿಂದ ಸುಬ್ಬರಾವನೇನೋ ಮಾತನಾಡಿದ. ಆದರೆ ಅವನ ಹೃದಯ ಮಗನಿಗಾಗಿ ಬೆಂದು ಹೋಗಿದ್ದಿತು. ಹಾಗೆಯೇ ನೆಟ್ಟಗೆ ಅವನ ಕೋಣೆಯನ್ನೇ ಸೇರಿದ.

ಬಾಬಾಸಾಹೇಬ ಹೀಗೆಂದೂ ಹೇಳದೆ ಕೇಳದೆ ಹೋಗುವವನಲ್ಲ.

ಅಂಥದೇನಾದರೂ ಅಗತ್ಯದ ಕೆಲಸವಿರಬೇಕೆ ?

ಹಿಂದೊಮ್ಮೆ ಹೀಗೇ ಆಗಿದ್ದಿಲ್ಲ. ಮನೆಯಿಂದ ಸಿನೇಮಾ ನೋಡ ಲಿಕ್ಕೆಂದು ಹೋದವ ಹಾಗೆಯೇ ಸಾಂಗ್ಲಿಗೆ ರಾಜಾಜಿ ಬಂದಿದ್ದರೆಂದು ಲೆಕ ರಕ್ಕೆ ಹೋಗಿಬಿಟ್ಟಿದ್ದನಲ್ಲ. ಆ ದಿನ ಇಡೀ ಇರುಳೆಲ್ಲ ಕಣ್ಣಿಗೆ ಕಣ್ಣು ಹತ್ತಲಿಲ್ಲ.

ನಮ್ಮ ಸುತ್ತಲಿನ ಪರಿಸ್ಥಿತಿ ಬೇರೆ ಹೀಗೆ. ನಮ್ಮ ಬೆನ್ನು ನಮಗೆ ಕಾಣುವದಿಲ್ಲ. ಅದರಲ್ಲಿ ಹುಡುಗ ಇಂಥ ಸ್ವಭಾವದವ. ಮೈಚಳಿ ಬಿಟ್ಟು ಬೇಕಾದಲ್ಲಿ ತಿರುಗುವನು.

ಇಂದೂ ಅಂದಿನಂತೆಯೇ ಎಲ್ಲಿಯಾದರೂ ಹೋಗಿರಬೇಕೆ ?

ನನ್ನನ್ನು ಸುಮ್ಮನೆ ಏಕೆ ಎಬ್ಬಿಸಬೇಕೆಂದು, ಹೇಳದೆ ಹಾಗೇ ಹೋಗಿ ದ್ದರೂ ಹೋಗಿರಬೇಕು. ಬೆಳಗಿನ ನಾಲ್ಕು ಗಂಟೆಗೊಂದು ಗಾಡಿಯಿದೆ ಯಲ್ಲ! ಅದಕ್ಕೇನಾದರೂ........

ಛೆ! ಹಾಗೆಂದೂ ಹೋಗಲಾರ ಬಾಬಾಸಾಹೇಬ. ಹಾಗೆ ಹೋಗು ವಂತಿದ್ದರೆ ನನಗೆ ಒಂದು ಪತ್ರವನ್ನಾದರೂ ಇಟ್ಟುಹೋಗುತ್ತಿದ್ದ.

ಮೇಜಿನ ಮೇಲೇನಾದರೂ ಇಟ್ಟಿರಬೇಕೆ ?

\+ \+ \+ \+

ಸುಬ್ಬರಾವನು, ಬಾಬಾಸಾಹೇಬನು ಬರೆಯಲು ಕೂಡುವ ಮೇಜಿನ ಸಮೀಪಕ್ಕೆ ಬಿರುಗಾಳಿಗೆ ಸಿಲುಕಿದ ರವದೆಯಂತೆ ಹೋದ. ಮೇಜಿನ ಮೇಲಿನ ಪುಸ್ತಕಗಳನ್ನು ಅತ್ತಿತ್ತ ಎತ್ತಿ ಇಡತೊಡಗಿದ. ಎಲ್ಲಿಯಾದರೂ ಒಂದು ಸಣ್ಣ ಕಾಗದದ ತುಣುಕು ದೃಷ್ಟಿಗೆ ಬಿದ್ದೀತೆಂದು ಹುಡುಕಿದ. ಕಣ್ಣುಗಳು ಮೇಜಿನ ಮೇಲೆ ಆಡುತ್ತಿದ್ದವಾದರೂ ಮನಸ್ಸು ಎಲ್ಲಿಯೋ ಹಾರಾಡುತ್ತಿತ್ತು. ಎದುರಿಗೆ ಪತ್ರ ಇದ್ದಿದ್ದರೂ ಆ ವೇಳೆಗೆ ಅವನಿಗೆ ಕಾಣುತ್ತಿದ್ದಿತೋ ಇಲ್ಲವೋ ! ಅಷ್ಟು ದ್ವಿಧಾಚಿತ್ತವಾಗಿದ್ದಿತು.

ಹಾಗೆಯೇ ಪುಸ್ತಕಗಳನ್ನು ತಿರುವಿಹಾಕುತ್ತ ಕೂಗಿದ.

" ಖಂಡೂ ! "

" ಜಿ, ಸರಕಾರ್ ! "

" ಸುನಾ ಮನೆಗೆ ಬಂದಳೇನು ನೋಡೋ"

“ಇನ್ನೂ ಬಂದಿಲ್ಲವಂತೆ........”

“ನಾಲಿಗೆ ತೊಳೆದುಕೊಂಡು ಮಾತಾಡು, ಏನು ಬೊಗಳುವಿ ಇಲ್ಲದ್ದೊಂದು........”

ವಿನಾಕಾರಣ ಕೆರಳಿದ ಸುಬ್ಬರಾವ.

“ಇಲ್ಲ” ಆಳು ಏನನ್ನೋ ಹೇಳಬಯಸಿದ.

“ಸಾಕು ಸುಮ್ಮನಿರು. ಹೋಗಿ ನೋಡಿ ಬಾ. ಅಂದರೆ ಇಲ್ಲೇ ನಿಂತು ಬೊಗಳತಾನ ನೊಕ್ಕಿನವ........”

“ಈಗ ಸದಾನಂದ ಹೊರಗ ಬಂದಿದ್ದ. ಅವನೇ–”

“ಅವನೇ ಏನು?” ಹೊರಳಿ ಕೇಳಿದ ಸುಬ್ಬರಾವ.

“ನಿನ್ನೆ ಮೂರುಸಂಜೆ ಹೊರಗೆ ಹೋದ ಸುಮಾ ಇನ್ನೂ ತಿರುಗಿ ಮನೆಗೆ ಬಂದಿಲ್ಲವಂತೆ”

ಏನ ಹೇಳ್ತಾನ ಆತ. ರಾತ್ರಿ ನಮ್ಮಲ್ಲೇ ಬಂದಿದ್ದಳಂತ ಮತ,”

“ಅದೇ, ಇಲ್ಲಿ ಬಂದಾಕೆ ಮನೆಗೇ ಹೋಗಿಲ್ಲಂತ........”

“ಛೇ! ಹಾಗೆಂದಿಗೂ ಆಗದು.”

“ಸಣ್ಣರಾವಸಾಹೇಬರೂ ಅವರೂ ಕೂಡಿಯೇ........”

“ನೀನ ನೋಡಿದಿಯೋ ಮೂರ್ಖ! ನಡೆ ಇಲ್ಲಿಂದ ನಾಲಿಗೆ ಕಿತ್ತಿ ಕೈಯೊಳಗ ಕೊಟ್ಟೇನು. ಯಾರ ಮುಂದ ಮಾತಾಡತೀದಿ ಗೊತ್ತದ? ಸಲಿಗೆ ನಾಯಿ ತಲಿಗೇರಿತಂತೆ........”

ಬೆದರಿಸಿ ಕಳಿಸಿದ ಸುಬ್ಬರಾವ.

“ತಮ್ಮ ಮಗ ತಮ್ಮ ಕೈಯೊಳಗಿಲ್ಲ. ನಮ್ಮ ಮೇಲೆ ಸಿಟ್ಟಿಗೆ ಬಂದರೇನಾಗೋದು? ಪಾಪ! ಆ ಬಡ ಕಾರಕೂನನ ಕುತ್ತಿಗೆ ಕೊಂದಿಟ್ಟರು, ತಂದೆ ಮಕ್ಕಳು ಕೂಡಿ........”

ಏನೇನೇನೋ ಅನ್ನುತ್ತ ಹೋಗಿಬಿಟ್ಟ ಬಂಡು.

ಸುಬ್ಬರಾವ ಆಳನ್ನೇನೋ ಬೆದರಿಸಿ ಕಳಿಸಿದ. ಆದರೆ ಮನಸ್ಸು ವಿಚಲಿತವಾಗದೆ ಇರಲಿಲ್ಲ.

ಸುಮಾ ಬಾಬಾಸಾಹೇಬ ಇಬ್ಬರೂ ಕೂಡಿಯೇ ಹೋಗಿರಬೇಕೆ?

ಎಲ್ಲಿ ಹೋಗುವವರು ?

ಈ ಪ್ರಶ್ನೆಗಳು ಅವನ ತಲೆಕಾಯಿಸಿದುವು. ಏನಾದರೂ ಉತ್ತರ ಸಿಕ್ಕವಾಯಿತು. ಕೈಗಳು ನೆಲೆಗಾಣದೆ ಆ ಈ ಪುಸ್ತಕ ತೆರೆದು ನೋಡ ಹತ್ತಿದುವು. ಅವನ್ನು ಇವನ್ನು ಮಗುಚಿ ಹಾಕುತ್ತಾ ಸಹಜವಾಗಿ ಮೇಜಿನ "ಡ್ರಾ" ಎಳೆದುವು

"ಆ ! ಇದಕ್ಕೂ ಬೀಗ ಹಾಕಿಲ್ಲವಲ್ಲ ! ಹಾಗೇಬಿಟ್ಟು ಬಿಟ್ಟಿದ್ದಾನೆ. ಎಂದೂ ತೆರೆದಿಡುವವನಲ್ಲ........"

ಇಲ್ಲೇ ಎಲ್ಲಿಯಾದರೂ ಹೋಗಿರಬೇಕು. ಅದಕ್ಕೆ ಹೀಗೆ ಬಿಟ್ಟಿರುವ
ಜನವೇನೋ ದನವಿದ್ದಂತೆ. ಇಲಿ ಹೋದರೆ ಹುಲಿಹೋಯಿತೆನ್ನುವರು
ಬಾಬಾಸಾಹೇಬ ಸುಮಿತ್ರೆಯನ್ನು ತಕ್ಕೊಂಡು ಹೋದನಂತೆ.

ತಿರಸ್ಕಾರದ ನಗೆಯೊಂದು ಸುಬ್ಬರಾವನ ಮುಖದಲ್ಲಿ ಮೂಡಿತು.

ಇದ್ದಕ್ಕಿದ್ದಂತೆಯೇ ಒಳಗಿರುವ ಪುಟ್ಟ ನೋಟಬುಕ್ಕಿನ ಮೇಲೆ ಸುಬ್ಬರಾವನ ದೃಷ್ಟಿ ನೆಲೆಸಿತು.

"ಎಂಥ ಸುಂದರ ಪುಸ್ತಕವಿದು ! ಅದಕ್ಕಂತಲೇ ಇಷ್ಟು ಜಪ್ಪಿಸಿ ಬಾಬಾಸಾಹೇಬ ಒಳಗೆ ಇಟ್ಟಿರುವನು.

ಏನು ಬರೆದಿರಬೇಕಿದರಲ್ಲಿ ?

ಬಾಬಾಸಾಹೇಬನಿಗೆ ಬರೆಯುುವದೊಂದು ಹುಚ್ಚೇ, ಹಗಲೆಲ್ಲ ಏನನ್ನೋ ಬರೆಯುತ್ತಾನೆ. ಪರೀಕ್ಷೆಯ ಅಭ್ಯಾಸ ಬಿಟ್ಟು ಮತ್ತೇನಾದರೂ ಬರೆಯುತ್ತ ಕೂಡುವ, ಹೀಗಾಗಿಯೇ ಹೋದ ಸಲ ಆತ ಬಿ. ಎ. ಪರಿಕ್ಷೆಯಲ್ಲಿ ನಾಪಾಸ ಆದುದು."

ಕೈಯಲ್ಲಿ ತಕ್ಕೊಂಡ ನೋಟಬುಕ್ಕನ್ನು ತೆರೆದು ನೋಡಿದ ಸುಬ್ಬರಾವ. ಮೊದಲನೆಯ ಪುಟದ ಮೇಲೆಯೇ ಬರೆದಿದ್ದಿತು.

"ಆತ್ಮಕಥೆ"

"ಓಹೋ ! ಇದನ್ನು ಬೇರೆ ಬರೆಯುತ್ತಿರುವನೊ ? ಹುಚ್ಚ ಹುಡುಗ ! ಇನ್ನೂವರೆಗೆ ನನಗೆ ಪತ್ತೆ ಹತ್ತುಗೊಟ್ಟಿಲ್ಲ. ಅಕಸ್ಮಾತ್ ನಾನು ಒಳಗೆ ಬಂದರೆ ತೆಗೆದಿಡುತ್ತಿದ್ದ. ಯಾರೂ ಇಲ್ಲದಾಗ ಬರೆಯುತ್ತಿದ್ದ.

ಇದೇ ಏನದು ?

ಅದಕ್ಕಂತೇ ಈ 'ಡ್ರಾ'ಕ್ಕೆ ಯಾವಾಗಲೂ ಬೀಗ ಹಾಕಿ ಬಿಡುತ್ತಿದ್ದನೇನೋ!

ಯಾರಿಗೂ ತೋರಿಸಬಾರದೆಂದು ಅವನ ಇಚ್ಛೆ ಇರಬೇಕು.

ಅಷ್ಟು ಗುಪ್ತವಾಗಿ ಇಡುವದಾದರೆ ಬರೆಯುಬೇಕೇಕೆ? ಆದರ ಉಪಯೋಗವಾದರೂ ಏನು?"

ಸುಬ್ಬರಾವನಲ್ಲಿ ನೋಡೇಬಿಡಬೇಕೆಂಬ ಕುತೂಹಲ ಕೆರಳಿತು. ಇನ್ನೊಂದು ಯಾವುದೋ ನಡುವಿನ ಪುಟ ತಿರುವಿ ಕಣ್ಣಾಡಿಸತೊಡಗಿದ.

".... .... ಪುರುಷ ಒಮ್ಮೆ ಒಂದು ಸ್ತ್ರೀಗೆ ತನ್ನ ಹೃದಯವನ್ನು ಒಪ್ಪಿಸಿಬಿಟ್ಟನೆಂದರೆ ತೀರಿತು. ಅಲ್ಲಿ ಇನ್ನೊಬ್ಬರ ಮೂರ್ತಿ ಪ್ರವೇಶಿಸಲು ಸಾಧ್ಯವಿಲ್ಲ. ಸುಮಿತ್ರೆಯನ್ನು ಕೂಡಿಸಿ ಪೂಜಿಸುತ್ತಿರುವ ಹೃನ್ಮಂದಿರದಲ್ಲಿ ಸುಲೋಚನೆಗೆ ಸ್ಥಳಕೊಡೆಂದರೆ ಹೇಗೆ ಸಾಧ್ಯ? ಮದುವೆಯಾದ ಮಾತ್ರಕ್ಕೇನು ಮಡದಿಯಾಗುವಳೇ?

ಪ್ರೇಮ ಯಾವ ಕ್ಷಣದಲ್ಲಿ ಯಾರಲ್ಲಿ ನೆಲಸುವದೋ ಹೇಳಲು ಬರುವಂತಿಲ್ಲ. ಅದು ಕುರುಡು. ಅದಕ್ಕೆ ಕುಲವಿಲ್ಲ. ಸಿರಿಸಂಪತ್ತಿನ ಗೋಡವೆಯಿಲ್ಲ. ಚಲುವಿನ ಅಗತ್ಯವಿಲ್ಲ.

ಸೌಂದರ್ಯಕ್ಕಾಗಿ ಮೋಹಿಸುವದಾದರೆ ಸುಲೋಚನೆಯೇನು ಸುಮಿತ್ರೆಗಿಂತ ಕಡಿಮೆ ಸುಂದರಿಯಲ್ಲ.

ಆದರೆ ನನ್ನ ಆತ್ಮವಿಹಂಗಮ ಸುಮಿತ್ರೆಯಲ್ಲಿ ಕಂಡ ಆತ್ಮ ತೇಜವೇ ಬೇರೆ. ಅದು ಹೊರಗಿನ ಸೌಂದರ್ಯವಲ್ಲ, ಅಂತರಂಗ ಸೌಂದರ್ಯ.

ಆ ಸೌಂದರ್ಯ, ಆ ಚೆಲುವು, ಆ ಬಿನದ ಸುಲೋಚನೆಗೆ ಇಲ್ಲ. ಇವಳೊಂದು ಪೇಟಿಯಲ್ಲಿ ಮಾರಲಿಕ್ಕಿಟ್ಟ ಸುಂದರ ಗುಲಾಬಿ ಹೂ—ಕಾಗದ ಹೂ!—ಸುವಾ! ಮುಳ್ಳು ಕಂಟಿಯಲ್ಲಿ ಅರಳಿದ ಗುಲಾಬಿ ಹೂ!

ಎರಡೂ ಹೂಗಳೇ!

೨

"ಊಟಕ್ಕೆ ಬರುವಿರಾ?"

ಅನ್ಯ ಮನಸ್ಕಳಾಗಿಯೇ ಸುಲೋಚನೆ ಕೇಳಿದಳು. ಹೊರಳಿ ನೋಡಿದ ಸುಬ್ಬರಾವ. ಎದೆ ಝಲ್ಲೆಂದಿತು.

ಸೊಸೆಗೆ ಈ ಸಂಗತಿ ತಿಳಿದರೆ?

ಕೂಡಲೆ ಅವನ ಮುಖ ಕಪ್ಪಿಟ್ಟಿತು. ಅದರ ಪ್ರತಿಚ್ಛಾಯೆಯಂತೆ ಸುಲೋಚನೆಯ ಮುಖವಿತ್ತು. ಅವಳ ಮುಖದಲ್ಲಿ ಹೆದರಿಕೆಯೂ ಇತ್ತು. ಮಾವನ ಬಾಯಿಂದ ಏನಾದರೂ ಕಠೋರ ಮಾತುಗಳನ್ನೇ ಕೇಳಬೇಕಾಗುವ ದೆಂದು ಅವಳು ಭಾವಿಸಿ ಬಂದಿದ್ದಳು. ಹಿಂಜರಿಯುತ್ತ ನುಡಿದಿದ್ದಳು.

"ಎಲೆ ಹಾಕಿ ಆಗಿದೆಯೋ?"

ಸುಬ್ಬರಾವನ ಸ್ವರ ಸ್ನಿಗ್ಧವಾಗಿತ್ತು. ಸುಲೋಚನೆಯ ವಿಚಾರ ತಲೆ ಕೆಳಗಾಯಿತು. ನಸುನಗೆಯೊಡನೆ ಹೇಳಿದಳು.

"ಆಗಿದೆ; ಆದರೆ ಅವರೇ ಇನ್ನೂ ಬರಲಿಲ್ಲ."

ಅವಳ ಆ ನಗೆಯಲ್ಲಿ ಎಂತಹ ತೀಕ್ಷ್ಣವಿಷಾದ ತುಂಬಿದೆಯೆಂಬುದು ಆ ಮುಪ್ಪಿನ ಮಂದ ಕಣ್ಣುಗಳಿಗೂ ಕಂಡಿತು. ಬಾಬಾಸಾಹೇಬನ ಮೇಲೆ ತಾನಾಗಿಯೇ ಸಿಟ್ಟುಬಂತು ಸುಬ್ಬರಾಯನಲ್ಲಿ.—

"ಬಂದಾನು ಎಲ್ಲಿ ಹೋಗ್ತಾನ."

ಮಾತಿನ ಓಘ ಅಲ್ಲಿಯೇ ತಡೆಯಿತು. ತುಸು ತಡೆದು ಮತ್ತೆ ನುಡಿದ.

"ಇನ್ನೂ ಏನು ಸಣ್ಣ ಹುಡುಗನೇ?

ಮಾತಿನೊಳಗಿನ ತಿರುಪು ಯಾರಿಗೂ ಸ್ಪಷ್ಟ ಒಡೆದು ತೋರುವಂತಿತ್ತು.

ಮಾವನ ಮಾತಿನೊಳಗಿನ ಇಂದಿನ ಧ್ವನಿ—ಎಂದೂ ಇಲ್ಲದ ಇಂದಿನ ಧ್ವನಿಯನ್ನು ಕಂಡು ಸುಲೋಚನೆ ಚಕಿತಳಾದಳು. ಚಂಚಲವಾದಳು.

ಇತ್ತ ಸುಬ್ಬರಾಯನ ಲಕ್ಷ್ಯವಿರಲಿಲ್ಲ. ಕೈಯೊಳಗಿನ ಮಗನ 'ಆತ್ಮ ಕಥೆ'ಯನ್ನು ಮುಚ್ಚಿಡುವುದರಲ್ಲಿ ಮಗ್ನನಾಗಿದ್ದನಾತ. ಎಲ್ಲಿಯಾದರೂ ಇದು ಸುಲೋಚನೆಯ ಕೈಗೆ ಸಿಕ್ಕೀತಲ್ಲ. ಎಂದವನ ಹೆದರಿಕೆ. ಈಗಾಗಲೇ ನೋಡಿರುವಳೋ ಎಂಬ ಶಂಕೆಯೊಂದು ಎದ್ದು ಅವನ ಹೃದಯವನ್ನು ಬಿರು ಗಾಳಿಗೆ ಸಿಕ್ಕ ತರಗೆಲೆಯಂತೆ ತೂಗಾಡಿಸಿತು.

ಸುಂದರ ವಸ್ತುವು ಎಲ್ಲರ ಮನಸ್ಸನ್ನೂ ಸೆಳೆಯುವುದು. ಅದರಲ್ಲೂ ಅದನ್ನು ಮುಚ್ಚಿಡಲು ಯತ್ನಿಸಿದರೆ ಇನ್ನೂ ಆಕರ್ಷಣೆ ಹೆಚ್ಚು.

"ಏನದು?"

ಸುಬ್ಬರಾವ ಬರಬಾರದೆಂದಿದ್ದ ಪ್ರಶ್ನೆ ಸೊಸೆಯಿಂದ ಬಂತು.

ಉತ್ತರ ಕೊಡಲಿಕ್ಕೆ ಸ್ವಲ್ಪ ಹೊತ್ತು ಬೇಕಾಯಿತು. ಅನುಮಾನಿಸಿದ ಪ್ರಶ್ನೆಯಾದರೂ ಉತ್ತರವನ್ನು ಹುಡುಕಿಡಲು ಸುಬ್ಬರಾವನಿಗೆ ಅವಕಾಶ ಸಿಕ್ಕಿರಲಿಲ್ಲ. ಪ್ರಶ್ನೆ ಎಬ್ಬಿಸಿದ ಗೊಂದಲಕ್ಕಿಂತ ಇನ್ನೊಂದು ಬಿಗಿಯಾದ ತೊಡಕು ತಾನೇ ಬಿಟ್ಟಂತೆನಿಸಿ ಸುಬ್ಬರಾವ ನುಡಿದ.

" ಏನೋ ಬಾಬಾಸಾಹೇಬನ ಪುಸ್ತಕ, ಒಂದೊಂದೇ ನೋಡುತಲಿದ್ದೆ...."

ಈ ಉತ್ತರದಿಂದ ಸುಲೋಚನೆಗೆ ಸಮಾಧಾನವಾಗಲಿಲ್ಲ. ಇದನ್ನು ಸುಬ್ಬರಾವ ಅವಳ ಮುಖವನ್ನು ನೋಡಿ ತಿಳಿದುಕೊಂಡ.

" ಹೋಗು ಮಣೆ ಹಾಕು. ಈಗ ಊಟಕ್ಕೆ ಬಂದೆ. "

ಸುಬ್ಬರಾವ ಹೇಳಿದ. ಆಜ್ಞಾಪಿಸುವ ಸ್ವರವಿದ್ದಿತೀಗ. ಆದರೂ ಮುಂದೆ ನುಡಿದ.

" ಸುಲಾ, ಇಂದು ನೀನೇ ಬಡಿಸು. ನಿನ್ನ ಓರಣ ಆ ಅಡಿಗೆಯವನ ಕೈಗೆ ಬಾರದು. ಅವಳು ಇರುವವರೆಗೆ........ "

ಮಾತು ಅಷ್ಟಕ್ಕೇ ನಿಂತಿತು. ದಿನಾಲು ಸುಲೋಚನೆಯೇ ಊಟಕ್ಕೆ ಹಾಕುತ್ತಿದ್ದಳು. ಅಕ್ಕರೆಯಿಂದ ಉಣಿಸುತ್ತಿದ್ದಳು. ಎಂದಾದರೊಂದು ದಿನ ಅಡಿಗೆಯವ ಬಡಿಸುತ್ತಿದ್ದ. ಆದರೆ ಈಗೇಕೋ ಸುಬ್ಬರಾವನಿಗೆ ಹೀಗೆ ಹೇಳಬೇಕೆಂದೆನಿಸಿತು.

ಈ ಮೊದಲೇ ಸುಲೋಚನೆ ಅಡಿಗೆ ಮನೆ ಸೇರಿದ್ದಳು. ಸುಬ್ಬರಾವನು ಮಗನ ದಿನಚರಿಯನ್ನು ಕಪಾಟಿನಲ್ಲಿ ತೆಗೆದಿಟ್ಟು ಬೀಗ ಹಾಕಿದ. ಧನಲೋಭಿ ಒಡವೆಗಳನ್ನು ಬಚ್ಚಿಡುವಾಗ ಅನ್ಯರು ಕಂಡಾರೆಂಬ ಭಾವದಿಂದ ಹೇಗೆ ಸುತ್ತಲೂ ನೀರೀಕ್ಷಿಸುವನೋ ಹಾಗೆಯೇ ಸುಬ್ಬರಾವನು ನಿರೀಕ್ಷಿಸಿದ. ಕಪಾಟಿನ ಬೀಗ ನೆಟ್ಟಗೆ ಕುಳಿತ ಬಗ್ಗೆ ಜಗ್ಗಿ ಜಗ್ಗಿ ಮನದಟ್ಟು ಮಾಡಿಕೊಂಡ. ಅನಂತರ ಬೀಗದ ಕೈಯನ್ನು ಜನಿವಾರದಲ್ಲಿ ಕಟ್ಟಿಕೊಂಡು ಊಟಕ್ಕೆ ಹೋಗಿ ಕುಳಿತ.

ದಿನಾಲು ತಂದೆ ಮಗ ಕೂಡಿ ಊಟಕ್ಕೆ ಕೂಡುತ್ತಿದ್ದರು. ಈ ಹೊತ್ತು ಅಡಿಗೆಯವ ಎರಡು ಎಲೆಗಳನ್ನು ಹಾಕಿದ್ದ. ತಂಬಿಗೆಗಳನ್ನು ತುಂಬಿಟ್ಟಿದ್ದ. ಮಣೆಯ ಮೇಲೆ ಕೂಡುವಾಗ ಮಗನು ಬಳಿಯಲ್ಲಿ ಇಲ್ಲದುದಕ್ಕೆ

ಸುಬ್ಬರಾವನಿಗೆ ತುಂಬ ಅಸಮಾಧಾನವೆನಿಸಿತು. ಅಡಗಿಯ ಮನೆಯಲ್ಲಿ ಭಣ ಭಣವೆನಿಸಿತು. ಕಣ್ಣು ರೆಪ್ಪೆ ಭಾರವಾದವು. ಬಾಯಿ ಜಿಗುಟಾಯಿತು.

" ಬಾಬಾಸಾಹೇಬ ಹೀಗೆ ಮಾಡಬಾರದಿತ್ತು ! "

ಮಾಡಲಿಕ್ಕೆ ಅವನದೇನು ತಪ್ಪು ?

ನಾನೇ ಅವನ ಮನಸ್ಸಿನ ವ್ಯತಿರಿಕ್ತ ನಡೆದೆ.

ಒಲ್ಲದ ಹೆಂಡತಿಯನ್ನು ಕಟ್ಟಿದೆ. ಮದುವೆ ಮಾಡಿದರೆ ಎಲ್ಲ ಸರಿ ಹೋಗುವದೆಂದೆ.

ಬಾಬು ಇಂದು ಒಂದು ದೊಡ್ಡ ಏಟು ಹಾಕಿಹೋದ.

ನನಗೆ ಪೆಟ್ಟು ಹಾಕುವದು ನನ್ನ ತಿಳುವಳಿಕೆಗೆ ಪೆಟ್ಟು ಹಾಕುವದು ಒಂದೇ ಅಲ್ಲ. ನಾವು ಉದ್ಧತರಾಗಿ ಸತ್ಯದ ಸೀಮೆಯನ್ನು ದಾಟಿದಾಗ ನಮಗೆ ಏಟು ಬೀಳಲೇ ಬೇಕಾಗುವುದು. ಈ ಏಟನಿಂದ ನಾವು ಸಾಯುವ ದಿಲ್ಲ. ನಮ್ಮ ಮೋಹ ದೂರವಾಗುತ್ತದೆ.

ಸ್ವಲ್ಪ ವಿಚಾರ ಮಾಡಿ ನೋಡಿದರೆ ಸರಳವಾದ ಮಾತೂ ಒಮ್ಮೊಮ್ಮೆ ಕಠಿಣವಾಗುತ್ತದೆ, ಡೊಂಕಾಗುತ್ತದೆಂಬುದು ತಿಳಿಯುವುದು.

ಜಗತ್ತಿನಲ್ಲಿ ಪವಿತ್ರತೆ ಅಪವಿತ್ರತೆಯ ಜ್ಞಾನ ಸ್ಪಷ್ಟವಿಲ್ಲ.

ಪ್ರಪಂಚದಲ್ಲಿ ಅನೇಕ ಸ್ತ್ರೀ-ಪುರುಷರ ಸಮಾಗಮಗಳಾಗಿವೆ. ಅವನ್ನು ನಾವು ಪವಿತ್ರವೆಂದು ಒಪ್ಪುವದಿಲ್ಲ. ಆದರೆ ಅವುಗಳನ್ನು ಸಮಾಜ ಸ್ವೀಕರಿಸಿದೆ. ಧರ್ಮ ಶಾಸ್ತ್ರಗಳು ಮಂಗಲಾಕ್ಷತೆಯಿಟ್ಟು ಹರಸಿವೆ.

" ದಿನದಂತೆ ನೀವಿಂದು ಊಟ ಮಾಡುತ್ತಿಲ್ಲ. "

" ದಿನದಂತೆ ಇಂದಿನ ದಿನವಿಲ್ಲ ಮಗು ! "

ಸುಬ್ಬರಾವನ ದನಿಯಲ್ಲಿ ಕನಿಕರವಿದ್ದಿತು.

ಈ ಕನಿಕರದ ಅರ್ಥ ಸುಲೋಚನೆಗೆ ಆಗದಿರಲಿಲ್ಲ. ಅವಳು ಮೆಲ್ಲಗೆ ನುಡಿದಳು.

" ನನಗಾಗಿ ನೀವು ಚಿಂತಿಸಬೇಕಿಲ್ಲ. "

ಈ ನುಡಿ ಅಂಬಿನಂತೆ ಸುಬ್ಬರಾವನ ಹೃದಯದಲ್ಲಿ ನೆಟ್ಟಿತು. ಮರ್ಮ ಕೆದರಿತು. ಯಾವುದೋ ಒಂದು ಅಂತರ್ಯ ಸೊಸೆಗೆ ತಿಳಿದಿದೆಯೋ ಎಂಬ ಶಂಕೆ ಉತ್ಪನ್ನವಾಯಿತು. ಅದನ್ನು ಹೊಡೆದೋಡಿಸುವುದಕ್ಕಾಗಿ,—

"ನಿನಗಾಗಿ ಏಕೆ ಚಿಂತಿಸಬೇಕು ?"

ಸ್ಪಷ್ಟವಾಗಿ ಸುಬ್ಬರಾವ ಕೇಳಿದ.

ಸುಲೋಚನೆ ಸುಮ್ಮನಾದಳು. ಅವಳ ಮುಖವನ್ನೇ ಸುಬ್ಬರಾವ ನಿರೀಕ್ಷಿಸುತ್ತಿದ್ದ. ಆದರೆ ಸುಲೋಚನೆ ಅನ್ನ ತರುವ ನೆವದಿಂದ ಮುಖ ದಿರುವಿ ಒಂದು ನಿಟ್ಟುಸುರನ್ನು ಬಿಟ್ಟಳು. ಆಗಲೇ ಅವಳ ಮುಖದಲ್ಲಿ ಒಡ ಮೂಡಬೇಕಾದ ಭಾವ ಮೂಡಿ ಅಳಿದಿದ್ದಿತು. ಮೊದಲಿನಂತೆಯೇ ಕಿರು ನಗೆಯೊಡನೆ ಅನ್ನ ಬಡಿಸಿದಳು.

ಸುಬ್ಬರಾವನಿಗೆ ಮುಂದೆ ಮಾತು ಬೆಳಿಸಲಿಕ್ಕೆ ಮನಸ್ಸಾಗಲಿಲ್ಲ. ಆದರೆ ಸೊಸೆಯ ಆ ಕಿರುನಗೆಯ ಪೆಟ್ಟನ್ನು ತಡೆದುಕೊಳ್ಳುವುದೂ ಅಸಹ್ಯವೆನಿಸಿತು. ಅನ್ನದ ತುತ್ತು ಕಹಿ ಎನಿಸಿತು. ಹೇಗೋ ಎರಡು ತುತ್ತು ಬಾಯಲ್ಲಿ ತುರುಕಿ ಎದ್ದ.

"ಬಾಬಾಸಾಹೇಬ ಬಂದೊಡನೆ ನನಗೆ ತಿಳಿಸು"

ಎಂದು ಹೇಳಿ ಸುಬ್ಬರಾವ ಮೆಲ್ಲಗೆ ತನ್ನ ಕೋಣೆಯ ಕಡೆಗೆ ನಡೆದ.

ತುಸು ಮುಂದೆ ಹೋಗಿ ತಿರುಗಿ ಬಂದು, ಸೊಸೆಗೆ ಹೇಳಿದ.

"ನೀನೂ ಊಟಮಾಡಿಬಿಡು ಸುಲು"

"ಅವರು ಬಂದಮೇಲೆಯೇ ಮಾಡುವೆ"

"ಸತ್ತ ಸಿಂಹವನ್ನು ತಿರು ತಿರುಗಿ ಇರಿಯುವದರಲ್ಲಿ ಏನರ್ಥವಿದೆ ?"

ಎಂಬ ಮಾತು ಸುಬ್ಬರಾವನ ಬಾಯವರೆಗೂ ಬಂದು ಮರಳಿತು

ಸ್ವಲ್ಪ ತಡೆದು, ಬಾಗಿಲ ತೋಳನ್ನು ನೀಟಾಗಿ ಹಿಡಿದು ನಿಂತು.—

"ನಿನಗೆ ತಿಳಿದಂತೆ ಮಾಡು ಮಗು !"

ಎಂದು ನುಡಿದು ಸೊಸೆಯನ್ನೊಮ್ಮೆ ಅಡಿಯಿಂದ ಮುಡಿಯವರೆಗೆ ನೋಡಿ ಮರಳಿದ.

ಹೋಗುವಾಗ ಯಾವುದೋ ಒಂದು ಅದಮ್ಯ ಲಾಲಸೆಯು ಅವನನ್ನು ಬಾಬಾಸಾಹೇಬನ ಕೋಣೆಯತ್ತ ಸೆಳೆದಿತು. ಮನಸ್ಸು ಕ್ಷತವಿಕ್ಷತವಾಗಿ ದ್ದಿತು. ಅದನ್ನು ಅಲ್ಲಿ ಹೊಂದಿಸಿಕೊಳ್ಳಲು ಹೊರಟನೇನೋ !

ಹೊಂದುವುದೋ, ಏನು ಸಾವಿರಾರು ಚೂರುಚೂರಾಗುವುದೋ ಯಾರಿಗೆ ಗೊತ್ತು. ?

ಕೋಣೆಯೊಳಗೆ ಹೋಗಿ ಬಾಗಿಲವನ್ನು ಗಟ್ಟಿಯಾಗಿ ಮುಚ್ಚಿಕೊಂಡ.

ಹಾಕಿದ ಚಿಲಕದ ಮೇಲೆ ಕೈಯಾಡಿಸಿ ನಾಲ್ಕು ಸಲ ನೋಡಿ ಖಾತ್ರಿ ಮಾಡಿಕೊಂಡು, ಕಪಾಟಿನ ಬಾಗಿಲ ತೆರೆದ.. ದಿನಚರಿಯನ್ನು ಓದಲು ಕೈಯಲ್ಲಿ ತಕ್ಕೊಂಡ.

ಬೇಡವೆಂದಿತು ಮನಸ್ಸು. ತಿಳಿದಾಗಿದೆಯಲ್ಲ, ಎಂದು ಸಮಾಧಾನ ಹೇಳಿತು. ಮತ್ತೆ ಮೊದಲಿನಂತೆ ಇಟ್ಟು ತಿರುಗಬೇಕೆಂದ. ತಿರುಗಲಾಗಲಿಲ್ಲ. ಕಪಾಟಿನಲ್ಲಿ ಇಟ್ಟ. ಬಾಗಿಲ ಮುಚ್ಚಿದ. ಅದಾವುದೋ ಶಕ್ತಿ ತಿರುಗಿ ತೆರೆಯಿಸಿತು. ಕೈಯಲ್ಲಿ ತಕ್ಕೊಂಡ.

ಆತ್ಮ ಕಥೆಯನ್ನು ಒಪ್ಪಿಗೆ ಇಲ್ಲದೆ ಓದುವುದು ಅನ್ಯಾಯವೆನಿಸಿತು.

ಮಗನ ಆತ್ಮಕಥೆ ನಾನು ನೋಡುವುದೇ ನ್ಯಾಯ, ವಿಹಿತ.

ಅದಾವಾಗಲೋ ಆರಾಮ ಕುರ್ಚಿಯಮೇಲೆ ಬಿದ್ದು, ಸುಬ್ಬರಾವ ಓದುವದರಲ್ಲಿ ಮಗ್ನನಾಗಿದ್ದ.

‡ ‡ ‡ ‡

ಒಂದೇ ಒಂದು ಮಲಕಿನ ಸುತ್ತಲೂ ಇಡೀ ಒಂದು ಜಾಳಿಗೆಯು ಹೆಣೆಯಲ್ಪಟ್ಟಂತೆ ನನ್ನ ಎಲ್ಲ ದಿವಸಗಳೂ ನನ್ನ ಎಲ್ಲ ವಿಚಾರಗಳೂ ಒಂದು ವ್ಯಕ್ತಿಯ ಸುತ್ತ ಹೆಣೆದಿವೆ. ಅನೇಕ ಸಲ ನನಗೆ ಸಂಗತಿಯ ಕಲ್ಪನೆಯೂ ಕೂಡ ಆಗುವದಿಲ್ಲ.

ಬೆಳಗಿನಿಂದ ಸಾಯಂಕಾಲದವರೆಗೆ ಅನೇಕ ಕಾರ್ಯಗಳಲ್ಲಿ ತೊಡಗಿರುವೆ. ಆದರೆ ಅವುಗಳಲ್ಲಿ ನನ್ನ ಮನಸ್ಸು ಇರುವುದಿಲ್ಲ. ಒಂದೇ ವ್ಯಕ್ತಿಯ ಮೇಲೆ ನೆಲೆನಿಂತ ಮನಸ್ಸು ಉಳಿದಕಡೆಗೆ ಹೇಗೆ ಕೆಲಸ ಮಾಡೀತು ?

ಇತ್ತಿತ್ತ ನಾನು ಮುಗ್ಧನಾಗಿರುವೆನೆಂದು ಅನೇಕರು ಅನ್ನುವರು. ಅದರ ನಿಜವಾದ ಕಾರಣ ಅವರಿಗೆ ತಿಳಿದಿದ್ದರೆ! ಮೊದಲು ಸಣ್ಣ ಸಣ್ಣ ಮಾತಿಗಾಗಿ ಚೇತರಿಸುತ್ತಿದ್ದ ನನ್ನ ಮನಸ್ಸು ಈಗ ಯಾವುದೋ ಒಂದು ಮಬ್ಬಿನಲ್ಲಿಯೋ ನಿರ್ಜೀವವಾಗಿ ಬಿದ್ದು ಬಿಟ್ಟಿದೆ. ಸಿಟ್ಟಿಗೆ ಬರುವಂತಹ ಪ್ರಸಂಗ ಘಟಿಸಿದ್ದಾಗ ನನ್ನ ಮನಸ್ಸೇ ಅಲ್ಲಿರುವದಿಲ್ಲ. ಅಂದಮೇಲೆ ಅದು ತೆರಳುವ

ಬಗೆಯಾದರೂ ಹೇಗೆ? ಸಿಟ್ಟು ಬರಲಿಕ್ಕಾಗಲಿ, ಆಶೆ ಹುಟ್ಟಲಿಕ್ಕಾಗಲಿ, ಮನಸ್ಸು ಸ್ಥಳದ ಮೇಲಿರಲಿಕ್ಕೆ ಬೇಕಲ್ಲವೇ ?

ಮನೆಯಲ್ಲಿ ಮದುವೆಯ ಗಲಾಟೆ ಇಷ್ಟಿದೆ. ಎಂಥವರಿಗೂ ಶಾಂತವಾಗಿ ಒಂದು ಕ್ಷಣ ಕೂಡಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದರೆ ನನಗೆ ಈ ಗಲಾಟೆಯೊಂದೂ ಕೇಳಿಸುವದಿಲ್ಲ. ಕರೆದಾಗ ಹೋಗುವೆ. ಹೇಳಿದಂತೆ ಮಾಡುವೆ. ಗೆಳೆಯರು ನಗಲು ನಗುವೆ. ಕೆಲೆಯಲು ಕೆಲೆಯುವೆ. ಆದರಲ್ಲೂ ಸ್ವಲ್ಪ ಸಮಯ ಸಿಕ್ಕಿತೆಂದರೆ ಕೋಣೆಯಲ್ಲಿ ಬಂದು, ಸುಮ್ಮನೆ ಕಣ್ಣುಮುಚ್ಚಿಕೊಂಡು ಬೀಳುವೆ.

ಕೋಣೆಯೊಳಗಿನ ಕುರ್ಚಿ ಮೇಜುಗಳಿದ್ದಂತೆ ನಾನೂ ಒಬ್ಬ. ಒಂದು ವಿಶಾಲವಾದ ಆಲದ ಗಿಡದ ನೆರಳಿನಲ್ಲಿ ಅನೇಕ ಚಿಕ್ಕ ಚಿಕ್ಕ ಸಸಿಗಳು ಮೊಳಕೆಯೊಡೆದು ಅಳಿದು ಹೋಗುವವು, ಅರಣ್ಯದಲ್ಲಿ. ಅದರಂತೆಯೇ ನನ್ನ ಮನಸ್ಸಿನಲ್ಲಿ ಒಂದು ವಿಚಾರದ ಸಿರಶಿನಲ್ಲಿ ಅನೇಕ ವಿಚಾರಗಳು ಹುಟ್ಟುತ್ತಿವೆ. ಆದರೆ ಕೊನೆಗೆ ಬಾಳುವುದು ಒಂದೇ ವೃಕ್ಷ!

ಕಣ್ಣುಗಳು ತೆರೆದಿದ್ದರೂ ಜಗತ್ತನ್ನು ಕಾಣವು. ಕಿವಿಗಳು ಕಿವುಡಾಗಿವೆ. ಅದೇನೋ ಒಂದು ವಚನವಿದೆಯಲ್ಲ. ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ. ಅನ್ಯರನ್ನು ನೋಡದಂತೆ ಕೇಳದಂತೆ ಕುರುಡನನ್ನೂ ಕಿವುಡನನ್ನೂ ಮಾಡು. ಅಹುದು. ನನ್ನ ಸ್ಥಿತಿಯೂ ಹಾಗೆಯೇ. ಜೀವವಿದ್ದೂ ನಿರ್ಜಿವ ನಾನು! ಇದು ನನ್ನ ನನಗೇ ಆಶ್ಚರ್ಯವೆನಿಸುವದು.

ಈ ಎಲ್ಲ ನಿರ್ಲಿಪ್ತತೆ ಒಂದೇ ಒಂದು ವ್ಯಕ್ತಿಯ ಹೆಸರು ಕೇಳಿದ ಕೂಡಲೆ ಹಾರಿ ಹೋಗುವುದು. ಆ ವ್ಯಕ್ತಿಯ ವಿಷಯಕ್ಕೆ ಯಾರಾದರೂ ಸ್ವಲ್ಪ ಮಾತು ತೆಗೆದರೆ ಸಾಕು. ನನ್ನ ಮುಗ್ಧತೆ ಎಲ್ಲಿಯೊ ಮಾಯವಾಗಿ ಬಿಡುವದು. ಆ ಮಾತಿನ ಪ್ರವಾಹ ನಿಂತೊಡನೆ ನನಗೇ ಹೆದರಿಕೆ ಎನಿಸುವದು. ಏನೇನು ಬಡಬಡಿಸಿದೆನೆಂದು. ಜನರು ಏನು ತಿಳದಕೊಂಡರೋ!

ಸುಮಿತ್ರೆಗೂ ನನಗೂ ಎಂಥ ಸಂಬಂಧ ಕಲ್ಪಿಸಿದರೋ!

ಎಲ್ಲ ವಿಷಯುದಲ್ಲಿಯೂ ನಿರುತ್ಸಾಹಿಯಾಗಿರುವ ನಾನು ಅವಳ ವಿಷಯು ಬಂದೊಡನೆ ಇಷ್ಟು ಉತ್ಸಾಹದಿಂದ ಮಾತಾಡಬೇಕೆಂದರೆ........

ಅದರ ಕಾರಣ ಯಾರಿಗೂ ತಿಳಿಯದೆ ಇರಲಿ.

*　　*　　*　　*

ಹುಚ್ಚು ಹೆದರಿಕೆಯೂ ಇರಬಹುದು! ಆದರೆ ನಾನು ನನ್ನ ವೈವಾಹಿಕ ಜೀವನದ ವಿಚಾರ ಮಾಡಿದಾಗಲೆಲ್ಲ ನನಗೆ ಹೆದರಿಕೆ ಹುಟ್ಟುವುದು, ಇಲ್ಲಿಯ ವರೆಗೆ ಬೆಳೆದು ಬಂದ ನನ್ನ ಒಲವು ನಲವುಗಳನ್ನು ಬಿಡುವುದು ಹೇಗೆಂದು. ನನ್ನ ವ್ಯಕ್ತಿತ್ವವು ಮುಂಚಿನಂತೆಯೇ ಉಳಿಯಬೇಕೆಂದು ಅನೇಕ ಸಲ ಎನ್ನಿಸುವುದು. ಅದಕ್ಕಾಗಿ ನಾನು ಎಷ್ಟು ಕಷ್ಟ ನಿಷ್ಠುರಗಳನ್ನು ಸಹಿಸಿದರೂ ಅಡ್ಡಿಯಿಲ್ಲ. ಈಗ ಯಾವುದೋ ಒಂದು ಬಂಧನದಲ್ಲಿ ಸಿಕ್ಕು ಒದ್ದಾಡುತ್ತ ಇದ್ದುದು ಸಾಕು.

ಈ ವಿಚಾರಗಳ ಗೊಂದಲವೆದ್ದಾಗ ನನ್ನ ಮನಸ್ಸು ಅಸ್ವಸ್ಥವಾಗುವುದು.

ಒಂಟಿಗನಾಗಿ ಒಂದು ದ್ವೀಪದಲ್ಲಿ ಬಿದ್ದ ವ್ಯಕ್ತಿಯು ದೂರದಲ್ಲಿ ತಿರುಗುವ ಹಡಗದ ಕಡೆಗೆ ಆಶೆಯಿಂದ ಕಾಣುವಂತೆ ನನ್ನ ದೃಷ್ಟಿ ಸುಮಿತ್ರೆಯ ಕಡೆಗೆ ಹತ್ತುವದು. ನಾವಿಬ್ಬರೂ ಬೇರೆ ಬೇರೆಯಾಗಿದ್ದೂ ಕೂಡ ನಮ್ಮ ವ್ಯಕ್ತಿತ್ವಕ್ಕೆ ಕುಂದು ಬರದಂತೆ ಬಾಳಬಹುದಲ್ಲ! ಸುಖದಿಂದ ಬಾಳಬಹುದಲ್ಲ?

†　　†　　†　　†

ಸ್ತ್ರೀ! ಅದರಲ್ಲೂ ಸುಶಿಕ್ಷಿತ ಸ್ತ್ರೀಯರ ಬಗ್ಗೆ ನನಗೆ ವಿಲಕ್ಷಣ ಕಲ್ಪನೆಗಳಿವೆ. ಆದರೆ ಆ ಕಲ್ಪನೆಗಳಿಗೆಲ್ಲ ಸುಲೋಚನೆ ಅಪವಾದವಾಗಿರಬಹುದೆ? ಇಲ್ಲವೆ ಇದೊಂದು ನನ್ನ ಮನಸ್ಸಿನ ಮೇಲೆ ಆವರಿಸಿದ ಕತ್ತಲೆಯೋ? ಅವಳ ಸ್ವಭಾವ ಎಂಥದೆಂಬುದು ನನಗೆ ಗೊತ್ತಿದೆ. ಪುರುಷರ ಬಗ್ಗೆ ಅತ್ಯಂತ ಅವಿಶ್ವಾಸ ಉಳ್ಳವಳು. ತನ್ನ ಜಗತ್ತಿನಲ್ಲಿ ತಾನೇ ಶ್ರೇಷ್ಠಳೆಂದು ಭಾವಿಸಿದವಳು. ಅದರಲ್ಲಿಯೇ ಮಗ್ನಳಾದವಳು. ಒಲಿದು ಹೋದವರಿಂದ ದೂರ ಸರಿದು ಹೋಗುವಂತಹಳೂ ಸಿಡುಕಿನಿಂದ ದೂರ ಹೋದರೆ ಒಲಿದು ಬಂದು, ಮೃದು ನುಡಿದು, ಮೋಹ ಪಾಶದಲ್ಲಿ ಕೆಡಹುವಂತಹಳೂ ಆಗಿದ್ದಾಳೆ. ಎಲ್ಲ ರೀತಿಯಿಂದಲೂ ಪುರುಷರನ್ನು ಬಲೆಯಲ್ಲಿ ಕೆಡಹುವ ಕಲೆಯನ್ನು ಬಲ್ಲವಳಿದ್ದಾಳೆ! ಇದು ನಿಜ; ಆದರೆ ನಾನು ಅವಳ ಕೂಡ ಮಾತಾಡಿದಾಗ—

ಅವಳ ಕಡೆಗೆ ನೋಡಿದಾಗ—ಅಂಥದೇನೂ ವಿಶೇಷ ತೋರುವದಿಲ್ಲವಲ್ಲ! ಎಲ್ಲರಂತೆಯೇ ಅವಳೂ ಒಬ್ಬಳು. ಅವಳ ಕೂಡ ಮಾತಾಡುವಾಗ ನನಗೊಂದು ಹೆದರಿಕೆ. ಅವಳ ಬಗ್ಗೆ ನನ್ನಲ್ಲಿ ಸ್ವಲ್ಪಮಟ್ಟಿಗಾದರೂ ಕುತೂಹಲವಿದೆಯೆಂದು ಅವಳಿಗೆ ತಿಳಿದರೆ ಸಾಕು. ಅವಳು ನನ್ನ ಅವಹೇಳನ ಮಾಡಬಹುದು. ನನಗೆ ಅವಳ ಸ್ವಭಾವ ಗೊತ್ತಿದೆ!

§ § § §

ಸುಲೋಚನೆಯ ಸ್ವಭಾವ ಹೀಗೇಕಾಗಿರಬೇಕು? ಮದುವೆಯಾಗಿ ಮೊದಲನೆಯ ಸಲ ಮನೆಗೆ ಬಂದಾಗ ಹೀಗಿರಲಿಲ್ಲವಲ್ಲ!

ಅಂದು ನನ್ನ ಕೋಣೆಯಲ್ಲಿ ಬಂದು,—

"ಈ ಒರಟು ಖದ್ದರ ತೊಡಬೇಡಿರಿ. ನನಗೆ ಸೇರುವದಿಲ್ಲ."

ಎಂದಳು. ಎಷ್ಟು ಹೃತ್ಪೂರ್ವಕವಾಗಿತ್ತಾ ಮಾತು."

ಅವಳಿಗಾಗಿ ನಾನು ಖಾದಿ ತೊಡುವದನ್ನು ಬಿಡಲಾ?

ದಾಂಪತ್ಯದಲ್ಲಿ ಒಬ್ಬರು ಇನ್ನೊಬ್ಬರಿಗಾಗಿ ತಮ್ಮ ಆಶೆ ಆಕಾಂಕ್ಷೆಗಳನ್ನೂ ಸ್ವಲ್ಪ ಬದಿಗಿಡಬೇಕಾಗುತ್ತದೆ. ಅಂದರೆ ಸಮರಸ ಜೀವನವಾಗುವುದು. ಇದನ್ನು ನಾನೂ ಒಪ್ಪುವೆ. ಆದರೆ ಹೊರಗೆ ಅಡ್ಡಾಡುವ—ಅನೇಕ ತರದ ಆಕರ್ಷಕ ವೇಷ ಭೂಷಣಗಳನ್ನು ಧರಿಸಿ ತಿರುಗುವ—ತರುಣರ ಕಡೆಗೆ ನೋಡಿ, ತನ್ನ ಪತಿಯೂ ಹಾಗಿರಬೇಕೆಂದು ಬಯಸಿದರೆ ಅವಳ ಬಯಕೆಗೆ ನಾನು ಬದ್ಧನಾಗಿರಲೆ?

ಎಂದೂ ಸಾಧ್ಯವಿಲ್ಲ. ಒಬ್ಬ ಹೆಣ್ಣಿಗಾಗಿ ನನ್ನ ಆದರ್ಶ ಸಾಧನೆಯನ್ನು ಮರೆಯಲಾರೆ. ಅದಕ್ಕೆಂದೇ ಸ್ಪಷ್ಟವಾಗಿ ಹೇಳಿದೆ.

"ನಿನಗೆ ಸೇರಬೇಕೆಂದೇನೂ ನಾನು ಖದ್ದರ ತೊಡುವದಿಲ್ಲ........"

"ಅಂದರೆ ಯಾರಿಗೆ ಸೇರಬೇಕೆಂದು ತೊಡುವಿರಿ?"

"ನನಗೆ"

"ನಿಮ್ಮ ಸೌಂದರ್ಯವನ್ನು ನೋಡಿಕೊಳ್ಳುವವರು ನೀವಲ್ಲ. ನನಗಾಗಿ ನಿಮ್ಮ ಚೆಲುವು. ನನಗೆ ಚಂದಕಾಣಬೇಕಲ್ಲ ನೀವು?"

"ಓಹೋ! ಹೀಗೋ? ಹಾಗಾದರೆ ನನಗೆ ಸೇರುವಂತೆ ನಿನ್ನ ಉಡುಪು ಇರಬೇಕಾಯಿತಲ್ಲ.........."

"ಅರ್ಥಾತ್........"

"ಹಾಗಾದರೆ ನಾಳಿನಿಂದಲೂ ನೀನು ಖಾಡಿ ತೊಡು."

ನಿಜವಾಗಿಯೂ ಮಾನವರ ಈ ಸೌಂದರ್ಯವೆಂದರೇನೆಂಬುದನ್ನು ತಿಳಿಯಬಯಸುತ್ತೇನೆ.

ಮನುಷ್ಯನ ರೂಪ ಮೋಸದ ಮನೆ, ನಿಜವಾಗಿ ಏನೂ ಇಲ್ಲ. ಅದೊಂದು ಬಿಸಿಲುಗುದುರೆ, ಮಾಯೆ.

ಅಲ್ಲ; ಬಿಸಿಲುಗುದುರೆಯಲ್ಲ. ಬಿಸಿಲುಗುದುರೆಯೂ ಮಿಥ್ಯೆಯಲ್ಲ. ಕನ್ನಡಿಯೊಳಗಿನ ಪ್ರತಿಬಿಂಬ ಮನುಷ್ಯನಲ್ಲ. ಆದರೆ ರೂಪವು ಮನುಷ್ಯನ ಪ್ರತಿಬಿಂಬದಂತಲ್ಲ. ಪ್ರತಿಬಿಂಬ ಮನುಷ್ಯನೆಂದೂ, ಬಿಸಿಲುಗುದುರೆ ನೀರೆಂದೂ ಹಿಡಿಯಹೋಗುವದು ತಪ್ಪು. ಆದರೆ ರೂಪು ಹಾಗೆ ಭ್ರಮಾತ್ಮಕವಲ್ಲ. ಮನುಷ್ಯ ಸೌಂದರ್ಯಪಿಪಾಸೆಯಿಂದಲೇ ಸೌಂದರ್ಯದ ಬೆನ್ನುಹತ್ತಿ ತಿರುಗುತ್ತಿರುತ್ತಾನೆ.

ಸುಲೋಚನೆಗಾಗಿ ನನ್ನ ಸೌಂದರ್ಯ. ನನಗಾಗಿ ಸುಲೋಚನೆಯ ಸೌಂದರ್ಯ. ಇದು ಎಲ್ಲಿಯವರೆಗೆ?

ಸುಲೋಚನೆಯಲ್ಲಿ ನನಗೆ ಬೇಕಾದ ಸೌಂದರ್ಯ ಎಂದು ಉಂಟಾಯಿತು? ಸುಲೋಚನೆ ಬೆಳೆದು ದೊಡ್ಡವಳಾದಳು. ತಾರುಣ್ಯ ಬಂತು. ತಾಯಿಯಾಗಲು ಬೇಕಾದ ಎಲ್ಲ ಲಕ್ಷಣಗಳು ವಿಕಾಸವಾದುವು. ಅದೇ ಸೌಂದರ್ಯವಾಯಿತು.

ಈ ವಿಕಾಸ ನನ್ನಲ್ಲಿ ಆಗಲಿ, ಅವಳಲ್ಲಿ ಆಗಲಿ ಎಂದು ಆಯಿತೋ ಅಂದೇ ನಮ್ಮಿಬ್ಬರಲ್ಲಿ ಆಕರ್ಷಣೆಯನ್ನುಂಟು ಮಾಡುವ ಸೌಂದರ್ಯ ಉಂಟಾಯಿತು. ಸಂತಾನೋತ್ಪತ್ತಿಯ ಶಕ್ತಿ ಅಳಿದಾಗ ಈ ಸೌಂದರ್ಯವೂ ಹೋಗುವುದು.

ಹಾಗಾದರೆ ಸಂತಾನೋತ್ಪತ್ತಿ ಮಾಡುವ ಇಚ್ಛೆಯೇ ಪ್ರೇಮ.
ಪ್ರೇಮಕ್ಕೆ ಅರ್ಥವಿಷ್ಟೇ?
ಸುಮಿತ್ರೆಯ ಬಗ್ಗೆ ನನ್ನಲ್ಲಿರುವ ಆಕರ್ಷಣೆ ಎಂಥದು?
ಪ್ರೇಮವೋ? ಕಾಮವೋ?

ಪ್ರೇಮಕ್ಕೂ ಕಾಮಕ್ಕೂ ಅಂತರ ?

\+ + + +

ಇಂದು ಸದಾನಂದನ ಕಡೆಗೆ ಕೆಲಸವಿತ್ತು. ಹೋಗಿದ್ದೆ. ಇದೀಗ ಸೂರ್ಯ ಮುಳುಗುತ್ತಿರುವ ಸಮಯ. ಕಿಡಕಿಯ ಬಳಿಯಲ್ಲಿ ಯಾರೋ ದಾರಿಯ ಕಡೆಗೇನೇ ನೋಡುತ್ತ ನಿಂತಂತೆ ಅನಿಸಿತು. ಎರಡು ನಯನಗಳು ನನ್ನ ದಾರಿಯನ್ನೇ ಕಾಯುತ್ತಿದ್ದುವೋ ಏನೋ ಎಂದು ನನ್ನ ಅಂತಃಕರಣ ನಡುಗಿತು.

ಒಮ್ಮೆಲೇ ಒಳಗೆ ಹೋಗುವ ಸಾಹಸವಾಗಲಿಲ್ಲ. ನಿಂತುಬಿಟ್ಟೆ.

ಬಾಗಿಲ ಬಳಿಯಲ್ಲಿ ಸುಮಿತ್ರೆ ಮರೆಗೆ ಬಂದು ನಿಂತಿದ್ದಳು, ಇಷ್ಟರಲ್ಲಿ ಮುಗುಳ್ನಗೆಯ ಮುಖವನ್ನು ಹೊರಗೆ ಚಾಚಿ ಆದರದಿಂದ ಸ್ವಾಗತಿಸಿದಳು.

"ಬನ್ನಿರಿ, ಬಾಬಣ್ಣ ಬನ್ನಿರಿ ! ಏಕೆ, ನಿಂತುಬಿಟ್ಟಿರಿ ?"

ಇನ್ನೂ ಅದೇ ಸಲಿಗೆ ? ಸಿಟ್ಟುಬಂತು ನನಗೆ. ಗಂಭೀರವಾಗಿ ನುಡಿದೆ.

"ಸದಾನಂದ ಇಲ್ಲ ತೋರುತ್ತದೆ........"

"ಏಕೆ ? ಅವರಿಲ್ಲದಿದ್ದರೆ ಒಳಗೆ ಬರುವಂತಿಲ್ಲವೇನು ? ಮೊನ್ನೆ ಸುಲಾತಾಯಿಯ ಮುಂದೆ ನಿಮ್ಮ ಅಪಮಾನ ಮಾಡಿದ್ದಕ್ಕೆ ಕ್ಷಮಿಸುವಿರಾ ?

"ಇ........ಲ್ಲ........"

"ಅದಕ್ಕೇ ಹೀಗೆಲ್ಲ ಸಿಟ್ಟೇನೋ !"

ವೈಯಾರದಿಂದ ಗೋಣು ಕೊಂಕಿಸಿ ಸುಮಿತ್ರೆ ನುಡಿದಳು :

"ನಾನು ಕ್ಷಮೆಯನ್ನೇ ಬಯಸಿಲ್ಲ. ಅಹುದು. ಇದೇ ನಿಜ."

"ಇಲ್ಲ, ನೀನು ಕ್ಷಮೆಯನ್ನು ಬಯಸುವುದೂ ಇಲ್ಲ. ಬಯಸದೆ ಬೇಡದೆ ಕ್ಷಮಿಸಲಿಕ್ಕಾಗುತ್ತದೆಯೆ ? ಅದರಿಂದ ನಿನ್ನ ಅಪಮಾನವೂ ಆಗಬಹುದು. ಅನಾಯಾಸವಾಗಿ ನಿನ್ನ ಮಾನಹಾನಿ ಮಾಡಲಿಕ್ಕೆ ನೀನು ಅಷ್ಟು ಅಗ್ಗ ಇಲ್ಲ !"

ಈ ಸವಿ ವ್ಯಂಗ್ಯದಲ್ಲಿ ಕಾತರ ತಾನಾಗಿಯೇ ಉಂಟಾಯಿತು.

"ಎಂದಿನಿಂದ ಇಷ್ಟು ತುಟ್ಟಿಯಾದೆ ?"

"ಅದನ್ನೂ ಹೇಳಬೇಕೇ ?"

"ಸಾಕು ಬರ್ರಿ ಇನ್ನ....ಬೀದಿಯಮೇಲೆ ನಿಂತು ಮಾತಾಡಿದರೆ ಜನ ನಕ್ಕಾರು. ಒಳಗೆ ಬನ್ನಿರಿ!"

ಔತಣ ಸ್ವೀಕರಿಸಿದೆ. ಕೇವಲ ತಮಾಷೆಯ ಮಾತುಗಳಿವು. ಎಂದೇನೇನೋ ವಿಚಾರ ಮಾಡುತ್ತ ಒಳಗೆ ಹೋದೆ.

"ಇದೀಗ ಅವರು ಹೊರಗೆ ಹೋದರು. ಈಗ ಬರುವರು ಕೂಡಿರಿ."

ಏನೋ ಒಂದು ತರದ ರಹಸ್ಯ ತುಂಬಿದ ನಗೆಯನ್ನು ಬೀರಿ ಸುಮಾ ಕೂಡಲಿಕ್ಕೆ ಹೇಳಿದಳು. ಆಗಿನ ಅವಳ ವೇಷಭೂಷಣಗಳನ್ನು ಕಂಡು ನನ್ನ ಮನಸ್ಸಿನಲ್ಲಿ ಏನೋ ತರ್ಕ-ವಿತರ್ಕ ನಡೆಯಿತು.

"ನೀವು ಯೋಚಿಸುತ್ತಿರುವುದು ತಿಳಿಯಿತು. ಕಾಫಿ ಮಾಡಲಿಕ್ಕೆ ಇಟ್ಟಿರುವೆ ಕುಡಿದು ಹೊರಡಬಹುದು."

"ನನ್ನ ಯೋಚನೆ ನನ್ನ ಹಣೆಯ ಮೇಲೆ ಬರೆದಿದೆಯೆ?"

"ನಿಮ್ಮ ಹಣೆಯ ಮೇಲೆ ಬರೆದಿಲ್ಲ. ನನ್ನ ಹೃದಯದಲ್ಲಿ ಬರೆದಿದೆ."

"ನಾನು ಬರುವುದು ನಿನಗೆ ಮೊದಲೇ ಗೊತ್ತಿದ್ದಿತೊ?"

"ನೀವೇ ಊಹಿಸಿರಿ. ನೋಡೋಣ?" ಸ್ವಲ್ಪ ತಡೆದು "ನನಗೆ ಹೇಳಿ ಕಳಿಸಿದ್ದಿರಾ?"

"ಹೇಳಿ ಕಳಿಸಿದ್ದರೆ ಇನ್ನೂ ಎಷ್ಟು ಸಿಂಗಾರಾಗುತ್ತಿದ್ದಿಯೋ ಏನೋ!"

"ಸಿಂಗಾರೇನು ಬಂತು ಇದರಲ್ಲಿ?"

"ಈ ಹಸಿರು ರೇಸಿಮೆಯ ನಯವಾದ ಪತ್ತಲೇನು? ಆ ಜರದ ಬ್ಲಾವುಜೇನು?"

"ಉಡಿಸಿ ನೋಡಿ ಆನಂದ ಪಡುವವರು ತಂದು ಕೊಟ್ಟ ಮೇಲೆ ಉಡಲಿಕ್ಕೆ ಬೇಡವೆ?"

ಸ್ತ್ರೀಯೊಂದು ಪುರುಷನ ಆನಂದ ವಸ್ತುವೆ? ತನಗೆ ಬೇಕಾದಂತೆ ಶೃಂಗರಿಸಿ ನೋಡಿ ನಲಿಯಲಿಕ್ಕೆ. ಅವರಿಗೂ ಒಂದು ಮನಸ್ಸಿರುವದಲ್ಲವೆ? ಧ್ಯೇಯವಿರುವದಲ್ಲವೆ? ಎಂದೇನೇನೋ ವಿಚಾರಗಳು ಒಮ್ಮೆಲೇ ನನ್ನ ತಲೆಯಲ್ಲಿ ಸುಳಿದು ಹೋದವು. ತುಸು ತಡೆದು ನುಡಿದೆ.

"ಬಡಬಗ್ಗರಿಗೆ ಮೈಮುಚ್ಚುವಷ್ಟು ಅರಿವೆ ಇಲ್ಲ. ನೀವು ವಿಲಾಸವಲ್ಲಿ ಹೀಗೆ ಮೆರೆಯುವಿರಿ?"

" ಏನು ಮಾಡಂತೀರಿ ? "

" ಖಾದಿ ಬಟ್ಟೆ ಉಡು. ಇದನ್ನು ತೆಗೆದು ಬಿಸಾಡಿ ಬಿಡು. "

" ಬೇಕಾದುದನ್ನು ಉಡಲಿಕ್ಕೆ ತೊಡಲಿಕ್ಕೆ ನನಗೆಲ್ಲಿ ಸ್ವಾತಂತ್ರ್ಯ ವಿದೆ? ಮದುವೆಯಾದಮೇಲೆ ಸ್ತ್ರೀಗೆ ವ್ಯಕ್ತಿತ್ವವೆಂಬುದಿರುವುದೇ ? "

ಧ್ವನಿಯಲ್ಲಿ ತುಂಬ ನೋವಿತ್ತು.

" ಇಷ್ಟರಲ್ಲಿಯೇ ನಿನ್ನನ್ನು ನೀನು ಮಾರಿಕೊಂಡೆಯಾ ? "

" ಮಾರಿಕೊಂಡಿಲ್ಲ; ಮಾರಿದಿರಿ. "

ನನ್ನ ಎದೆಗೆ ಬರ್ಚಿಯಿಂದ ತಿವಿದಂತಾಯಿತು. ನಮ್ಮಿಬ್ಬರ ಬಾಲ್ಯ ಜೀವನವೆಲ್ಲ ಕಣ್ಣಮುಂದೆ ಸುಳಿಯಿತು.

ಆಗ ಸುಮಾ ನನ್ನ ಹತ್ತರ ಪಾಠ ಹೇಳಿಸಿಕೊಳ್ಳುತ್ತಿದ್ದಳು. ಅದೇ ನಾನು ಹೇಳಲಿಕ್ಕೆ ಆರಂಭ ಮಾಡುವವನಿದ್ದೆ. ಇಷ್ಟು ದಿನಗಳವರೆಗೆ ಅವಳ ಶಿಕ್ಷಣ ಹೇಗೆ ಸಾಗುತ್ತಿತ್ತೆಂಬುದರ ಬಗ್ಗೆ ನಾನು ಆಸ್ಥೆಯನ್ನು ವಹಿಸಿರಲಿಲ್ಲ. ಮೊನ್ನೆ ಯಾವುದೋ ಕಾರಣಕ್ಕಾಗಿ ಅವಳ ಮಾಸ್ತರ ಸಿಕ್ಕಿದ. ಇಂಗ್ಲಿಷ ಬಹಳ ಕಚ್ಚಾ ಎಂದು ಹೇಳಿದ. ಇಂಗ್ಲಿಷ ಕಲಿಸಲಿಕ್ಕೆಂದರೆ ನನಗೆ ಬಲು ಹುರುಪು. ಈ ಹುರುಪು ತೀರಿಸಿಕೊಳ್ಳಲಿಕ್ಕೆಂದೇ ನಾನು ಪಾಠ ಹೇಳಲಿಕ್ಕೆ ಆರಂಭಿಸಿದ್ದು.

ಆ ಹುರುಪು ಸಲಿಗೆಯಲ್ಲಿ ಪರ್ಯವಸಾನವಾಯಿತು. ನನ್ನ ಪಾಠ ದಿಂದ ಅವಳ ಇಂಗ್ಲಿಷ ಸುಧಾರಿಸದಿದ್ದರೂ ನನ್ನ ಮೇಜಿನ ಮೇಲೆ ಪುಸ್ತಕ ಗಳನ್ನು ಇಡುವ ಠೀವಿ ಸುಧಾರಿಸಿತು. ಯಾವುದೋ ಮಾಯೆಯಿಂದ ನನ್ನ ಕೋಣೆಯಲ್ಲಿ ಒಂದು ಶಿಸ್ತು ಮುತ್ತಿ ಬರತೊಡಗಿತು. ನನ್ನ ಮೈಮೇಲಿನ ಬಟ್ಟೆ ಮಾಸಿದಾಗ ನನಗೆ ಗೊತ್ತಿಲ್ಲದೆ ಬದಲಾಗಿ ಬಿಡುತ್ತಿದ್ದಿತು. ನನ್ನ ಮನಸ್ಸು ಬಯಸುವದೊಂದೇ ತಡ ಅದೆಲ್ಲ ಸಿದ್ಧವಾಗಿರುತ್ತಿದ್ದಿತು. ನನ್ನ ಹತ್ತರ ಒಂದು ಕಾಮಧೇನುವನ್ನು ಸಾಕಿದಂತಾಗಿದ್ದಿತು.

ಅದೇ ಕಾಮಧೇನುವಿಗೆ ಇಂದು ನಾನು ಬರುವುದು ಮೊದಲೇ ಏಕೆ ಗೊತ್ತಾಗಿರಬಾರದು ?

ಅದಕ್ಕಂತಲೇ ಇಷ್ಟೆಲ್ಲ ಶೃಂಗಾರವೊ ?

ಸದಾನಂದ ಇಲ್ಲವೆಂದು ಹೊರಗಿರುವಾಗಲೇ ಹೇಳಲಿಲ್ಲವಲ್ಲ? ಇದರ ಉದ್ದೇಶವೇನು ? ಅರ್ಥವೇನು ?

" ಇಷ್ಟೆಲ್ಲ ಶೃಂಗಾರವಾಗಿ ಎಲ್ಲಿ ಹೋಗಲು ಸಿದ್ಧಳಾಗಿರುವಿ ? " ಕೇಳಿದೆ. ಧ್ವನಿ ಅದೇಕೋ ವ್ಯಗ್ರವಾಗಿತ್ತು.

" ಇಬ್ಬರೂ ಸಿನೇಮಾಕ್ಕೆ ಹೋಗಬೇಕೆಂದಿದ್ದೆವು. ಯಾವಾಗಲೂ ನಮಗೆ ಹೀಗೇ ಅಡ್ಡಿ. ಯಾರೋ ಬಂದಿದ್ದರು. ಗೆಳೆಯರಂತೆ, ಸ್ವಲ್ಪ ಮುಂದೆ ಕಳಿಸಲಿಕ್ಕೆ ಹೋದರು. ನನ್ನ ಪಾಲಿನ ಕಾಫಿ ಹಾಗೆಯೇ ಉಳಿಯಿತು. ಇಬ್ಬರೂ ಈಗ ಕುಡಿಯೋಣ. "

ತಂದೆಯವರು ಒಂದು ಅತ್ಯಗತ್ಯದ ಕೆಲಸಕ್ಕಾಗಿ ಸದಾನಂದನನ್ನು ಕರೆಯಲಿಕ್ಕೆ ಕಳಿಸಿದ್ದರು. ಅದಕ್ಕಾಗಿ ಹೋಗಿದ್ದೆ. ಹೇಳಲಿಕ್ಕೆ ಮನಸ್ಸಾಗಲಿಲ್ಲ. ತಂದೆಗೆ ಏನಾದರೂ ಹೇಳಿದರಾಯಿತೆಂದು ಹಾಗೇ ಮನೆಗೆ ಬಂದೆ.

ಸುಮಿತ್ರಾ, ಕಾಫಿಯ ಲಂಚ ಕೊಟ್ಟಿರಲಿಲ್ಲವೆ ?

ಅಂದಿನಿಂದ ಅವಳ ಮೈಮೇಲೆ ಖಾದಿಯನ್ನು ಕಾಣುತ್ತಿದ್ದೇನೆ.

§ § § §

ಪ್ರೇಮದಿಂದ ಕುರುಡರಾದಂಥ ತರುಣ ತರುಣಿಯರನ್ನು ಕಂಡರೆ ನನಗೆ ನಗೆ ಬರುತ್ತದೆ. ನಾನೂ ಇಷ್ಟು ಕುರುಡನಾಗುವೆನೆ ? ಎಂಬ ಪ್ರಶ್ನೆ ಮನದಲ್ಲಿ ಆಗಾಗ ಏಳುವುದು. ನಾನೆಂದೂ ಹೀಗಾಗಲಿಕ್ಕಿಲ್ಲ. ಹೀಗನ್ನುವಾಗಲೂ ಕೂಡ—ಬೇರೊಂದು ವಿಚಾರ ನನ್ನ ಮನಸ್ಸಿನಲ್ಲಿ ಮೂಡದೆ ಇರುವದಿಲ್ಲ. ಪ್ರತಿಯೊಂದು ವ್ಯಕ್ತಿಗೂ ತನ್ನ ಪ್ರೇಮ ಕುರುಡಿಲ್ಲ ಎಂದೆನಿಸುವದು. ತನ್ನ ಪ್ರಣಯದಲ್ಲಿ ಎಲ್ಲರಿಗಿಂತ ವಿಶೇಷವೇನಾದರೂ ಇದೆಯೆಂದು ಎನಿಸುವುದು.

ನನಗೂ ಎನ್ನಿಸುವುದು. ನನ್ನ ಸುಮಿತ್ರೆ ಉಳಿದ ಸ್ತ್ರೀಯರಿಗಿಂತ ಬೇರೆಯೇ ಇದ್ದಾಳೆ ಎಂದು. ನಮ್ಮ ಪರಸ್ಪರ ಆಕರ್ಷಣದಲ್ಲಿ ಭಾವನೆಯೊಂದೇ ಇಲ್ಲ; ಅದನ್ನು ಮೀರಿದ ಚಿರಸ್ಥಾಯಿಯಾದ ಏನೋ ಒಂದಂಶವಿದೆ. ಎರಡು ಜೀವಗಳ ಅಪೂರ್ಣತ್ವವನ್ನು ಪೂರ್ಣಗೊಳಿಸುವ ಪ್ರೇಮದಲ್ಲಿ—ಅದರ ಚಿರಂತನತ್ವದಲ್ಲಿ—ಕೇವಲ ವಿಕಾರಸಾಮ್ಯಕ್ಕೇನೇ ಎಡೆಯಿರದೆ

ವಿಚಾರಸಾಮ್ಯಕ್ಕೇನೇ ಮಹತ್ವವಿರುವುದು. ಹೀಗಿದ್ದರೇನೇ ಆ ಪ್ರೇಮ ಕೊನೆಯುವರೆಗೂ ಬಾಳುವುದು, ಇಲ್ಲವಾದರೆ ವಿಕಾರದಿಂದ ಬಿಗಿದ ಪಾಶವು ಬಿಚ್ಚುತ್ತ ಹೋದಂತೆ ಮಾನವನಿಗೆ ತಿರುಗಿ ಅಪೂರ್ಣತೆಯ ಭಾಸವಾಗುತ್ತ ಹೋಗುವುದು.

ಇದೆಲ್ಲ ಆಯಿತು....!

ಪ್ರಣಯದ ಆಟವೆಂದರೆ ಬೆಂಕಿಯೊಡನೆ ಆಟ ಆಡಿದಂತೆ. ಬಹಳ ಎಚ್ಚರದಿಂದ ಹೆಜ್ಜೆ ಇಡಬೇಕು. ಇಲ್ಲವಾದರೆ ಸುಟ್ಟುಕೊಂಡೇ ಹೋಗಬೇಕಾಗುವದು. ಎಂತಲೇ ಈ ಆಭಾಸಮಯ ಪ್ರೇಮದಲ್ಲಿ ವಿಚಾರಿಸದೆ ಬೀಳಬಾರದು. ವ್ಯಾವಹಾರಿಕ ರೀತಿಯಿಂದ—ಸಾಧಕ ಬಾಧಕ ರೀತಿಯಿಂದ—ಎದುರಿರುವ ವ್ಯಕ್ತಿಯ ಗುಣಾವಗುಣಗಳನ್ನೂ ಒಲವು ನಲಿವುಗಳನ್ನೂ ನಿರೀಕ್ಷಿಸಬೇಕು. ಇದೇ ಕೆಲಸವನ್ನು ನಾನೀಗ ಸುಲೋಚನೆಯೊಡನೆ ಮಾಡುತ್ತಿರುವೆ. ಸುಮಿತ್ರೆಯೊಡನೆ ಸಂಬಂಧ ಬೆಳೆಯುತ್ತ ಹೊರಟಾಗ ಇದನ್ನು ಯೋಚಿಸಿದ್ದೆನೆ ?

* * * *

ಹೊರಗೆ ಏನೋ ಸದ್ದಾದಂತಾಯಿತು. ಕೂಡಲೆ ಸುಬ್ಬರಾವ ಚಮಕಿತನಾಗಿ ನುಡಿದ,—

" ಯಾರದು ? "

ಏನ ಉತ್ತರ ಬರಲಿಲ್ಲ. ಬಳೆಗಳ ಸದ್ದು ಮಾತ್ರ ಕೇಳಿಸಿತು ಯಾರೋ ಗೋಡೆಯ ಹತ್ತರದಿಂದ ಹೊರಬದಿಗೆ ಸರಿದು ಹೋಗುತ್ತಿರುವಂತೆ ಸುಬ್ಬರಾವನಿಗೆ ಭಾಸವಾಯಿತು.

ಸುಬ್ಬರಾವ ನಡಗುವ ಸ್ವರದಿಂದ ಕೇಳಿದ.

" ಸುಲೋಚನೆಯೇನು ? "

ಮತ್ತೂ ಉತ್ತರವಿಲ್ಲ.

" ಸುಲೂ ! " ಎಂದು ಕೂಗಿದ ಸುಬ್ಬರಾವ.

" ಕರೆದಿರೇನು ? "

ಎಂದಳು ಸುಲೋಚನೆ. ಧ್ವನಿ ಮಾತ್ರ ಹೆದರಿಕೆಯಿಂದ ತುಂಬಿದ್ದಿತು.

" ಇಲ್ಲ....ಹೌದು.... "

ಉತ್ತರದಂತೆಯೇ ಸುಬ್ಬರಾವನ ಮನಸ್ಸೂ ಇತ್ತು.

" ಪಡಸಾಲೆಯ ಕಡೆಗೆ ಹೊರಟಿದ್ದೆ....ಕರೆದಂತಾಯಿತು...."

" ಅದೇ ಬಾಬಾಸಾಹೇಬ ಬಂದನೇನು ಕೇಳಬೇಕಂದಿದ್ದೆ...."

" ಇಲ್ಲ...."

ಸುಲೋಚನೆಯ ಜಡವಾದ ದನಿಯಿಂದ ಈ ಎರಡಕ್ಷರಗಳು ಬಿಡಿ ಬಿಡಿಯಾಗಿ ಹೊರಬಿದ್ದುವು. ಸುಬ್ಬರಾವ ಮುಂದೇನೂ ಮಾತಾಡಲಿಲ್ಲ. ಕೋಣೆಯ ಬಾಗಿಲ ತೆರೆದು ಒಳಗೆ ಬರಲಿಕ್ಕೂ ಸೊಸೆಗೆ ಹೇಳಲಿಲ್ಲ, ಏನೂ ಇಲ್ಲ. ಕುಳಿತಲ್ಲಿಯೇ ಥೇನಿಸಹತ್ತಿದ.

ಸುಲೋಚನೆಗೆ ಏನಾದರೂ ಸಂಶಯ ಬಂದಿರಬೇಕೆ ?

ಹೀಗೇಕೆ ಹೊರಗೆ ಹೊಂಚು ಹಾಕಿ ನಿಲ್ಲುವಳು ?

ಬಾಬಾಸಾಹೇಬನ ಈ ವೃತ್ತಿ ಅವಳಿಗೆ ಗೊತ್ತಾದರೆ........

ಮುಂದೆ ಅವನ ಪ್ರಪಂಚದ ಗತಿ ?

ಅಲ್ಲಿ ಯಾರೂ ಇಲ್ಲದಿದ್ದರೂ ಕೂಡ ಆ ದಿನಚರಿಯ ಪುಸ್ತಕವನ್ನು ಮುಚ್ಚಿ ಓದಲು ಹವಣಿಸಿದ ಸುಬ್ಬರಾವ. ಯಾರಿಗೂ ತಿಳಿಯಬಾರದ ಸಂಗತಿಯೊಂದು ಅದರಲ್ಲಿದೆ ಎನಿಸಿತವನಿಗೆ. ಮುಂದಿನ ಭಾಗವನ್ನು ಆದಷ್ಟು ತೀವ್ರವಾಗಿ ಮುಗಿಸಬೇಕೆಂಬ ಆತುರದಿಂದಲೇ ನೋಡತೊಡಗಿದ.

† † † †

ಸ್ವಲ್ಪ ಹೊತ್ತಿನ ಹಿಂದೆ ತಂದೆಯವರು ನನ್ನನ್ನು ತಮ್ಮ ಕೋಣೆಗೆ ಕರೆಯ ಕಳುಹಿದರು. ಆಗ ಸುಮಿತ್ರೆಯೂ ನನ್ನ ಕೋಣೆಯಲ್ಲಿ ಕುಳಿತಿದ್ದಳು. ಅವಳಿಗೆ ಏನನ್ನಿಸಿತೋ ಏನೋ ಒಮ್ಮೆಲೇ ನುಡಿದಳು.

" ಏಕೆ ಕರೆಯಿಸುವರು ಹೇಳಲಾ ? "

" ಒಳ್ಳೇ ಜೋತಿಷಿಯಾದೆಯಲ್ಲ ನೀನು. "

" ಇಂಥ ಸಮಯದಲ್ಲಿ ಆಗದೆ ಹೇಗೆ ? "

" ಇಂಥ ಸಮಯವೆಂದರೆ ? "

" ವಸಂತನಂಥ ಕ್ರಾಂತಿಕಾರನಿಗೆ ಆಶ್ರಯ ಕೊಡುತ್ತ ಇರುವಿರಿ. ಈಗ ಹೀಗೆ ಮೈಮರೆತಿದ್ದರೆ ಹೇಗೆ ? "

" ತಂದೆಯುವರಿಗೆ ಅದೇನು ಗೊತ್ತು ? "

" ಏಕೆ ಕರೆಯುುವರು ಹೋಗಿಬನ್ನಿರಿ ಅಂದರೆ ತಿಳಿಯುುವುದು ! "

ಇಷ್ಟರಲ್ಲಿ,—

" ಬಾಬೂ ! ಬಾಬೂ ! ಏಯ್ ಬಾಬು ! "

ತಂದೆಯುವರ ಕರ್ಕಶ ಸ್ವರ ಮತ್ತೆ ಸಿಡಿಲಿನಂತೆ ಕಿವಿಗೆ ಬಂದು ಅಪ್ಪಳಿಸಿತು. ತಂದೆಯುವರ ಆ ಕರೆಯುುವ ರೀತಿಯನ್ನು ಕಂಡೇ ಬೆದರಿದೆ. ಅವಸರದಿಂದ ಓಡಿಹೋದೆ. 'ಬಂದೆ'ನೆಂದು ಹೇಳಲೂ ಬಾಯಿ ಬರಲಿಲ್ಲ.

ಸುಮಿತ್ರೆ ನುಡಿದುದೇ ನಿಜವಾಯಿತು. ಬಾಯಿಗೆ ಬಂದುದನ್ನೆಲ್ಲ ಆಡಿದರು ತಂದೆಯುವರು. ಅವರಿಗೆ ದೇಶದ ಸಲುವಾಗಿ ಕಲ್ಪನೆಯಿಲ್ಲ. ಸ್ವಾತಂತ್ರ್ಯವೀರರ ಬಗ್ಗೆ ಎಳ್ಳಷ್ಟೂ ಸಹಾನುಭೂತಿಯಿಲ್ಲ. ಅಂದು ಅವರು ಆಡಿದ ನುಡಿಗಳನ್ನು ಕೇಳಿದರೆ ಯಾವ ತರುಣನೂ ಸುಮ್ಮನಿರಲಾರ. ಅಂಥ ಕಠೋರ ಶಬ್ದಗಳವು. ನನ್ನ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ತಂದೆಯುವರ ಮಾತಿಗೆ ಉತ್ತರ ಕೊಡಲು ಯತ್ನಿಸಿದೆ. ಆದರೆ ಉಪಯೋಗವಾಗಲಿಲ್ಲ. ಬಿರುಗಾಳಿಗೆ ಒಡ್ಡಿದ ಅರಳೆಯಂತೆ ನನ್ನ ಮಾತಿನ ಸ್ಥಿತಿಯಾಯಿತು. ಆ ಬಿರುನುಡಿಗಳನ್ನು ಈ ದೇಹದಲ್ಲಿ ಜೀವ ಇರುವವರೆಗೆ ನಾನೆಂದೂ ಮರೆಯುಲಾರೆ; ಮರೆಯುಲಾರೆ.

ಮುಖಭಂಗವಾಗಿ ಕೋಣೆಯಲ್ಲಿ ಬಂದು ಒರಗಿದೆ. ನನ್ನ ಸುದೈವದಿಂದ ಸುಮಿತ್ರೆ ಈ ಮೊದಲೇ ಹೊರಟುಹೋಗಿದ್ದಳು. ಅವಳಿಗೆ ಮುಖ ತೋರಿಸುವುದೂ ಕಷ್ಟವಾಗಿದ್ದಿತು. ಪ್ರೀತಿಯ ತರುಣಿಯ ಎದುರಿಗೇನೇ ಯಾರಾದರೂ ತರುಣರನ್ನು ಹೀಯಾಳಿಸಿ ನುಡಿದರೆ ಅಪಮಾನ ಇಮ್ಮಡಿಯಾಗುವದು. ಹಾಗೆಯೇ ಆಗಿದ್ದಿತು ಅಂದು ನನ್ನ ಸ್ಥಿತಿ.

ಬಹಳ ಹೊತ್ತಿನ ವರೆಗೆ ಮಲಗಿಯೇ ಇದ್ದೆ. ನನ್ನ ಜೀವನಕ್ಕೆ ನಾನೇ ಬೇಸತ್ತೆ. ಈ ಪರಿ ಬಾಳುವುದು ಒಳಿತಲ್ಲವೆಂದೆ. ಜೀವನದ ಉದ್ದೇಶವೇನೆಂಬುದನ್ನು ಅರಿವುದೂ ವಿಚಾರಿಸುವುದೂ ಅಂದು ನನಗೆ ಶಕ್ಯವಿದ್ದಿಲ್ಲ. ನನ್ನ ಚಿಕ್ಕಂದಿನ ಆಯುುಷ್ಯದ ಕಡೆಗೆ ದೃಷ್ಟಿ ಹೊರಳಿಸಿದೆ. ಮೊದಲಿನಿಂದಲೂ ನನ್ನ ಹೋರಾಟ—ನನ್ನ ಜೀವನದ ಧ್ಯೇಯದತ್ತ ಸಾಗಿದೆ.

ನನ್ನ ಆಶೆ ಆಕಾಂಕ್ಷೆಗಳು ಈ ಭೂಮಿಗತರಿಗೆ ನೆರವಾಗುವುದರಿಂದ ಸಿದ್ಧಿಸುವಂತಿವೆ. ಎಂದು ನನಗೆ ವಸಂತನ ಗುರುತಾಯಿತೋ ಆಂದೇ ನನಗೆ ಎನ್ನಿಸಿತು.

"ತಿಳಿಯಿತು ನನ್ನ ಜೀವನದ ಹೇತು! ನಾನು ಇದನ್ನು ಮಾಡಬೇಕಾಗಿದೆ!"

ತಂದೆಯವರ ನಡತೆ ನೋಡಿದರೆ ನನಗೆ ನಗೆ ಬರುತ್ತದೆ. ಪ್ರಸಿದ್ಧರಾಗಲು ಅದೆಷ್ಟು ಹಂಬಲಿಸುವರೋ!

ದಿವಾಣಸಾಹೇಬರು ಮನೆಗೆ ಬಂದರೆ ದೊಡ್ಡಸ್ತಿಕೆ ಬಂದಿತೆ?

ಬೇಕಾದ ಸಿರಿವಂತರನ್ನು ಮನೆಗೆ ಕರಿಸುವುದು, ಅವರಿಗೆ ಫಲಹಾರ ಕೊಡುವುದರಲ್ಲಿ ಧನ್ಯತೆ ಪಡೆಯುವದೆಂದರೆ....!

ಛೀ! ಮೂರ್ಖತನದ ಪರಮಾವಧಿಯಿದು!

ನಮ್ಮ ದುಡ್ಡು ಬಡಬಗ್ಗರಿಗೆ ಉಪಯೋಗವಾಗಬೇಕು.

ಯಾರಾದರೂ ಇವರಿಗೆ ಸಿರಿವಂತರೆಂದು ಹೊಗಳಿದರೆ ತೀರಿಯೇ ಹೋಯಿತು. ಉಬ್ಬಿದರೇ! ಈ ಹೊಗಳು ಭಟ್ಟರಿಂದಲೇ ಇವರು ದೊಡ್ಡವರೆನಿಸುವುದು. ಅವರು ಇವರಿಗೆ ದೊಡ್ಡವರೆನ್ನುವುದು. ಇವರು ಅವರಿಗೆ ದೊಡ್ಡವರೆನ್ನುವುದು. ಇದು ದೊಡ್ಡವರಾಗುವವರ ಗುಸ್ತ ಗುಂಪಿರುತ್ತದೆ! ಇದು ದೊಡ್ಡ ದೊಡ್ಡವರಿಗೆಲ್ಲ ಗೊತ್ತು. ಆದರೂ ಮಾತಾಡದಿರುವುದು ಅವರ ವೈಶಿಷ್ಟ್ಯವಾಗಿದೆ. ಯಾಕಂದರೆ ಅವರೂ ಆ ಮಂಡಲದ ಸದಸ್ಯರಾಗಬೇಕಾಗಿರುತ್ತದೆ. ಅದೊಂದು ಅವರ ವ್ಯವಹಾರ!

ಈ ನಿಂದೆಯಾದರೂ ನನಗೇತಕ್ಕೆಬೇಕು. ಅವರು ತಮಗೆ ಬೇಕಾದಂತೆ ತಮ್ಮ ಜೀವಿತದ ಧ್ಯೇಯವನ್ನು ನಿಶ್ಚಯಿಸಿಕೊಂಡಿದ್ದಾರೆ. ನನ್ನ ಧ್ಯೇಯ ಮಾತ್ರ ಅದಕ್ಕಿಂತ ಬೇರೆಯೇ ಆಗಿದೆ. ಇಷ್ಟು ಮಾತ್ರ ನಿಜ.

ಹೀಗದೆಷ್ಟೋ ಕಾಲ ಕಳೆಯಿತು. ಬಹಳ ಹೊತ್ತಿನ ಮೇಲೆ ಸುಲೋಚನೆ ಬಂದಳು. ಬಂದವಳೇ ಲಜ್ಜೆಯಿಲ್ಲದೆ ತಟ್ಟನೆ ನುಡಿದಳು.

"ಆ ವಸಂತನನ್ನು ಮನೆಯಲ್ಲಿ ಕರೆದುಕೊಂಡು ಇಲ್ಲದ ಬೈಗಳು. ಸಂಕಟಗಳಿಗೆ ನೀವಾದರೂ ಆಸ್ಪದವನ್ನೇಕೆ ಮಾಡಿಕೊಡುವಿರಿ?"

ಎಂದಿಲ್ಲದ ಸಿಟ್ಟು ಬಾತೆನಗೆ. ಕಠೋರವಾಗಿ ಖಂಡಿಸಿ ನುಡಿದೆ.

" ನಡೆ ಇಲ್ಲಿಂದ ! "

" ನಿಮ್ಮನ್ನ ಹಿಡಿದು ಒಯ್ದ ಮೇಲೆ ನಾವಷ್ಟೇ ಮನೆಯೊಳಗ ಕೂಡ ಬೇಕೇನೊ ! "

ಗಲ್ಲ ಉಬ್ಬಿಸಿ ನುಡಿದಳು ಸುಲಾ. ಧ್ವನಿಯಲ್ಲಿ ಆತ್ಮೀಯತೆ ಇತ್ತು. ಆವಳ ಮುಖವನ್ನು ಒಂದು ಕ್ಷಣ ನಿರೀಕ್ಷಿಸಿದೆ. ಮತ್ತು ನುಡಿದೆ.

" ನನ್ನನ್ನು ಒಯ್ದರೆ ನೀನೂ ಬರಬೇಕು ? "

" ಮನೆ ಬಿಟ್ಟು ಹೊರಗೆ ಹೋಗಲಿಕ್ಕೆ ಒಪ್ಪಿಗೆಯಿಲ್ಲ. ಇನ್ನು ಜೇಲಿಗೆ ಹೋಗಗೊಡತಾರ. " ನಿವೇದನೆಯ ಭಾವವಿದ್ದಿತು.

" ಅಂಥ ಕಾರ್ಯವೇನಾದರೂ ಮಾಡಿದರೆ ಹೋಗುವಿ ? "

" ಹೇಗೆ ಮಾಡ್ತಾರದು ? " ಸಿಡುಕಿನಿಂದ ಕೇಳಿದಳು ಸುಲಾ.

ಪ್ರತಿಯೊಬ್ಬ ಸ್ತ್ರೀಗೂ ತನ್ನ ಜಗತ್ತಿನಲ್ಲಿ ತನ್ನ ಪತಿಯ ಮಹತ್ವ ವನ್ನು ಕಾಣುವ ಆಕಾಂಕ್ಷೆ ಇರುತ್ತಿರಬೇಕು. ಅದಕ್ಕಂತೇ ತಾನು ನಿರ್ಮಿಸಿ ಕೊಂಡ ವಿಶ್ವದಲ್ಲಿ ಒಬ್ಬ ಹೆಂಗಸು ಇನ್ನೊಬ್ಬ ಹೆಂಗಸಿನ ಮುಂದೆ ತನ್ನ ಪತಿಯ ಒಲವು ನಲವುಗಳನ್ನು ಆನಂದದಿಂದ—ಅಭಿಮಾನದಿಂದ ಹೇಳಿ ತನ್ನ ಗಂಡನ ವೈಶಿಷ್ಟ್ಯ ಪ್ರದರ್ಶಿಸುವ ಪ್ರಯತ್ನ ಮಾಡುತ್ತಾಳೆ. ಇಂಥ ಸಂದರ್ಭನಲ್ಲೆಲ್ಲ ಸುಲೋಚನೆ ನನ್ನ ಬಗ್ಗೆ ಅನ್ಯರ ಮುಂದೆ ಹೇಳಿದ ಹಲವು ಮಾತುಗಳನ್ನು ಕೇಳಿದ್ದೇನೆ. ಅವಳಿಗೆ ನನ್ನ ಕಾರ್ಯ ಸೇರುತ್ತಿರಬೇಕೆಂದು ಅನುಮಾನಿಸಿದ್ದೇನೆ. ಆದರೂ ಸುಮಿತ್ರೆಯನ್ನು ನನ್ನ ವಿಶ್ವಾಸದ ವ್ಯಕ್ತಿ ಯನ್ನು ಮಾಡಿಕೊಂಡಂತೆ ಇವಳನ್ನು ಮಾಡಿಕೊಂಡಿಲ್ಲ. ಅದೇಕೋ ಹಾಗೆ ಮಾಡಿಕೊಳ್ಳಲು ಮನಸ್ಸು ಒಪ್ಪದು. ಅಧಿಕಾರ ಸಾಲದು.

ಹಿಂದೆ ಮೂರು ದಿನ ವಸಂತ ಅಡಗಿ ಕುಳಿತಾಗ ನನ್ನ ಕೋಣೆಯ ಬೀಗದ ಕೈ ಸುಮಿತ್ರೆಯ ಸ್ವಾಧೀನ, ಊಟ ಗುಪ್ತವಾಗಿ ಬರುವದು ಅವಳ ಮನೆಯಿಂದ, ಇದರ ಸುಳಿವು ಮನೆಯಲ್ಲಿದ್ದೂ ಸುಲೋಚನೆಗೆ ಇಲ್ಲ. ಹಾಗೆಂದೇ ಅಂಥ ಪ್ರಸಂಗದಲ್ಲಿ ವಸಂತ ಸಿಕ್ಕದೆ ಉಳಿದ.

ಪ್ರತಿ ಸರಕಾರ

ಅದೇ ಸುಲೋಚನೆಗೆ ಮತ್ತೊಮ್ಮೆ ಗೊತ್ತಿದ್ದಾಗಲೇ ಆಯಿತಲ್ಲ! ಆ ಸಿನೇಮಾ ಗೃಹದಲ್ಲಿಯ ಮಾಟ!

ಅಂದು ವಸಂತ ಎಂಥ ಭಯಂಕರ ಕೆಲಸ ಮಾಡಿ ಬಂದಿದ್ದ!

\+ \+ ÷ \+

ನಾವು ಸ್ಥಾಪಿಸಿದ ಪ್ರತಿ ಸರಕಾರ—ಪತ್ರಿ ಸರಕಾರವೆಂದೂ ಜನ ಅನ್ನಲಿ ಬೇಕಾದರೆ! —ಏನು ಮಾಡೀತು? ಏನನ್ನು ಮಾಡುವದಕ್ಕಾಗಿ ಸ್ಥಾಪಿಸಲ್ಪಟ್ಟಿತು ಇದು ಬಹಳ ಜನಕ್ಕೆ ಗೊತ್ತಿಲ್ಲ. ಸರಕಾರವಂತೂ ಇಲ್ಲದ ಆರೋಪ ಹೊರಿಸುತ್ತಿದೆ ನಮ್ಮ ಮೇಲೆ. ಬಂಗಾಲದ ಸುರಾಜ ಉದ್ದೌಲ ನಿಂದ ಈ ನರಗುಂದದ ಬಾಬಾಸಾಹೇಬನವರೆಗೆ ಎಲ್ಲರ ಕೃತಿಗಳನ್ನು ಇಂತಹ ಆರೋಪದಿಂದ ಮಲಿನ ಮಾಡುವ ಪ್ರಯತ್ನವನ್ನು ಆಳರಸರು ಮಾಡುತ್ತ ಬಂದಿದ್ದಾರೆ. ಆದರೆ ಕಾಲ ಪುರುಷನು ಸತ್ಯನಿಷ್ಠನಿದ್ದಾನೆ, ಒಳ್ಳೆಯ ವಿಮರ್ಶಕನಿದ್ದಾನೆ. ಅವನೇ ನಿಜವಾದ ಇತಿಹಾಸಕಾರನು. ಅವನು ಪರಕೀಯ ಸತ್ತೆಯ ವಿರುದ್ಧ ಕಾಲ ಕಾಲಕ್ಕೆ ವೀರರ ಮೇಲಿನ ಇಂತಹ ಕಲಂಕವನ್ನು ಕಳೆದಿದ್ದಾನೆ. ನಮ್ಮ ಕಾರ್ಯದ ಬೆಲೆ ನೆಲೆಯನ್ನು ಇತಿಹಾಸ ಪುರುಷ ಅಳೆಯಲೆಂದು ಸಂತೋಷದಿಂದ ಅವನಿಗೆ ಒಪ್ಪಿಸಿಕೊಡಲು ಸಾತಾರೆಯ ಕ್ರಾಂತಿಕಾರರೆಲ್ಲರೂ ಸಿದ್ಧರಿದ್ದೇವೆ.

ಸಾತಾರಾ, ಮಿದನಾಪುರ, ಭಾಗಲಪುರ, ರಾಮಸದ, ಮತ್ತು ಬಾಲಿಯಾಗಳಲ್ಲಿಯ ಘಟನೆಗಳು ಯಾರಿಗೂ ಕೌತುಕವನ್ನುಂಟುಮಾಡದೆ ಬಿಡವು, ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಜನತೆ ಅರ್ಪಿಸುತ್ತಲಿದೆ. ನಾಳೆ ಅವರ ಸ್ಮಾರಕವನ್ನು ನಿರ್ಮಿಸೀತು. ಬ್ರಿಟಿಷ ಸತ್ತೆಯ ಪಾಶವೀ ಅತ್ಯಾಚಾರದ ಬಗ್ಗೆ ಮುಖಂಡರು ಸ್ಪಷ್ಟವಾಗಿ ಅಲ್ಲಿ ಇಲ್ಲಿ ಮಾತಾಡುತ್ತಲೂ ಇದ್ದಾರೆ. ಸ್ವಾತಂತ್ರ್ಯ ಸಮರದಲ್ಲಿ ಜನತೆಯು ಮಾಡಿದ ತ್ಯಾಗ, ಆತ್ಮ ಬಲಿದಾನಗಳನ್ನು ಕುರಿತು ಅಲ್ಲಲ್ಲಿ ಶಾಹೀರಗಾನಗಳೂ ಕೇಳಬರುತ್ತಿವೆ. ಆದರೆ ಅಧಿಕಾರಿ ವರ್ಗ ಇದೆಲ್ಲದಕ್ಕೂ ಕಿವಿ ಮುಚ್ಚಿಕೊಂಡೇ ಕುಳಿತಿದೆ. ಅಗಸ್ಟ ಕ್ರಾಂತಿವೀರ ತನ್ನ ದಿನಚರಿಯಲ್ಲಿ ಬರೆದ.

"Admiration is not understanding!"

ಈ ವಾಕ್ಯವೇನೂ ಸುಳ್ಳಲ್ಲ.

೧೮೫೭ರ ಕ್ರಾಂತಿಯನ್ನು ಒಂದು ವಿಶಿಷ್ಟ ದೃಷ್ಟಿಯಿಂದಲೇ ನೋಡಲಿಕ್ಕೆಬೇಕು. ಜಗತ್ತಿನೊಳಗಿನ ಯಾವ ರಾಷ್ಟ್ರದ ಸ್ವಾತಂತ್ರ್ಯದ ಸಮರಗಳನ್ನು ನಿರೀಕ್ಷಿಸಿದರೂ ಕಂಡುಬರುವ ಸಂಗತಿ ಇದೊಂದೇ. ಕುರುಡನು ಕೈಯಾಡಿಸಿ ತನ್ನ ದಾರಿಯನ್ನು ಕಂಡುಕೊಂಡಂತೆ ಜನತೆ ತಾನರಿಯದೇನೇ ಅವಶ್ಯಕ ಪ್ರತಿಕಾರ ತಂತ್ರವನ್ನು ನಿರ್ಮಿಸಿಕೊಂಡು ಬಿಡುತ್ತದೆ. ಇದು ಜನತೆಯ ಸ್ವಾಭಾವಿಕ ಪ್ರವೃತ್ತಿ, ಪೂರ್ವಾನುಭವ, ಸುತ್ತಲಿನ ಪರಿಸ್ಥಿತಿಗಳಿಂದ ತಾನೇ ತಾನಾಗಿ ರೂಪುಗೊಳ್ಳುತ್ತಿರುವುದು. ಆದರೂ ಕ್ರಾಂತಿ ಕಿಡಿಯು ಮಿಂಚಿನಂತೆ ಆಕಸ್ಮಿಕವಾಗಿ ತೋರುವುದು. ಮಾರ್ಕ್ಸನು ತನ್ನ ಗ್ರಂಥದಲ್ಲಿ "ಪ್ಯಾರಿಸ್ ಕಮ್ಯುನ್"ದ ಜಾತಕ ಬರೆಯುವಾಗ ಹೇಳಿದ ವಿವರದ ಅರ್ಥವೂ ಇದೇ ಆಗಿದೆ. ೧೮೫೭ರ ಹೋರಾಟದಲ್ಲಿ ಜನತೆಯಲ್ಲಿ ಸುಷುಪ್ತಾವಸ್ಥೆಯೊಳಗೆ ಇದ್ದ ಶಕ್ತಿಯು ಆವಿಷ್ಕಾರವಾದದ್ದು ಕಂಡುಬರುವದು. ಈ ಆವಿಷ್ಕಾರದಲ್ಲಿ ಭಾರತದ ಪರಿಸ್ಥಿತಿಗೆ ಅನುಕೂಲವಾದ ಯುದ್ಧತಂತ್ರವನ್ನು ಹುಡುಕಿತೆಗೆಯುವ ಪ್ರಯತ್ನವನ್ನು ನಾವು—ಸಾತಾರೆಯ ಕ್ರಾಂತಿವೀರರು—ಮಾಡಿದ್ದೇವೆ.

ಕೃತಿಯು ಸ್ವಭಾವಧರ್ಮದ ಪರಿಪಾಕವಿರುತ್ತದೆ. ನಮ್ಮ ಕ್ರಾಂತಿಕಾರ್ಯದ ಹಿನ್ನೆಲೆಯಲ್ಲಿ ನಮ್ಮ ನಾಡಿನ ಜನತೆಯ ಸ್ವಭಾವ ವ್ಯಕ್ತವಾಗುತ್ತಿದೆ. ನಾವು ಅನ್ಯ ಸತ್ತೆಗೆ ಎಂದು ತಲೆ ತಗ್ಗಿಸಿದ್ದೇವೆ? ಸತ್ತೆಯು ನಿರ್ಮಿಸಿದ ಕಾಯದೆಗೆ ಸಿಕ್ಕದಂತೆ ಎಂದಿನಿಂದಲೂ ನಾವು ಹೋರಾಡುತ್ತಲೇ ಬಂದಿದ್ದೇವೆ. ಔರಂಗಜೇಬನ ಕಾಲದಿಂದಲೂ ನಮ್ಮ ಕರ್ತವ್ಯವನ್ನೇನೂ ನಾವು ಬಿಟ್ಟಿಲ್ಲ. ನಮಗೆ ವಿರೋಧ ಬಗೆದ ಕುಲಕಂಟಕರನ್ನು ದಂಡಿಸಲೂ ಹಿಂಜರಿದಿಲ್ಲ.

‡ ‡ ‡ ‡

ಯಾವದೋ ವಿಷಯದಲ್ಲಿ ತಲ್ಲೀನನಾಗಿ ಬರಿಮೈಯಿಂದ ಕುಳಿತಾಗ ಸೂರಿನಿಂದ ದೊಡ್ಡ ಮಳೆ ಹನಿಯೊಂದು ಜಾರಿ ಮೈಮೇಲೆ ಬೀಳಲು ಉಂಟಾಗುವ ನಡುಕದಂತೆ ಸುಬ್ಬರಾವ ನಡುಗಿದ. ಕೈಯೊಳಗಿನ ಪುಸ್ತಕ ನಡುಗಿತು. ಕಣ್ಣಿಗೆ ಕತ್ತಲು ಕವಿದಿತು. ಕಣ್ಣು ಮುಚ್ಚಿ ಕ್ಷಣಕಾಲ ಸುಮ್ಮನೆ ಕುಳಿತ. ಅದೇನೋ ಮನಸ್ಸು ಇಪ್ಪತ್ತುನಾಲ್ಕು ತಾಸುಗಳಲ್ಲಿ ಉಳಿದ

ಅವಧಿಯ ಲೆಕ್ಕ ಹಾಕತೊಡಗಿತು. ನಿರ್ವಿಣ್ಣನಾದ. ನಿರುಪಾಯನಾದ. ಹೆದರಿಕೆಯಿಂದಲೇ ಕಣ್ದೆರೆದು ಮುಂದೆ ಓದತೊಡಗಿದ.

§ § § §

“ಭಾರತ ಬಿಟ್ಟು ಹೊರಟುಹೋಗಿರಿ!”
ಮಹಾತ್ಮರ ಹೋರಾಟದ ಘೋಷಣೆಯಿದು.
“ನಾಳೆ ನೀವು ಪ್ರತಿಯೊಬ್ಬರೂ ಸ್ವತಂತ್ರರು.”
ಅಗಸ್ಟ ಎಂಟಕ್ಕೆ ಮಹಾತ್ಮರು ಸಾರಿದ ಸಂದೇಶವಿದು.

ಈ ಘೋಷಣೆಯನ್ನು ಈ ಸಂದೇಶವನ್ನು ಸತ್ಯಸೃಷ್ಟಿಯಲ್ಲಿ ಇಳಿಸಬೇಕೆಂಬುದೇ ಜನತೆಯ ಪ್ರಯತ್ನ. ಈ ಪ್ರಯತ್ನದ ಕ್ರಮವನ್ನು ಶೋಧಿಸುವುದರಲ್ಲಿಯೇ ತರುಣರೆಲ್ಲ ತೊಡಗಿದ್ದಾರೆ. ಅದು ಅವರಿಗೆ ಬಿಡಿಸಲಾರದ ಗಣಿತದಂತಾಗಿದೆ. ಸಭೆ ಮೆರವಣಿಗೆಗಳ ರೀತಿಯಿಂದ ಬಿಡಬಹುದೇನೋ ಎಂಬೊಂದು ವಿಚಾರ. ಆ ಮಾರ್ಗದಲ್ಲಿ ಪ್ರಯತ್ನಿಸಿದರು. ಇದರಿಂದಲೇ ಇನ್ನೊಂದು ಮಾರ್ಗವು ಕಂಡಿತು.

ಬ್ರಿಟಿಷ ಸತ್ತೆ ಸುಸೂತ್ರ ಬಾಳುತ್ತಿದ್ದುದು ತಾಲೂಕ ಕಚೇರಿಗಳ ಕೋಟೆಯಲ್ಲಿ. ಜನತೆಯಿಂದ ಆಡಳಿತೆಗೆ ಬೇಕಾದ ಧನವನ್ನು ಕೂಡಿಸಿ ಕಳಿಸುವ ಕೆಲಸವನ್ನು ಈ ಕಚೇರಿಗಳು ಮಾಡುತ್ತಿವೆ. ಇವನ್ನೇ ವಶಮಾಡಿಕೊಳ್ಳುವುದು ಒಳಿತು. ನಮ್ಮ ಧ್ಯೇಯ ಸಾಧನೆಗೆ ಇದು ಒಳ್ಳೆಯ ದಾರಿ.

ಏನು ಹೇಳಲಿ?

ಅಂದು ೧೯೪೨ರ ಅಗಸ್ಟ ಇಪ್ಪತ್ತನಾಲ್ಕು. ಕರ್ಹಾಡ ಕಚೇರಿಯ ಮೇಲೆ ನಮ್ಮ ಮೊದಲನೆಯ ‘ಮೋರ್ಚೆ’ ಹೋಯಿತು. ಸುತ್ತಲಿನ ಹಳ್ಳಿಗಳಿಂದ ನಾಲ್ಕೈದು ನೂರು ಜನ ಸೇರಿದ್ದಿತು. ಮಾಮುಲತಿಯ ಕೆಲಸವನ್ನು ತಡೆದು ನಿಲ್ಲಿಸಿದನಂತರ ಊರಲ್ಲಿ ಮೆರವಣಿಗೆ ಹೊರಟಿತು. ಕಚೇರಿಯ ಮುಂದೆ ಸಭೆ ಆಯಿತು. ಆಗ ಮುಖ್ಯ ವ್ಯಾಖ್ಯಾತರಾದ ಶ್ರೀ. ಬಾಳಕೋಬಾ ಪಾಟೀಲರನ್ನು ಬಂಧಿಸಿದರು. ಆದರೂ ಸಭೆಯ ಕಾರ್ಯ ಸಾಗಿತು!

ಇದರಿಂದ ನಮಗೊಂದು ಆತ್ಮವಿಶ್ವಾಸ ಹುಟ್ಟಿತು. ಅಂತಲೇ ಪಾಟಣ, ತಾಸಗಾಂವ ಕಚೇರಿಗಳ ಮೇಲೆಯೂ ಮೋರ್ಚೆ ಸಾಗಿಸಲಾಯಿತು.

ಅಲ್ಲಿ ಕೂಡಿದ ಜನ ಮೂರು ಸಾವಿರ! ಅವರಲ್ಲಿ ಅಪೂರ್ವ ಚೈತನ್ಯ ತುಂಬಿತ್ತು. ೧೯೪೨ರ ಮಹಾಭಾರತದ ಸಂಗ್ರಾಮದಲ್ಲಿಯ ಇದೊಂದು ಪರ್ವ. ಅಹಿಂಸಾತ್ಮಕ ಈ ಹೋರಾಟವು ಸರಕಾರದ ಹಿಂಸಕ ಸತ್ತೆಗೆ ಆಹ್ವಾನವಿತ್ತಂತೆ ಆಗಿದ್ದಿತು.

ಅದು ವಡೂಜ! ಖಟಾವ ತಾಲೂಕಿನ ಮುಖ್ಯಸ್ಥಳವದು. ಅಹಿಂಸಾ ಸಮರದ ಪುಣ್ಯಭೂಮಿ. ಗಾಂಧೀ ಭಕ್ತರು ದರ್ಶನಕ್ಕೆ ಬರಬೇಕಾದ ಪವಿತ್ರ ಸ್ಥಳ.

ತಾಲೂಕ ಕಚೇರಿಯ ಮೇಲೆ ಸಾಗಿದ ಸಣ್ಣದೊಂದು ಜನ ಸಮೂಹವದು. ಪರಶುರಾಮ ಪೈಲವಾನ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಮುಂದೆ ಸಾಗಿರುವ. ಪೂರ್ವಸೂಚನೆಯಂತೆ ಪೋಲೀಸರು ಗೋಳೀಬಾರ ಮಾಡಿದರು. ಪರುಶುರಾಮನ ಭುಜಕ್ಕೆ ಗುಂಡು ತಾಗಿತು. ಆದರೂ ಧ್ವಜವನ್ನು ಬಿಡಲಿಲ್ಲ ಆ ವೀರ. ಮತ್ತೆ ಮೂರು ಗುಂಡುಗಳು ಮೈಯಲ್ಲಿ ನಟ್ಟವು. ಇನ್ನೂ ರಾಷ್ಟ್ರಧ್ವಜ ಮೇಲೆಯೇ ಹಾರಾಡುತಲಿದ್ದಿತು. ಅವನ ಹೃದಯದಲ್ಲಿರುವ ದೇಶಭಕ್ತಿಯನ್ನು ಅಳಿಯಲೆಂದೋ ಏನೋ ಗುಂಡುಗಳು ಅಲ್ಲಿಯೂ ಸೇರಿದುವು. ಆಗ ಅರವಿಂದ, ಅಶೋಕ ಎಂಬ ಇಬ್ಬರು ತರುಣರು ಧ್ವಜವನ್ನು ಎತ್ತಲು ಮುಂದೆ ಧಾವಿಸಿದರು. ಅವರ ತೊಡೆಗಳೂ ಪೋಲೀಸರ ಗುಂಡಿನೇಟಿಗೆ ಔತನವಾದುವು. ಹಲವರು ಮಡಿದರು. ಅನೇಕರಿಗೆ ಗಾಯಗಳಾದುವು. ನೂರಾರು ಜನರನ್ನು ಬಂಧಿಸಿದರು. ಶವಗಳನ್ನು ಪೋಲೀಸರು ಬೂಟುಗಾಲಿನಿಂದ ತುಳಿದರು! ಅಹಿಂಸೆಯ ಹೋರಾಟಕ್ಕೆ ಸರಕಾರ ಕೊಟ್ಟ ಉತ್ತರವಿದು?

† † † †

ನನ್ನ ಮನಸ್ಸು ಈಗೀಗ ಪ್ರತಿ ಸರಕಾರದ ಕಾರ್ಯದಲ್ಲಿ ಹೆಚ್ಚಿಚ್ಚು ಆಸಕ್ತಿ ವಹಿಸುತ್ತಿದೆ. ಒಂದೊಂದು ಪ್ರಸಂಗದಲ್ಲಿ ಜೀವದ ಪರಿವೆ ಇಲ್ಲದೆ ಕಾರ್ಯದಲ್ಲಿ ಧುಮುಕುತ್ತಿರುವೆ. ಆಗ ಮನೆ ಮಡದಿ ಯಾರೂ ನೆನಪಾಗುವದಿಲ್ಲ. ದೇಶದ ಸ್ವಾತಂತ್ರ್ಯ ಒಂದೇ ನನ್ನ ದೃಷ್ಟಿಯಲ್ಲಿರುವದು. ನನ್ನ ಜೀವಿತದ ಸಾರ್ಥಕತೆಯ ಕಡೆಗೆ ನನ್ನ ಲಕ್ಷ್ಯವೆಲ್ಲ ಸೇರಿಬಿಟ್ಟಿದೆ.

ಇದು ಭಗ್ನಹೃದಯಿಯ ವೃತ್ತಿ ಇರಬಹುದೋ ?

ಛೀ ! ಹಾಗೆಂದಿಗೂ ಇರದು.

ಯಾಕಿರಬಾರದು ?

ಸಂಸಾರದಲ್ಲಿಯ ಕೊರತೆಯಿಂದ ಸಾಮಾಜಿಕ ಸೇವೆಯತ್ತ ಮನಸ್ಸು ಹರಿದರೆ ತಪ್ಪೇನು ?

ಮನೆಯಲ್ಲಿ ಶಾಂತತೆ ಸುಖ ಸಿಕ್ಕದಾಗ ದೇಶದ ಶಾಂತಿ ಸುಖಗಳಿಗೆ ಪ್ರಯತ್ನಿಸುವುದು ಸರಿಯೇ ?

ಯಾವುದೋ ಒಂದರಲ್ಲಿ ಅಸಮಾಧಾನ ತಾಳಿದ ಮನಸ್ಸು ಇನ್ನೊಂದರಲ್ಲಿ ತೊಡಗಿ ಸಮಾಧಾನ ಮಾಡಿಕೊಳ್ಳಲು ಯತ್ನಿಸುವುದು ! ತನ್ನ ಅಸಮಾಧಾನವನ್ನು ಮರೆಯುವುದು !

ಮನೆತನದ ಪ್ರೇಮದ ಸ್ಥಳದಲ್ಲಿ ದೇಶಪ್ರೇಮ ವ್ಯಾಪಿಸಿದರೆ ತಪ್ಪೇನು? ಸುಮಿತ್ರೆಯೊಡನಾದ ಭಗ್ನಪ್ರಯಣವು ದೇಶಸೇವೆಗೆ ಸ್ಫೂರ್ತಿ ಕೊಟ್ಟಿರಬೇಕೆ?

ಈಗ ಸುಮಿತ್ರೆಯ ಸ್ಥಳದಲ್ಲಿ ಸುಲೋಚನೆ ಇದ್ದಾಳಲ್ಲ !

ಅಹುದು. ಸುಲೋಚನೆಯೂ ನನಗೆ ಅನುರೂಪಳಾದ ಸ್ತ್ರೀ. ಯಾವುದೋ ಒಂದು ಮಬ್ಬಿನಲ್ಲಿ ಅವಳ ಗುಣವನ್ನು ಕಾಣದೆ ಹೋಗಿದ್ದೆ.

ಸುಮಿತ್ರೆಯೊಡನೆ ಚಿಕ್ಕಂದಿನಿಂದ ಬೆಳೆದು ಬಂದ ಆತ್ಮೀಯತೆ ಇದಕ್ಕೆ ಕಾರಣವಾಗಿರಬೇಕು.

ಸುಮಿತ್ರೆಯನ್ನು ಯಾವ ದೃಷ್ಟಿಯಿಂದ ನಾನು ಕಂಡಿದ್ದೆ ?

ಸುಲೋಚನೆಯನ್ನು ಯಾವ ದೃಷ್ಟಿಯಿಂದ ಕಾಣುತ್ತಿರುವೆ ?

ನನ್ನದು ಭಗ್ನಹೃದಯಿಯ ವೃತ್ತಿಯಲ್ಲ. ಸಂಸ್ಕೃತಿಯ ವಿಜಯ !

ಇಂದ್ರಿಯಗಳೇನೋ ಬೇಕಾದತ್ತ ಹರಿಯಬಹುದು, ಎಳೆಯಬಹುದು. ಅವುಗಳನ್ನು ತಡೆಹಿಡಿದು ಒಳ್ಳೆಯದರ ಕಡೆಗೆ ಹಚ್ಚುವುದೇ ಸಂಸ್ಕೃತಿಯ ಲಕ್ಷಣ. ಹಾಗೆ ಮಾಡುವವನೇ ಸುಸಂಸ್ಕೃತನು.

ಸುಮಿತ್ರೆಯೂ ನನ್ನ ದೇಶಕಾರ್ಯದಲ್ಲಿ ನೆರವಾಗುತ್ತಿರುವಳಲ್ಲ !

ಯಾವ ಬುದ್ಧಿಯಿಂದ ಹೀಗೆ ಮಾಡುತ್ತಿರಬೇಕು ?

ದೇಶ ಪ್ರೀತಿಯಿಂದಲೋ ?

ನನಗೆ ಪ್ರಿಯವಾದ ಕೆಲಸವೆಂದೊ ?

ನನ್ನ ಮೇಲಿನ ಪ್ರೀತಿಯಿಂದಲೊ ?

ನನ್ನ ಮೇಲಿನ ಅನುರಾಗದಿಂದಂತೂ ಅಲ್ಲವೇ ಅಲ್ಲ. ಹಾಗಿದ್ದರೆ ಇಸ್ಲಾಂಪುರ ಗೋಳೀಬಾರಿನ ಸಂದರ್ಭದಲ್ಲಿ ಅಷ್ಟು ಉತ್ಸಾಹದಿಂದ ಕಳಿಸುತ್ತಿದ್ದಳೇ ?

ಅಂದು 'ಮೋರ್ಚೆ'ಯ ಮುಂದಾಳಾಗಿ ಹೋಗಲು ಸುಲೋಚನೆಯೂ ಸಹಾಯ ನೀಡಿದಳಲ್ಲ. ಅವಳು ತಂದೆಯವರ ಮುಂದೆ ಹಾಗೆ ಸುಳ್ಳು ಹೇಳದಿದ್ದರೆ ನನಗೆ ಹೋಗಲು ಶಕ್ಯವಿತ್ತೇ ?

ಈಗ ಅವಳು ನೀಡುತ್ತಿರುವ ಸಹಾಯವೂ ಅಮೌಲ್ಯವಾದುದು.

ಆದರೆ ಅವಳ ಮುಖದಲ್ಲಿಯ ಮ್ಲಾನತೆ ಮಾತ್ರ ಇನ್ನೂ ಅಡಗಿಲ್ಲ! ಏಕೆ ?

ಇಸ್ಲಾಂಪುರದ ಗೋಳೀಬಾರಿನ ವಿಷಯಕ್ಕೆ ಬರೆಯಬೇಕಿದ್ದಿತು. ಬರೆಯಲೆಂದು ಕುಳಿತು ಮತ್ತೇನನ್ನೋ ಬರೆಯುತ್ತಸಾಗಿದೆ. ಕಣ್ಣುಗಳು ಉರಿಯುತ್ತಿವೆ. ಮೂರು ದಿನಗಳಿಂದ ನಿದ್ರೆಯಿಲ್ಲ. ರಾತ್ರಿ ತಂದೆಗೆ ಗೊತ್ತಿಲ್ಲದಂತೆ ಕಾರ್ಯಕ್ಕೆ ಹೋಗುವುದು. ಹಗಲು ಮನೆಯಲ್ಲಿರುವುದು. ಇನ್ನು ಮುಂದಿನ ವಿಷಯ ನಾಳೆಯೇ ಬರೆದರಾಯಿತು.

ನಾಳೆ ಬರೆಯಲಿಕ್ಕೆ ಆಗುವದೋ ಇಲ್ಲವೋ? ಈಗೀಗ ಬರೆಯಲಿಕ್ಕೆ ವೇಳೆಯೇ ಸಿಕ್ಕದು. ನಾಲ್ಕಾರು ದಿನ ಬರೆಯದೆ ನಿಂತರೂ ನಿಂತಿತೇ ? ಹಿಂದಿನಿಂದ ನೆನಪಿದ್ದದ್ದನ್ನಷ್ಟು ಬರೆಯಬೇಕಾಗುವುದು.

ದಿನಚರಿ ಬರೆಯುವದು ಮುಖ್ಯವಲ್ಲ. ಬರೆಯುವಂತಹ ಕಾರ್ಯ ಮಾಡುವದು ಮುಖ್ಯ.

* * * *

ಮರುದಿನ ! ವಡೂಜದಲ್ಲಾದ ಗೋಳೀಬಾರಿನ ಮರುದಿನವಿರಬೇಕದು ! ಸಪ್ಟಂಬರ ಏಳನೆಯ ದಿನ! ಇಸ್ಲಾಂಪುರದಲ್ಲಿ ನಡೆದ ಐದನೆಯ ಮೋರ್ಚೆ. ಕೊನೆಯ ಮೋರ್ಚೆಯೂ ಅದೆ. ಆ ವಾಳವೇ ತಾಲೂಕಿನ ಹನ್ನೆರಡುನೂರು ಜನ ಸೇರಿದ್ದಿತಲ್ಲಿ. ಡಿಸ್ಟ್ರಿಕ್ಟ ಸುಪರಿಂಟೆಂಡೆಂಟ ಆಫ್ ಪೋಲೀಸ ಸ್ವತಃ ಹಜರ ಇದ್ದ.

ಕಿರ್ಲೋಸ್ಕರವಾಡಿಯ ಇಂಜನಿಯರ ಶ್ರೀ. ಪಂಡ್ಯಾ ಎಂಬವ ಧ್ವಜ ಹಿಡಿದು ಮುಂದೆ ಸಾಗಿದ್ದ. ಹಾದಿಯಲ್ಲಿಯೇ ಗುಂಡಿನೇಟಿಗೆ ತುತ್ತಾಗಿ ಪ್ರಾಣಬಿಟ್ಟನಾತ! ಆನಂತರ ಶ್ರೀ ಬರಬಾಟೆಯ ಸರತಿ!

ಅಲ್ಲಿ ಚಿಕ್ಕ ಬಾಲಕರ ಮೇಲೆಯೂ ಗುಂಡಿನ ಪ್ರಯೋಗ! ಗುಂಡಿನೇಟಿಗೆ ಚಿಕ್ಕ ಮಗುವಿನ ಕಾಲು ಕಿತ್ತುವ ಪ್ರಸಂಗ ಬರಬೇಕೆಂದರೆ!

ಅತ್ಯಾಚಾರಕ್ಕೆ ಸೀಮೆಯಾದರೂ ಉಳಿಯಿತೆ?

ಆಯಿತು. ಅದೇ ಕೊನೆಯ ಮೋರ್ಚೆ!

ಅಂದಿನಿಂದ ಇಂದಿನವರೆಗೆ ಹಳ್ಳಿ ಹಳ್ಳಿಗಳೆಲ್ಲಡೆಗೂ ಪೋಲೀಸರ ಅತ್ಯಾಚಾರ. ಅಯ್ಯೋ! ಅದನ್ನೆಲ್ಲ ನೆನೆದರೆ ಮೈಮೇಲೆ ಮುಳ್ಳುಗಳೇಳುವವು.

§ § § §

ಏನಿದು ಚಮತ್ಕಾರ?

ಹದಿನೈದು ದಿನಗಳಲ್ಲಿಯೇ ಹಳ್ಳಿ ಹಳ್ಳಿಗಳಲ್ಲಿಯ ಗ್ರಾಮಸ್ಥರ ದಪ್ತರಗಳೆಲ್ಲ ತಾಲೂಕ ಕಚೇರಿಯನ್ನು ಸೇರಿದುವಲ್ಲ! ಪೋಸ್ಟ ಆಫೀಸುಗಳೂ ಮುಚ್ಚಿದುವು! ರೇಲ್ವೆ ಸ್ಟೇಶನಗಳಿಗೆ ಪೋಲೀಸರ ಕಾವಲು ಬಂತು!

ಪ್ರತಿ ಸರಕಾರದ ಪ್ರಭಾವವಿದು.

ಪ್ರತಿ ಸರಕಾರ ಸ್ಥಾಪಿತವಾದಾಗ ವಾದ್ಯ ಘೋಷವಾಗಲಿಲ್ಲ. ಹನ್ನೆರಡು ತೋಫಿನ ಸನ್ಮಾನವಾಗಲಿಲ್ಲ; ಯಾವ ರಗಳೆಯ ಜಾಹೀರನಾಮೆಯನ್ನೂ ಓದಲಿಲ್ಲ. ಈ ಎಲ್ಲ ಉಪಚಾರಗಳಾಗದಿದ್ದರೂ ಬ್ರಿಟಿಶರ ಕಡೆಗೆ ಸಮಾನಸ್ಕಂಧತೆಯಿಂದ ನೋಡುವ—ಅವರ ಅಸ್ತಿತ್ವಕ್ಕೆ ಆಹ್ವಾನವೀಯುವ—ಪ್ರತಿ ಸತ್ತೆಯೊಂದು ಸ್ಥಾಪಿತವಾಯಿತು.

ತರುಣರಲ್ಲಿ ಪ್ರತೀಕಾರ ಮಾಡಬೇಕೆಂಬ ಮನೋವೃತ್ತಿ ಬೆಳೆದುದೇ ಇದಕ್ಕೆ ಕಾರಣ. ಅತ್ಯಾಚಾರಕ್ಕೆ ವಿರೋಧಿಸದಿರುವುದು ಹೇಗೆ ಸಾಧ್ಯ?

✢ ✢ ✢ ✢

ನಿಜವಾಗಿಯೂ ಪೋಲೀಸರಿಗೆ ನಮ್ಮನ್ನು ಹಿಡಿಯುವುದಾಗುವದಿಲ್ಲ. ಆದರೆ ಅವರ ಮನಸ್ಸೆಲ್ಲ ನಮ್ಮ ಬೆನ್ನನ್ನೇ ಹತ್ತಿದೆ. ದೇಶದಲ್ಲಿ ಕೊಲೆ–ಸುಲಿಗೆಗಳಾದರೂ ಅತ್ತ ಅವರು ಲಕ್ಷ್ಯಹಾಕುವದಿಲ್ಲ. ತಿರುಗಿ ಎಷ್ಟೋ ಕಳವುಗಳಿಗೆ

ಅವರೇ ಸಹಾಯಕರಾಗುತ್ತಿರುವರು! ಬೇಲಿಯೇ ಎದ್ದು ಹೊಲ ಮೇಯು ತೊಡಗಿತು. ಹೀಗಿದ್ದೂ ಅದಕ್ಕೆ ಕೊಡುವ ಬಣ್ಣ ಬೇರೆ. ಬ್ರಿಟಿಷರ ಹಸ್ತಕ ರಲ್ಲವೇ ಅವರು? ಅವರ ಗುಣ ಇವರಿಗೂ. ತೀರಿಹೋಯಿತು.

"ಕಾರ್ಯಕರ್ತರು ಕಳವು ದರೋಡೆಗಳನ್ನು ಮಾಡುತ್ತಿದ್ದಾರೆ, ಗುಂಡರಾಗಿದ್ದಾರೆ."

ಎಂದು ಎಲ್ಲಿಡೆಗೂ ಸುದ್ದಿ ಪ್ರಚಾರ. ತಂದೆಯವರೇ ನನಗೆ ಹಂಗಿಸಿ ಹಂಗಿಸಿ ಕೇಳುವಂತಾಗಿದೆ. ಏನು ಹೇಳಲಿ ಅವರಿಗೆ? ಸತ್ಯ ಸಂಗತಿ ಅವರ ಮುಂದೆ ಹೇಳುವಂತಿಲ್ಲ.

ಹಳ್ಳಿಯ ಚಾವಡಿ, ರೇಲ್ವೆ ಸಿಲ್ದಾಣಗಳಲ್ಲೆಲ್ಲ ಪಟಗಳೇ ಪಟಗಳು.

"ಗುಂಡರನ್ನು ಹಿಡಿಯಲು ಸಹಾಯ ಮಾಡಿರಿ! ಸುಖವಾಗಿ ಬಾಳಿರಿ!"

ಎಂಥ ಪ್ರಚಾರದ ಜಾಹಿರಾತುಗಳಿವು! ಓದುಬಾರದವರಿಗೆ ಚಿತ್ರದ ಮುಖಾಂತರ ಪ್ರಚಾರ, ತಿಳವಳಿಕೆ.

ಗಾಂಧೀ ಟೊಪ್ಪಿಗೆ ಹಾಕಿ ಕನ್ನ ಕೊರೆಯುವವನ ಚಿತ್ರ!

ಒಂದೇ ಎರಡೇ ಸಾವಿರಾರು ಚಿತ್ರಪಟಗಳು ಪ್ರತಿಸರಕಾರದ ಅಪ ಪ್ರಚಾರಕ್ಕೆ ಬರೆಯಲ್ಪಟ್ಟವೆ! ಈ ಚಿತ್ರಪಟಗಳಿಗೆ ಮಾಡಿದಷ್ಟು ವೆಚ್ಚ ವನ್ನು—ವಹಿಸಿದಷ್ಟು ಆಸ್ಥೆಯನ್ನು—ಬ್ರಿಟಿಷ ಸರಕಾರವು ಬಂಗಾಲದ ಬರ ಗಾಲದಲ್ಲಿ ವಹಿಸಿದ್ದರೆ ದೇವರಾಣೆಗೂ ಅಲ್ಲಿ ಒಬ್ಬನೂ ಸಾಯುತ್ತಿರಲಿಲ್ಲ!

ಅಧಿಕಾರಿಗಳ ಕುತಂತ್ರವೇನೋ ಸಾಗಿದೆ. ದರೋಡೆಯಲ್ಲಿಯ ಪಾಲು ಪೋಲೀಸ ಇನಸ್ಪೆಕ್ಟರರ ಹಿತ್ತಲ ಬಾಗಿಲಿನಿಂದ—ಅದೇಕೆ ತಲೆಬಾಗಿಲಿನಿಂದ ಕೂಡ—ಅವರ ಮನೆ ಸೇರತೊಡಗಿತು. ಆದರೆ ಪ್ರತಿ ಸರಕಾರದ ಮೇಲೆ ಅಪವಾದ ಬರತೊಡಗಿತಲ್ಲ, ಅದನ್ನು ನಿವಾರಿಸುವುದೇ ನಮ್ಮ ಕರ್ತವ್ಯ.

\+ \+ ÷ \+

೧೯೪೩ರ ಸಪ್ಟಂಬರ ತಿಂಗಳೊಳಗಿನ ದಿನವದು! ನಾನಾ ಪಾಟೀಲನ ಎಂಭತ್ತು ವರ್ಷದ ತಾಯಿ ಕಾಲರಾದಿಂದ ತೀರ ಹಣ್ಣಾಗಿದ್ದಳು.

"ತಾಯಿಯ ಭೆಟ್ಟಿಗೆ ಬಾ."

ಎಂಬ ಕರೆಯು ಒಬ್ಬ ಕಾರ್ಯಕರ್ತರ ಕಡೆಯಿಂದ ಬಂದಿತು. ಸುತ್ತಲಿನ ಹಳ್ಳಿಗಳಲ್ಲೆಲ್ಲ ಪೋಲೀಸರ ಕಾವಲು! ತಾಯಿಯ ದರ್ಶನಕ್ಕೆ ನಾನಾ ಪಾಟೀಲ ಬರುವನೆಂಬುದು ಗೊತ್ತೇ ಇದ್ದಿತು.

ಮುದುಕಿ ಸತ್ತ ಸುದ್ದಿ ಎಲ್ಲೆಡೆಗೂ ಪಸರಿಸಿತು. ರಾತ್ರಿ ಹತ್ತು ಗಂಟೆಯ ವೇಳೆ; ವಸಂತನನ್ನು ಸಂಗಡ ಕರೆದುಕೊಂಡು ನಾನಾ ಮನೆಯನ್ನು ಸೇರಿದ. ಊರ ಹೊರಗೆ ಸಶಸ್ತ್ರ ಕಾರ್ಯಕರ್ತರನ್ನು ಇಟ್ಟಿದ್ದ.

ನಾನಾ ಮನೆಯನ್ನು ಸೇರಿದೊಡನೆ ಎಲ್ಲೆಡೆಗೂ ಗೊಂದಲ. ಪೋಲೀಸರಿಗೆ ಮನದಟ್ಟಾಯಿತು,·ನಾನಾ ಮನೆಗೆ ಬಂದನೆಂದು. ಕೂಡಲೆ ಅವರು ಮನೆಗೆ ಮುತ್ತಿಗೆ ಹಾಕಿದರು.

ರಾತ್ರಿಯ ಹನ್ನೆರಡು ಗಂಟೆಗೆ ಶವಸಂಸ್ಕಾರದ ಸಿದ್ಧತೆ ನಡೆಯಿತು. ಉರುವಲದ ಗಾಡಿ ಮುಂದೆ ಸಾಗಿತು. ತಟ್ಟೆ ಕಟ್ಟೆ ಸಿದ್ಧಗೊಳಿಸಲಾಗಿತ್ತು. ಐದು ನಿಮಿಷಗಳಲ್ಲಿಯೇ ಅದನ್ನೂ ಎತ್ತಿದರು. ಎರಡು ಮೈಲಿನ ಮೇಲೆ ಹರಿಯುತ್ತಿರುವ ಕೃಷ್ಣೆಯ ತೀರಕ್ಕೆ ಹೋಗಬೇಕದು. ಆ ಊರ ಪರಿಪಾಠವದು.

ಎಲ್ಲರನ್ನೂ ಚೆನ್ನಾಗಿ ನಿರೀಕ್ಷಿಸಿಯೇ ಪೋಲೀಸರು ಬಿಟ್ಟರು.

ಇನ್ನು ನಾನಾ ಪಾಟೀಲ ಮನೆಯಲ್ಲಿ ಉಳಿದಿರಲಿಕ್ಕೇ ಬೇಕು. ಈ ಕಲ್ಪನೆಯಿಂದ ಪೋಲೀಸರು ಮನೆ ಹೊಕ್ಕರು. ಹತ್ತು ಸಾವಿರ ರೂಪಾಯಿಗಳ ಬಹುಮಾನ ತನಗೇ ದೊರೆಯುವದೆಂದು ಪೋಲೀಸ ಇನಸ್ಪೆಕ್ಟರ ಉಬ್ಬಿದ! ಮನೆಯಲ್ಲಿ ಹೋಗಿ ನೋಡಿದಾಗ ಹೆಂಗಸರೂ ಹುಡುಗರೂ ಅಳುತ್ತಿದ್ದರು! ನಾನಾ ಪಾಟೀಲನ ಸುಳಿವೇ ಇರಲಿಲ್ಲ.

ಪೋಲೀಸರು ಮನೆಯನ್ನೆಲ್ಲ ಹುಡುಕಿದರು; ನಾನಾ ಸಿಕ್ಕಲಿಲ್ಲ. ಇಷ್ಟರಲ್ಲಿ ಪೋಲೀಸನೊಬ್ಬ ಓಡುತ್ತ ಬಂದ. ಗಾಬರಿಯಿಂದ ಇನಸ್ಪೆಕ್ಟರನಿಗೆ ಹೇಳಿದ.

“ ಮುನ್ನೂರು ಜನ ಸಶಸ್ತ್ರ ಕಾರ್ಯಕರ್ತರು ಊರ ಹೊರಗೆ ಬಂದಿರುವರು! ”

ಇನಸ್ಪೆಕ್ಟರ ನಡುಗಿದ. ಅತ್ತ ಓಡಿದ. ಪೋಲೀಸ ಪಾರ್ಟಿಗೂ ದೇಶಸೇವಕರಿಗೂ ಸಂಗ್ರಾಮ ಆರಂಭವಾಗಿದ್ದಿತು. ಮೂರು ತಾಸುಗಳವರೆಗೆ ಚಕಮಕಿ ನಡೆಯಿತಾಗ.

ಅಲ್ಲಿ ಶವದ ತಟ್ಟೆ ಬರುತ್ತಲೇ ಅದರ ಮೇಲಿಂದ ಯಾರೋ ಕೆಳಗೆ ಹಾರಿದರು.

ಅವನೇ ನಾನಾ ಪಾಟೀಲ! ಕ್ರಾಂತಿವೀರ ನಾನಾ!

ಉರುವಲ ಗಾಡಿಯೊಳಗಿನ ಬಂದೂಕು ಹಿರಿದುಕೊಂಡು ಓಡಿ ಬರುವ ವೀರನಾರವನು?

ವಸಂತ! ವಸಂತ!

ಅದೇ ಗಾಡಿಯಿಂದ ಕಳಿಸಿದ ಶವದ ಸಂಸ್ಕಾರ ನದಿಯ ಮೇಲೆ ಸಾಗುತ್ತಿದ್ದಿತು. ಬ್ರಿಟಿಷ ಸಾಮ್ರಾಜ್ಯದ ಹೋಳಿಯಂತೆ ಅದು ಉರಿಯುತಲಿದ್ದಿತು. ಅದರ ಕಾಮು ಸುತ್ತಲೂ ಪಸರಿಸುತಲಿದ್ದಿತು.

ಮರುದಿನದಿಂದ ಯುರೋಪಿಯನ್ನ ಸೇನೆ ಇವರನ್ನು ಶೋಧಿಸುತ್ತ ಸುತ್ತಲೂ ತಿರಗುತಲಿದ್ದಿತು. ಆಗ ವಸಂತ ನಮ್ಮ ಮನೆಯಲ್ಲಿ. ತಂದೆಯೋ ಆಗಾಗ ಕರೆದು ಈ ಸಂಗತಿ ನನಗೆ ಹೇಳುವರು. ಕೇಳಿ ನಗು ತಡೆಯಲಿಕ್ಕೆ ಆಗುತ್ತಿಲ್ಲ. ಅವರ ಮಾತಿನ ಉದ್ದೇಶ, ಭೀತಿಯ ಕಾರಣ ನನಗೆ ಗೊತ್ತು.

"ಕೋಣೆಯಲ್ಲಿ ವಸಂತ ಇದ್ದಾನೆ........"

ಎಂದು ಹೇಳಲೇ ಎಂದು ಮನಸ್ಸು ಹಾತೊರೆಯುವದು. ದುರ್ದಮನೀಯ ತಾರುಣ್ಯದ ಕಾವದು!

* * * *

ಆ ಯುರೋಪಿಯನ್ನ ಸೇನೆಯ ಸಂಗತಿ ಎಂಥ ವಿಚಿತ್ರವಾದುದು! ಗುಡ್ಡದ ಓರೆಯ ಗುಹೆಯೊಂದರಲ್ಲಿ ನಾನಾ ಪಾಟೀಲ ಇರುವನೆಂಬ ಸುದ್ದಿಯನ್ನು ಕೇಳಿದವರು ನೆಟ್ಟಗೆ ಅಲ್ಲಿ ಹೋಗಿ ಮುತ್ತಿದರು.

ಗುಹೆಯ ಬಾಗಿಲಿಗೊಂದು ದೊಡ್ಡ ಕಲ್ಲು. ಅದನ್ನು ಸರಿಸಿ ಒಳಗೆ ಸೇರಿದರು. ಇದೀಗ ಜನ ಓಡಾಡಿದ ಹೆಜ್ಜೆಯ ಕುರುಹುಗಳನ್ನು ಕಂಡರು. ಉತ್ಸಾಹದಿಂದ ಮೈಮರೆತು ಎಲ್ಲರೂ ಒಳಹೊಕ್ಕರು.

ಇಷ್ಟರಲ್ಲಿ ವಸಂತನಿಗೆ ಈ ಸುಳುಹು ಹತ್ತಿತು. ನಾನಾ ಅಲ್ಲಿರಲಿಲ್ಲ. ಇವನೇ ನೂರಾರು ಜನ ಕಾರ್ಯಕರ್ತರೊಡನೆ ಧಾವಿಸಿ ಬಂದ. ಬಂದವನೇ ಗುಹೆಯ ಬಾಗಿಲಿಗೆ ಹುಲ್ಲು ಒಟ್ಟಿಸಿ ಬೆಂಕಿ ಹಚ್ಚಿದ. ಹೊಗೆ ಗುಹೆಯನ್ನು ಸೇರಿತು. ಬಿಳಿ ಜನರ ಮುಖ ಕಪ್ಪಾಯಿತು. ಗಾಬರಿಗೊಂಡು ಹೊರಗೆ

ಬರಲು ಯತ್ನಿಸಿದರು. ಬಂದವರು ಕುಡಗೋಲಿಗೆ ತುತ್ತಾದರು. ಮಡಿದರು ದಕ್ಷಿಣ ಭಾಗದೊಳಗೆ ಸಾತಾರೆಯಲ್ಲಿದ್ದ ಬಳಿಯ ಸೈನ್ಯ ಸತ್ತುಹೋಯಿತು.. ಅವರ ಕೋವಿ ಗುಂಡುಗಳೆಲ್ಲ ಪ್ರತಿ ಸರಕಾರದ ಸ್ವಾಧೀನ ತಾನೆ?

‡ ‡ ‡ ‡

ಮೊನ್ನೆ ಅದೆಂತಹ ಕಠಿಣ ಪ್ರಸಂಗದಲ್ಲಿ ಸಿಕ್ಕಿದ್ದೆ!

ವಸಂತನೊಡನೆ ಒಂದು ದಿನ ಹೋಗಬೇಕಾಗಿದ್ದಿತು. ಆಗ ಸುಲೋಚನೆ ತವರು ಮನೆಯಲ್ಲಿ. ಅವಳ ಕಡೆಗೆ ಹೋಗುವೆನೆಂದು ತಂದೆಯವರಿಗೆ ಹೇಳಿ ಹೋಗಿಬಿಟ್ಟೆ. ಆ ಖಾನಾಪುರ—ನಲವಡಿ ನಡುವಿನ ಅದ್ಭುತ ಪ್ರಸಂಗವದು. ಸಂಗಡ ನಾನಾ ಇರದಿದ್ದರೆ ಅಂದು ನಾವು ಸೆರೆಮನೆಯನ್ನೇ ಕಾಣುತ್ತಿದ್ದೆವು.

ಅಲ್ಲಿ ಒಬ್ಬ ಹಳ್ಳಿಯ ಗೌಡನಿಗೆ ಎಚ್ಚರ ಕೊಡಬೇಕಾಗಿದ್ದಿತು. 'ಕಳ್ಳ ಸಂತೆ'ಯಿಂದ ಕೊಬ್ಬಿ ಜನತೆಗೆ ಕಷ್ಟ ಕೊಡುತ್ತಿದ್ದನಾತ. ಶೀಲ ಸೌಜನ್ಯಗಳನ್ನು ಮರೆತಿದ್ದ. ಅವನನ್ನು ಶಿಕ್ಷಿಸಲಿಕ್ಕೆ ಎಂಟು ಜನ ಕೂಡಿ ಹೊರಟಿದ್ದೆವು.

ಅದು ರಾತ್ರಿಯ ಪ್ರವಾಸ. ಅಲ್ಲಲ್ಲಿ ಪೋಲೀಸರ ಪಡೆ ಕಾವಲಿಗೆ ಇತ್ತು. ಹಗಲು ಅಡ್ಡಾಡುವುದು ಸಾಧ್ಯವಿರಲಿಲ್ಲ. ಕಾರ್ಯ ತೀರ ಅಗತ್ಯವಾದದ್ದು. ಪ್ರವಾಸದಲ್ಲಿ ಭುವನೇಶ್ವರಿಯ ಹತ್ತರ ಬೆಳಕಾಯಿತು. ಅದೊಂದು ದೇವಿಯ ಮಂದಿರ. ಅದು ಊರಿಂದ ಮೂರು ಮೈಲಿನ ಮೇಲೆ. ಅಲ್ಲಿ ಒಂದು ಹಗಲು ಕಳೆಯದೆ ಗತಿಯಿರಲಿಲ್ಲ. ಗುಡಿಯಲ್ಲಿ ಪೂಜಾರಿ ಒಬ್ಬನೇ ಇರುತ್ತಿದ್ದ. ಅವನೂ ಎಲ್ಲಿಯೋ ಹೋಗಿದ್ದ. ನಾವು ಗುಡಿಯ ಕೋಣೆಯೊಂದರಲ್ಲಿ ಹೋಗಿ ಮಲಗಿದೆವು. ದಣಿವಿನಿಂದ ಎಲ್ಲರಿಗೂ ನಿದ್ರೆ ಹತ್ತಿಬಿಟ್ಟಿತು. ಗಾಢ ನಿದ್ರೆಯಲ್ಲಿ ನಾವು.

ಪೂಜಾರಿ ಬಂದು ನೋಡಿದ. ನಾಲ್ಕಾರು ಗಡ್ಡದ ಜನ; ಮೂರು ನಾಲ್ಕು ಜನ ತರುಣರು ದಾಸಿಗೆಯಿಲ್ಲದೆ ನೆಲದ ಮೇಲೆಯೇ ಮಲಗಿದ್ದಾರೆ. ತಲೆದಿಸೆಯಲ್ಲಿ ಬರ್ಚಿ ಬಂದೂಕುಗಳಿವೆ. ಬೆಚ್ಚಿದ, ಬೇರೆ ವಿಚಾರವೇ ಸುಳಿಯಲಿಲ್ಲ ಅವನಿಗೆ. ಹಳ್ಳಿಗೆ ಓಡಿದ.

ಅರ್ಧ ತಾಸಿನಲ್ಲಿಯೇ ಹಳ್ಳಿಯ ತುಂಬೆಲ್ಲ ಸುದ್ದಿ.

“ಭುವನೇಶ್ವರಿಯ ಗುಡಿಯಲ್ಲಿ ದರೋಡೆಖೋರರು ಬಂದಿದ್ದಾರೆ! ಹತ್ತೆಂಟು ಜನರಿದ್ದಾರೆ! ಮಲಗಿದ್ದಾರೆ!”

ಜನ ಗುಂಪು ಗೂಡಿತು. ಗುಡಿಗೆ ಮುತ್ತಿಗೆ ಹಾಕಲು ನಡೆಯಿತು. ಕೈಯಲ್ಲಿ ಕುಡಗೋಲು ಬಡಿಗೆಗಳು, ಕೊಡಲಿ ಕೊಡತಿಗಳು, ಕತ್ತಿ ಕೋವಿಗಳು, ಊರಗೌಡ ದಳದ ಮುಖಂಡ.

ಖಾನಾಪುರ ಪೋಲೀಸ ಪಾರ್ಟಿಗೂ ವರದಿ ಹೋಯಿತು. !

ದರೋಡೆಖೋರರನ್ನು ಹಿಡಿದು ಕೊಡುವೆನೆಂಬ ಹುಮ್ಮಸ್ಸು ಗೌಡನಿಗೆ. ನಮ್ಮ ಸುದೈವ. ನಾಡಿನ ಭಾಗ್ಯ. ಇಷ್ಟರಲ್ಲಿಯೇ ವಸಂತನಿಗೆ ಎಚ್ಚರವಾಗಿದ್ದಿತು. ಗುಡಿಯ ಮುಂದಿನ ಕೆರೆಯಲ್ಲಿ ಮುಖ ತೊಳೆದುಕೊಳ್ಳಲು ಹೋಗಿದ್ದ. ಈ ಜನರ ಗುಂಪನ್ನು ಕಂಡ. ಬೆಚ್ಚಿದ, ಬೆರಗಾದ, ಓಡಿ ಒಳಗೆ ಬಂದ.

ಅಷ್ಟರಲ್ಲಿ ನಾನಾ ಎಚ್ಚತ್ತಿದ್ದ ಎಲ್ಲ ಸಂಗತಿ ಕೇಳಿದ. ಉಳಿದವರನ್ನೂ ಎಚ್ಚರಿಸಿದ. ಸ್ವಲ್ಪ ಹೊತ್ತು ಸ್ತಬ್ಧರಾಗಿದ್ದೆವು. ನನ್ನ ಹೃದಯವಂತೂ ಹಾರಹತ್ತಿತು. ಇಂಥ ದೊಡ್ಡ ಸಾಹಸದಲ್ಲಿ ಸೇರಿದುದು ನಾನು ಇದೇ ಮೊದಲು ಸಲ. ಇದಕ್ಕೆ ತಂದೆಯ ವಿರೋಧ ಬೇರೆ.

ವಸಂತ ಕೋವಿ ಎತ್ತುವದೆಂದು ನಿರ್ಧರಿಸಿ ಸಿದ್ಧತೆಗೆ ತೊಡಗಿದ.

ನಾನಾ ನಮ್ಮ ಜನರ ಮೇಲೆ ನಾವು ಕೈಯೆತ್ತುವುದು ಒಳಿತಲ್ಲ ಎಂದು ಭಾವಿಸಿದಂತಿತ್ತು. ವಿಚಾರ ಮಗ್ನನಾಗಿ ಕುಳಿತಿದ್ದ.

ಜನ ಬಲ ಗುಡಿಯನ್ನು ಸಮೀಪಿಸ ತೊಡಗಿತು. ಕಲಕಲಾಟ ಕೇಳ ಹತ್ತಿತು. ನಮ್ಮಲ್ಲಿ ಇನ್ನೂ ಯಾವ ನಿರ್ಧಾರವೂ ಇರಲಿಲ್ಲ. ಆದರೂ ಎಲ್ಲರೂ ಆಯುಧ ಹಿಡಿದು ಸಜ್ಜಾದೆವು.

ಮೊದಲು ನಾನಾ ಒಬ್ಬನೇ ಹೊರಗೆ ಹೋದ. ಸುತ್ತಲೂ ನಿರೀಕ್ಷಿಸಿದ. ಸೂರ್ಯ ಈಗಾಗಲೇ ಎರಡು ಮೊಳ ಮೇಲೇರಿದ್ದ. ಸ್ವಚ್ಛ ಬೆಳಕು. ಎದುರಿಗೆ ತಿಳಿಯಾದ ತಂಗೊಳ. ಪ್ರಶಾಂತವಾದ ಗುಡಿಯ ಸುತ್ತಲಿನ ವಾತಾವರಣ ಕ್ಷಣಕ್ಷಣಕ್ಕೂ ಭೀಕರವಾಗತೊಡಗಿತು. ಭುವನೇಶ್ವರಿಯು ರಕ್ತದ ಅಭಿಷೇಕ

ಬಯಸಿದಳೇನೋ ! ಗಂಭೀರವಾಗಿದ್ದಿತು, ವಾತಾವರಣ. ಹಕ್ಕಿಗಳ ಚಿಲಿಪಿಲಿಯೂ ನಿಂತು ಹೋಗಿದ್ದಿತು. ಆ ಕ್ಷಣ.

" ಜ್ಞಾನಬಾ ! ಜ್ಞಾನಬಾ ! "

ನಾನಾನ ಸ್ವರ ಗುಡಿಯ ಗೋಡೆಗೆ ಅಪ್ಪಳಿಸಿ ಪ್ರತಿಧ್ವನಿತವಾಯಿತು.

" ಜ್ಞಾನಬಾ ! "

ಯಾರು ? ಎಲ್ಲಿರುವ ನಮಗೆ ಹೊಳೆಯಲಿಲ್ಲ. ಒಬ್ಬರ ಮುಖವನ್ನೊಬ್ಬರು ಮಿಕಿ ಮಿಕಿ ನೋಡಿದೆವು.

ಗಡ್ಡವಿದ್ದುದರಿಂದ ನಾನಾನ ಮುಖ ಎಲ್ಲರಿಗೂ ಗುರುತು ಹತ್ತುವಂತಿರಲಿಲ್ಲ. ಜನರು ಗೊಂಬೆಗಳಂತೆ ನಿಂತಲ್ಲಿಯೇ ನಿಂತರು. ಗಲಾಟೆ ಕಡಿಮೆಯಾಯಿತು. ನಮಗೆ ಬೆರಗು, ಹೊರಗೆ ಬಂದು ನೋಡಿದೆವು.

ಆ ಗುಂಪಿನ ಮುಖಂಡ ಮುಂದೆ ಬಂದ. ನಾನಾ ಪಾಟೀಲನನ್ನು ನಿರೀಕ್ಷಿಸಿದ. ಗುರುತಿಸಿದ, ಹೆದರಿದನೇನೋ. ಓಡಿ ಬಂದು ಕಾಲಿಗೆ ಬಿದ್ದ. ನಾನಾ ಎತ್ತಿ ಅಪ್ಪಿದ.

ಊರ ಗೌಡನಾತ. ಜ್ಞಾನಬಾ ಆತನ ಹೆಸರು.

ಜ್ಞಾನಬಾ ಆದ ತಪ್ಪನ್ನು ಕ್ಷಮಿಸಲು ಕೇಳಿಕೊಂಡ. ಬರಲಿರುವ ಸಂಕಟವನ್ನು ಅರುಹಿದ. ನಾನಾ ನಕ್ಕು ನುಡಿದ.

" ದಿಕ್ಕು ತಪ್ಪಿಸಿದರಾಯಿತು. "

ಜನ ತಿರುಗಿ ಊರ ಕಡೆಗೆ ನಡೆಯಿತು. ತುಸು ದೂರ ಹೋಗಿರಬೇಕು. ಎದುರಿಗೆ ಪೋಲೀಸ ಪಾರ್ಟಿ ಬಂದಿತು. ಎಲ್ಲರೂ ಒಂದೇ ಕಂಠದಿಂದ ಉತ್ತರ ಕೊಟ್ಟರು.

" ನಾನಾ ಪಾಟೀಲನ ಗುಂಪು ಬಂದಿದ್ದಿತು. ಹಿಡಿಯಲು ಹೋಗಿದ್ದೆವು. ಗುಡ್ಡದ ಇಲಿಗಳವರು. ಓಡಿ ಹೋಗಿದ್ದರು. "

" ಯಾವ ಕಡೆಗೆ ಹೋದರು ? "

ಉತ್ಸುಕತೆಯಿಂದ ಕೇಳಿದನಂತೆ ಪೋಲೀಸ ಇನಸ್ಪೆಕ್ಟರ.

ಜನ ದಾರಿ ತೋರಿದರು. ಪೋಲೀಸ ಪಡೆ ಬೆದರಿತು. ಓಡಿತು. ನಾವು ಹೋಗಲಿರುವ ದಿಸೆಯ ವಿರೋಧ ದಿಸೆಯದು.

ಆ ದಿನದ ಮಧ್ಯಾಹ್ನದ ಊಟ ಗುಡಿಯಲ್ಲಿ ಸಿಸ್ತಿನಿಂದ ಸಾಗಿತು. ಜ್ಞಾನಬಾನ ಅತಿಥಿಗಳು ನಾವಂದು.

\+ + + +

ಇಂದು ಸುಲೋಚನೆಯ ಅತಿಥಿ ನಾನು. ಅವರ ಮನೆಗೆ ಹೋದು ದಕ್ಕೆ—ಅಕಸ್ಮಾತ್ ಹೋದುದುಕ್ಕೆ—ಅವಳಿಗೆ ಆಶ್ಚರ್ಯ ಹೋಗುವನೆಂಬ ಸಂಗತಿ ಕೇಳಿದಾಗ ನನ್ನ ತಂದೆಗೆ ಪರಮಾನಂದ.

ಸುಲೋಚನೆಯ ಹರ್ಷವನ್ನು ಕಂಡು ನನಗೆ ಸುಮ್ಮನಿರಲಾಗಲಿಲ್ಲ. ಏನೋ ಮೋಸ ಗೊಳಿಸುತ್ತಿರುವೆನೆನಿಸಿತು. ದೇಶದ ಕೆಲಸಕ್ಕೆ ಹೋಗಬೇಕಾಗಿದ್ದಿತು. ಅದಕ್ಕಾಗಿ ಬಂದಿದ್ದೆ. ಹಾಗೆಯೇ ಬಂದೆ. ಯಾರಿಗೂ ಹೇಳಬೇಡ ಎಂದು ನಮ್ಮ ಪ್ರತಿ ಸರಕಾರದ ಆಜ್ಞೆಯನ್ನು ವಿಧಿಸಿದೆ.

ಕಣ್ಣು ಮುಚ್ಚಿದರೆ ಕಣ್ಣೆದುರಿಗೆ ಆಗಿನ ಸುಲೋಚನೆಯ ಮೂರ್ತಿ ಇನ್ನೂ ಬಂದು ನಿಲ್ಲುವದು.

ಆ ಕೋಮಲ ಶಬ್ದಗಳು ನನ್ನ ಕಿವಿಯಲ್ಲಿ ಸುತ್ತುತ್ತಿವೆ.

ಸಾಯಂಕಾಲ ಪಕ್ಷಿ ಹೊರಗಿನಿಂದ ಬರಲು ಗೂಡಿನಲ್ಲಿದ್ದ ಮರಿಗಳು ಚಿಂವುಗುಡುವಂತೆ ಅವಳ ಮಾತಿನ ಧ್ವನಿಯಿತ್ತೆಂದು.

ನನಗೆ ಈ ಸ್ಥಿತಿಯನ್ನು ಕಂಡು ಬಹಳ ಕೆಡಕೆನಿಸುವದು. ಈ ವಯಸ್ಸಿಗೆ ಜೀವನದ ವಸಂತ ಋತುವೆಂದು ಕೆಲವರು ಹೇಳಬಹುದು. ಆದರೆ ನಾನಂತೂ ಹಾಗನ್ನಲು ಸಿದ್ಧನಿಲ್ಲ. ಜೀವನ ಗಂಗೆಯ ತಿಳಿನೀರು ಈ ವಯಸ್ಸಿನಲ್ಲಿ ಕಲಕಾಗುವವು. ಮೇಲಾಗಿ ದಿನಕ್ಕೊಂದು ತರದ ವ್ಯತ್ಯಾಸ.

ಒಂದು ದಿನ ನಿಶ್ಚಯಿಸಿ ಬಿಡುವೆ.

"ಇದೆಲ್ಲ ತಾರುಣ್ಯದ ಮೂರ್ಖತನವಿದೆ. ಸುಲೋಚನಾ—ಸುಮ್ಮಾ ಇಂತಹ ಯಾವ ವಿಚಾರವನ್ನೂ ಮನಸ್ಸಿನಲ್ಲಿ ತರತಕ್ಕದ್ದಲ್ಲ!"

ಪಕ್ಷಿ ತನ್ನ ತೊಯ್ದ ಪಕ್ಕ ಕೊಡಹಿಕೊಂಡು ಮೈ ಒಣಗಿಸಿಕೊಳ್ಳುವಂತೆ ಅಂದು ನನ್ನ ಮನಸ್ಸು ವಿಜಯದಿಂದ ಸಮಾಧಾನಗೊಳ್ಳುವುದು. ಆದರೆ ಮರುಕ್ಷಣದಲ್ಲಿ ಬಿರುಗಾಳಿ ಬೀಸುವುದು. ಎಲ್ಲಿಂದಲೋ ಕಸ ಕೊಳೆ ಬಂದು, ಬಗೆಗೊಳವನ್ನೆಲ್ಲ ತುಂಬಿ ಬಿಡುವದು.

ಈ ವಯಸ್ಸೊಂದು ಜೀವನದಲ್ಲಿಯ ಮಳೆಗಾಲವಿದ್ದಂತೆ. ಅದರಲ್ಲಿ ಎಂಥ ಭಯಂಕರ ಮೋಡಗಳು! ಅದೆಂತಹ ಗರ್ಜನೆ! ಇವುಗಳನ್ನೆಲ್ಲ ಹುಟ್ಟಿಸುವುದು ಪ್ರಣಯ, ಪ್ರೇಮ. ಪ್ರಣಯನಿರ್ಮಿತ ಸ್ವರ್ಗಲೋಕದಲ್ಲಿ ಕಲ್ಪನೆಯ ಕುದುರೆಯನ್ನೇರಿ ವಿಹರಿಸುತ್ತಿದ್ದಾಗಲೇ ಎಲ್ಲಿಂದಲೋ ನಾಡಿನ ಕ್ರಾಂತಿ–ಕಾಳಿ ಕೂಗಿ ಕರೆಯುವುದು. ಓಗೊಡುವೆ.

* * * *

ಮಾವನ ಮನೆಗೆ ಹೋಗಿ ಬಂದಾಗಿನಿಂದಲೂ ತಿರುತಿರುಗಿ ಅದೇ ವಿಚಾರ ನನ್ನ ತಲೆಯಲ್ಲಿ ಸುತ್ತುತ್ತಿದೆ. ನನಗೆ ನಿದ್ರೆ ಹತ್ತಿರುವದೆಂದು ಭಾವಿಸಿ ಅವರು ಹಾಗೆ ಮಾತಾಡಿರಬೇಕೆ?

ಛೇ! ನಾನು ಕೇಳಲೆಂದೇ ಮಾತಾಡಿರುವರು.

ತಾಯಿ ಮಗಳ ಮಾತುಗಳಿವು:

"ನನ್ನ ಸಲುವಾಗಿ ಯಾತಕ್ಕ ಬಂದಾರ ಬಿಡು........ಏನೋ ಬೇರೆ ಕೆಲಸಕ್ಕ ಬಂದಿದ್ದರಂತ........"

"ಇಲ್ಲ, ಗಂಡಸರಂದರ ಹಾಗೇ. ನಿನ್ನ ಕಡಗೇನೇ ಬಂದಿದ್ದರಂತ ಹೇಳತಾರೇನ ಹಾಗಾದರ?"

"ಅಲ್ಲ, ಅವ್ವ! ನನ್ನ ಸ್ಥಿತಿ ಹಾಗಿಲ್ಲ........"

"ಅಂದರೆ?"

"ನಾನಿಲ್ಲದಿದ್ದರೂ ಅಲ್ಲಿ ಒಬ್ಬ ಸೂಳಿ ಇದ್ದಾಳ!"

ಸುಲೋಚನೆಯ ಮಾತು ಸ್ವಲ್ಪ ಕಟುವಾಗಿದ್ದಿತು. ಸ್ವಲ್ಪ ಹೊತ್ತು ಮೌನ.

"ನನ್ನ ಸ್ಥಿತಿಯೊಂದು ಹೀಗಾದರೆ ನಿನ್ನ ಗತಿನೂ ಹಾಗೇ ಆಗಬೇಕೇ? ನಿಟ್ಟುಸಿರಿನೊಡನೆ ಬಂದ ಅತ್ತೆಯ ಮಾತಿದು.

ನನ್ನನ್ನೂ ಮಾವನಂತೆ ತಿಳಿದುಕೊಂಡರೇನೋ. ಅವನೊಬ್ಬ ಮಹಾರಾಯ ಹೊರಗೆ ಹೆಣ್ಣೊಂದಿಟ್ಟಿದ್ದಾನೆ. ಮನೆಯಲ್ಲಿ ಸುಖವಿಲ್ಲ. ಸುಖಕ್ಕೇನು ಕೊರತೆಯಿದೆ? ಆದರೆ ಸೂಳೆಯೊಬ್ಬಳನ್ನು ಇಡುವುದು ಇನಾಮದಾರಿಕೆಯ ಲಕ್ಷಣವಂತೆ. ದೊಡ್ಡಿಸ್ತನವಂತೆ. ಹುಚ್ಚು ತಿಳವಳಿಕೆ ಅವರದು.

" ಏನ ಮಾಡೋದು ನನ್ನ ಹಣೆಬರಹ? "
ಮಗಳ ನಿರಾಶೆಯನ್ನು ಕಂಡು ತಾಯಿ ಹೇಳುವ ಸಮಾಧಾನವಿದು:

" ದೊಡ್ಡವರ ಮನೆತನದೊಳಗ ಹೀಗಿರೋದೇ, ಗಂಡಸರಿಗೆ ನಾವ ಬೇಡೆಂದರೆ ಬಗೆಹರಿತದ? ಹೊರಗೆ ಹನ್ನೆರಡ ಹೆಂಗಸರ ಕೂಡ ಇರವಲ್ಲ, ಮನೆಯೊಳಗ ನಿನ್ನ ಕೂಡ ಚಲೋ ಇರತಾನಿಲ್ಲೊ ? "

ಏನಿದು ನನ್ನ ಮೇಲಿನ ಆರೋಪ? ಎದೆ ಬಿಚ್ಚಿ ತೋರುವದೊಂದೇ ಉಳಿಯಿತು, ಸುಲೋಚನೆಗೆ. ನನ್ನ ಮೇಲೆ ಇನ್ನೂ ಸಂಶಯ. ನನ್ನ ನಡತೆ ಶೀಳಿಯಾಗಿರಲೆಂದು ಎಷ್ಟು ಯತ್ನಿಸುವೆ? ತಪ್ಪಿ ಮಾತಿನಲ್ಲಿ ಸುಮಿತ್ರೆಯ ಹೆಸರೂ ಬಾರದಂತೆ ಎಚ್ಚರದಿಂದಿರುವೆ. ಸುಲೋಚನೆಯ ಕೂಡ ಸಮರಸನಾಗಿರುವೆ.

ನನ್ನ ಆಚರಣೆ ಶುದ್ಧವಾಗಿದೆ. ಮೊದಲಿನಿಂದಲೂ ಶುದ್ಧವಾಗಿದೆ. ಸುಮಿತ್ರೆಯ ಬಗ್ಗೆ ನನ್ನಲ್ಲಿ ಬಂದ ಆಕರ್ಷಣೆ ಆಗ ಇದ್ದುದೇನೋ ನಿಜ. ಆದರೆ ಈಗ ಅದೂ ಇಲ್ಲ. ಒಮ್ಮೊಮ್ಮೆ ನನ್ನ ದೇಶಕಾರ್ಯದಲ್ಲಿ ಅವಳ ನೆರವನ್ನು ಪಡೆಯುವೆನಿಷ್ಟೇ. ಅದೂ ಸುಲೋಚನೆ ಎಲ್ಲ ಸಂಗತಿಯನ್ನೂ ತಂದೆಯ ಎದುರಿಗೆ ಹೇಳುವಳೆಂದು.

ಸುಖದಲ್ಲಿ ಬೆಳೆದ ಸುಲೋಚನೆಗೆ ಧೈರ್ಯವಿಲ್ಲ. ಅದು ಸುಮಿತ್ರೆಯಲ್ಲಿ ಇದೆ. ಅವಳು ದೇಶಕ್ಕಾಗಿ ತನ್ನ ಬಲಿಯನ್ನು ನೀಡಲೂ ಸಿದ್ಧ.

ಸುಲೋಚನೆ ಹಾಗಲ್ಲ.

ಅಂದರೆ ಸುಲೋಚನೆಯ ಮೇಲೆ ನನ್ನ ಅನುರಾಗವಿಲ್ಲಂತಲ್ಲ!

‡ ‡ ‡ ‡

ಏನು ಬರೆಯಲಿ? ಆ ಪ್ರಸಂಗ ನೆನಪಾದೊಡನೆ ಇನ್ನೂ ಮೈ ಮೇಲೆ ರೋಮಾಂಚನಗಳೇಳುತ್ತವೆ.

ಅಂದು ಮಧ್ಯಾಹ್ನ. ಕಾರ್ಯಕರ್ತರ ಮೀಟಿಂಗಿಗೆಂದು ಹೊರಟಿದ್ದೆ. ಅದು ಪ್ರತಿಸರಕಾರದ ಮೂರನೆಯ ಮೀಟಿಂಗು. ತಂದೆಗೆ ಹೇಳಿದ್ದೆ ಸಾಂಗ್ಲಿಗೆ ಕ್ರಿಕೆಟ ಮ್ಯಾಚ್ ಇದೆ. ಹೋಗುವೆ ಎಂದು. ಅದೇನೋ ಒಪ್ಪಿಬಿಟ್ಟರು. ಮೂರರ ಗಾಡಿಗೇನೇ ಹೊರಟು ನಿಂತೆ. ಸುಲೋಚನೆಗೆ ಸಂಶಯ ಬರದಿರಲಿಲ್ಲ.

" ನೀವು ಎಲ್ಲಿ ಹೋಗುತ್ತೀರಿ ನನಗೆ ಗೊತ್ತು. "

ಗೋಣು ಕೊಂಕಿಸಿ ನುಡಿದಳು.

“ನಿನಗೆ ಗೊತ್ತಿಲ್ಲದ್ದನ್ನು ನಾನಾವುದನ್ನೂ ಮಾಡುವದಿಲ್ಲ.”

“ಎಲ್ಲ ಗೊತ್ತಿದೆ. ಈ ಬಣ್ಣದ ಮಾತುಗಳು!”

ಅಸಹ್ಯ ವೇದನೆ ಅವಳ ಮುಖದಲ್ಲಿ ಒಡಮೂಡಿತು. ಆಗ ನನ್ನ ಹೃದಯದಲ್ಲಿ ಕತ್ತಿಯಿಂದ ಇರಿದಂತಾಯಿತು.

“ಇಲ್ಲ, ಸುಲೋಚನಾ, ನನ್ನಲ್ಲಿ ಅಂಥದೇನೂ ಇಲ್ಲ.”

“ಇಲ್ಲದಿದ್ದರೆ ಒಳ್ಳೇದಾಯಿತು.”

ಎಂದು ಬಿಗುಹಿನಿಂದಲೇ ನುಡಿದು ಒಳಗೆ ಹೋದಳು. ನನ್ನ ಉತ್ಸಾಹ ಅರ್ಧ ಇಳಿಯಿತು. ಸುಮಿತ್ರೆ ನನಗೊಬ್ಬ ತಂಗಿ ಇದ್ದಂತೆ ಎಂದು ತಿಳಿದು ನಡೆದರೂ ಈ ಸುಲೋಚನೆಯಲ್ಲಿಯ ಭೂತ ಹೋಗದಲ್ಲ ಎಂದು ಯೋಚಿಸುತ್ತಲೇ ಹೋಗಿಬಿಟ್ಟೆ.

ಅಂದು ನಿಲ್ದಾಣದಲ್ಲಿ ಜನಸಂದಣಿ ಬಹಳವಿತ್ತು. ಏನೋ ಪಂಢರಪುರದ ಯಾತ್ರೆ ಬೇರೆ ಇತ್ತು. ಕೇಳುವದೇನು? ತಿಕೀಟಿಗೆ ಸಾಲಾಗಿ ನಿಲ್ಲುವ ಪ್ರಸಂಗ ಬಂತು. ನಾನು ನಿಲ್ಲಲಿಲ್ಲ. ಬೇರೊಬ್ಬರನ್ನು ನಿಲ್ಲಿಸಿದ್ದೆ. ನಾನು ಬೇರೆಡೆಗೆ ಕುಳಿತಿದ್ದೆ.

ಒಬ್ಬ ಮುದುಕ, ಹಳ್ಳಿಯ ಮುದುಕ. ತಿಕೀಟು ಕೊಳ್ಳಲು ಅವಸರದಿಂದ ಬಂದ. ಜನರ ಸಾಲು ಬಹಳ ಉದ್ದವಿದ್ದಿತು. ತಿಕೀಟು ಪಡೆಯುವಷ್ಟರಲ್ಲಿ ರೇಲು ಬಿಡುವದೇನೋ ಎಂಬ ಹೆದರಿಕೆ ಮುಖದಲ್ಲಿ. ಬಾಡಿ ಬತ್ತಿದ ಮುಖ. ಕೈಯಲ್ಲೊಂದು ಚಿಕ್ಕ ದೋತರ ಗಂಟು. ಗುರುತಿನವರಾರಾದರೂ ಮುಂದೆ ನಿಂತಿರುವರೇನೋ ನೋಡಬೇಕೆಂದು ಸಾಲು ಬಿಟ್ಟು ಮುಂದೆ ಬಂದ ಅತ್ತಿತ್ತ ನೋಡುತ್ತಿದ್ದ.

ಪೋಲೀಸ ಹಿಂದೆ ನೂಕಿದ. ಸಾಲಿನಲ್ಲಿ ಹಿಂದೆ ನಿಲ್ಲು ಎಂದು ಬೆದರಿಸಿದ. ಆದರೂ ಮುದುಕನ ಕಣ್ಣುಗಳು ಇನ್ನೂ ಸಾಲಿನಲ್ಲಿಯ ಜನರ ಮುಖವನ್ನು ನಿರುಕಿಸುವುದರಲ್ಲಿಯೇ ಇದ್ದುವು.

ಪೋಲೀಸನಿಗೆ ಇದು ಸಹನವಾಗಲಿಲ್ಲವೇನೊ! ಅಪಮಾನವಾದಂತಾಯಿತು. ಬ್ರಿಟಿಷ ಸರಕಾರದ ಅಳಿಯನ ಮಾತನ್ನು ಹಳ್ಳಿಯ ಮುದುಕ ಕೇಳದಿರುವದೆಂದರೇನು? ಕೂಡಲೆ ಮುದುಕನ ಮೈಮೇಲೆ ಏರಿ ಹೋದ. ಪೋಲೀಸ ಗದರಿಸಿದ.

" ಏನು ಹೇಳಿದೆ, ಕೇಳಲಿಲ್ಲೇನೊ ? "

ಆ ಮುದುಕನಿಗೆ ಮನೆಯಲ್ಲಿ ಆ ಪೋಲೀಸನ ಸರಿ ವಯಸ್ಸಿನ ಮೊಮ್ಮಕ್ಕಳಿರಬೇಕು. ಮುದುಕ ನಿರುಪಾಯನಾಗಿ ಹಿಂದಕ್ಕೆ ಹೋಗುತ್ತಿದ್ದ. ಪೋಲೀಸನ ಮನಸ್ಸಿನಲ್ಲಿ ಏನು ಬಂತೋ ಏನೋ ಕೂಡಲೆ ಕರೆದ.

" ಇಲ್ಲಿ ಬಾರೋ ಮುದುಕಾ. "

ದನಿ ತುಚ್ಛತೆಯಿಂದ ಕೂಡಿದ್ದಿತು. ಮುದುಕ ತಿರುಗಿ ನಿಂತ.

" ಕೈಯೊಳಗಿನ ಗಂಟಿನಲ್ಲಿ ಏನಿದೆಯೋ ? "

ಬೆದರಿಸಿದ ಪೋಲೀಸ. ಮುದುಕ ನಡುಗಿದ. ಅವನ ಮುಖ ಕಳೆಗುಂದಿತು. ಪೋಲೀಸ ಅಬ್ಬರದಿಂದ ಹೋಗಿ ಗಂಟು ಬಿಚ್ಚಿದ. ನಾಲ್ಕು ಕಿತ್ತಳೆ ಹಣ್ಣು. ಒಂದು ಸೇರು ಸಣ್ಣಕ್ಕಿ ! ಕೇಳುವದೇನು ಪೋಲೀಸನು ಬಾಯಿ ಬಿಟ್ಟನು.

" ಸೂ........ಮಗನ ತಂದ. ಅಕ್ಕಿ ಒಯ್ಯತ ನ ಅಕ್ಕಿ ? ಮುಂದ ಮುಂದ ಹೋಗಿ ತಿಕೀಟ ತಗಿಯಲಿಕ್ಕೆ ಅದಕ್ಕೇ ಓಡತಿದ್ದಿ ಅಹುದೋ ? ನಡೆ ಪೋಲೀಸ ಠಾಣೆಗೆ."

ಪೋಲೀಸು ಮುದುಕನ ಕುತ್ತಿಗೆಗೆ ಕೈಹಾಕಿದ.

" ಏನ ಬಹಳ ಇಲ್ಲ. ಸೆರೆಮುಕ್ಕ ಅವ. ಮನೆಯಲ್ಲಿ ಮಗಳ ಹಡೆದು ಅಕ್ಕಿ ಕಾಣದ ಬೇನೆ ಬಿದ್ದಾಳರಿ. ಡಾಕ್ಟರ ಹಾಕ ಅಂದರು. ನಿನ್ನಿಂದೂ ಇಲ್ಲಿ ಬಂದು ನಿಂತು ಗುರುತಿನವರ ಹತ್ತರ ಕೇಳಕೊಂಡ ಇಷ್ಟ ಸಂಪಾದಿಸಿ ದೇನ. ಮಾರಲಿಕ್ಕೆ ಅಲ್ಲ ದೇವರು. "

ಎಂದು ಅಂಗಲಾಚಿದ ಮುದಕಪ್ಪ.

" ಇರಲಿ ನಡಿ. ರಾವಸಾಹೇಬರಿಗೆ ಹೇಳು, ತಗೊಂಡು ಹೋಗು. "

ಮುದುಕ ಏನೋ ಹೇಳಲು ಬಾಯಿತೆಗೆದ.

" ಇಲ್ಲೇನ ಬೇಡ; ಏನ ಹೇಳೋದ ಅಲ್ಲೇ ಹೇಳ ನಡೆ. "

ಪೋಲೀಸನ ಧ್ವನಿಯ ಅರ್ಥ ನನಗಾಯಿತು. ಪಾಪ ಹಳ್ಳಿಯ ಮುದಕನಿಗೆ ಏನು ಗೊತ್ತಾಗಬೇಕು ? ಪೋಲೀಸನಿಗೆ ಚಹ ಬೇಕಾಗಿತ್ತು. ಮುದುಕ ಮತ್ತೂ ತನ್ನ ಮನೆಯ ಸುದ್ದಿಯನ್ನೇ ಹೇಳತೊಡಗಿದ. ಪೋಲೀಸ ಕೆರಳಿದ.

"ಹೆಚ್ಚು ಮಾತನಾಡಬೇಡ. ಹಲ್ಲ ಮುರದ ಕೈಯೊಳಗ ಕೊಟ್ಟೇನು. ಪೋಲೀಸ ಠಾಣೆಗೆ ನಡೆ ಅಂದರೆ ಇಲ್ಲೇ ಪಗಟಂಗ ಹಚ್ಚಿದಾನ ಲಫಂಗ? ನಿನ್ನ ಮಗಳ ಸತ್ತರ ನನಗೇನ ಮಾಡಂತಿ? ಅಕ್ಕಿ ಸಿಕ್ಕಲಿಲ್ಲ. ಹಳ್ಳಿಯೊಳಗ ಜೋಳ ನುಚ್ಚ ಕಾಯ್ಸಿ ಹಾಕಿದ್ಯ, ಅಂತ ಹೇಳಿದರ ನಾನೇನ ಮಾಡಲಿ? ಸುಮ್ನ ಮುಂದ ಮಾತಾಡದ ನಡೆ. ಇಂಗ್ಲೀಷ ಸರಕಾರ ಕಾಯದೆ ಅದ ತಿಳೀತ?"

"ಅಪ್ಪಾ, ನೀನೇನ ಇಂಗ್ಲಂಡದಿಂದ ಹಾರಿ ಬಂದವ ಅಲ್ಲ. ನೀ ಸತ್ತಾಗೇನ ಇಂಗ್ಲೀಷರೇ ಹೊರಲಿಕ್ಕೆ ಬರುವದಿಲ್ಲ. ನಾವೇ ಬೇಕ. ಯಾಕ ಅಡ್ಡ ತಿಡ್ಡ ಮಾತಾಡತಿದಿ? ನೀನೂ ತಿನ್ನೋಗ ಅಕ್ಕಿ ಒಯ್ದು ಬೇಕಾದರ...."

ಎಂದು ಪದರಿನೊಳಗಿನ ಅಕ್ಕಿ ನೆಲಕ್ಕೆ ಸುರಿದು, ಧೋತರ ಜಾಡಿಸಿ ಕೊಳ್ಳುತ್ತ ಎದ್ದ ಮುದುಕ. ಹಣೆಗಣ್ಣಾಗಿದ್ದನಾತ.

"ನೀ ತುರಂಗ ಕಾಣೋದಲ್ಲದ ನನ್ನನ್ನೂ ಕಾಣಿಸಬೇಕನ್ನುವಿ ಹೌದ?"

ಈ ಪ್ರಸಂಗದಲ್ಲಿ ನಾನು ಬಾಯಿ ಹಾಕುತ್ತ ಕೂಡುವಂತಿರಲಿಲ್ಲ. ಅಷ್ಟರಲ್ಲಿ ಉಗಿಬಂಡಿಯೂ ಬಂತು. ಹೊರಟುಬಿಟ್ಟೆ. ಗಾಡಿ ಬಿಡುವವರೆಗೂ ನಿಲ್ಲಟ್ಟಿಯ ಕಡೆಗೆ ನೋಡುತ್ತಿದ್ದೆ. ಆ ಮುದುಕ ಬಂದಂತೆ ಕಾಣಲಿಲ್ಲ.

ಮುಂದಿನ ನಿಲ್ದಾಣದಲ್ಲಿ ಕರಳು ಕರಗುವಂತಹ ಮಾತುಗಳು ಕಿವಿಗೆ ಬಿದ್ದುವು. ಗಾಡಿಯಲ್ಲಿ ಜನ ಏರಿಳಿಯುವ ಗೊಂದಲವನ್ನು ಸೀಳಿ ಬಂದ ಮಾತುಗಳಿವು.

"ನಿನ್ನೆ ಹೋಗಿದಾನ ಮುದುಕ. ಮಗಳಿಗೆ ಅಕ್ಕಿ ಹಣ್ಣ ತರತೇನಂತ. ಇಂದ ಮುಂಜಾನೆ ಅಂದರ ಇತ್ತ ಈಕೆ ತೀರಿಕೊಂಡಳು. ಈ ಗಾಡಿಗಾದರೂ ಬರತಾನೇನ ನೋಡತೇನ."

"ಹುಡುಗಿಗೆ ಹಡದ ಬೇನೆ ಕಾಣ್ತದ."

"ಹಡೆದ ಬೇನೆ ಅಲ್ಲ. ಅನ್ನ ಇಲ್ಲದ ಬೇನೆ."

ಅದೇ ಮೀಟಿಂಗಿನಲ್ಲಿ ಕಳ್ಳಪೇಟೆಯನ್ನು ನಿರ್ಮೂಲನ ಮಾಡುವ ಬಗ್ಗೆ ಠರಾವುತಂದೆ. ಸರಕಾರವೇ ಕುಳಿತು ಕಳ್ಳವ್ಯಾಪಾರ ಮಾಡತೊಡಗಲು ಜನ ಏನು ಮಾಡಬೇಕು?

ಭಾರತದಲ್ಲಿ ಅನ್ನದ ಕೊರತೆ ಏಕೆ? ಸೈನ್ಯದ ಕೂಡ ಇದ್ದ ಇವರ ಸಂಬಂಧವನ್ನೇ ತಪ್ಪಿಸಿಬಿಟ್ಟರಾಯಿತು. ನಾಳಿನಿಂದ ಪ್ರತಿ ಸರಕಾರವು ಆಕ್ರ-ಮಕ ಕಾರ್ಯಕ್ರಮವನ್ನು ಭರದಿಂದ ಸಾಗಿಸಬೇಕು.

§ § § §

" ಯಾರೋ, ಖಂಡು ಏನು ? "

ಸುಬ್ಬರಾವ ಓದುವದನ್ನು ತಡೆದು ಕೇಳಿದ.

" ಹೌದ ರಾವಸಾಬ.... "

" ಏಕೋ, ಏನ ಕೆಲಸವಿತ್ತು ? "

ತುಂಬ ಬೇಸರದ ದನಿಯಿಂದ ಕೇಳಿದ ಸುಬ್ಬರಾವ.

" ಯಾಕಿಲ್ಲ. ಸಹಜ ಬಂದಿದ್ದೆ. ಮಧ್ಯಾಹ್ನದಲ್ಲಿ ಎಲ್ಲಿ ಕಾಣಲಿಲ್ಲ. ಸಣ್ಣ ರಾವಸಾಬರೂ ಇಲ್ಲ. ಭಣ ಭಣ ಅನ್ನಲಿಕ್ಕೆ ಹತ್ತೇದ ಮನೆ. ನೀವೂ ಅಷ್ಟ ಒಳಗೇ........"

ಆಳಿನ ಮಾತನ್ನು ನಡುವೆಯೇ ತಡೆದು ಸುಬ್ಬರಾವ ಕೇಳಿದ.

" ನಿನ್ನ ಮುಂದ ಏನಾದರೂ ಬಾಬಾಸಾಹೇಬ ಹೇಳತಿದ್ದನೇನೋ ?

" ಏನಂತರಿ ? "

ಅತ್ಯಂತ ಹೆದರಿಕೆಯ ಸ್ವರದಲ್ಲಿತ್ತು ಖಂಡುವಿನ ಮಾತು.

ಸುಬ್ಬರಾವ ಮೌನ ತಾಳಿದ. ಒಮ್ಮೆ ಒಳಗೆ ಕರೆದು ಕೇಳಬೇಕೆಂದೆಣಿಸಿತು. ಆದರೆ ಅದೇಕೋ ಮನಸ್ಸು ಆಗಲಿಲ್ಲ. ಆದರೂ ಕೇಳಿದ.

" ಮುಂಜಾನೆ ಹೋದವ ಬಾಬು ಇನ್ನೂ ಬರಲಿಲ್ಲವಲ್ಲ ? "

" ಅದೇ ಅನ್ನುವೆ ನಾನೂ...."

ಸ್ವರ ಸ್ವಲ್ಪ ನಟನೆಯದಾಗಿತ್ತು, ಈ ಸಲ.

" ಏನೋ ಅವನ ಮಲಕಿನ ಆಟ ತಿಳಿಯುವದಿಲ್ಲ ! "

" ಈ ಕಲಿತ ಜನ ಹೀಗೇ. "

" ನಮ್ಮ ಬಾಬು ಹಾಗಲ್ಲೋ...."

" ಆದರ....ಚಳವಳಿಯವರೊಬ್ಬರ ದೂರ ಇರಬೇಕಲ್ಲರೀ. ಇವರ ಸ್ವತಃ ಯಾವದಕ್ಕ ಮುಂದ ಹೋಗವರಲ್ಲ. "

" ಏನ ತಿಳಿಯುದಿಲ್ಲ ನೋಡ ಖಂಡು. ನಮ್ಮ ಮಕ್ಕಳ ನಮ್ಮಂತ ಇದ್ದಾರಂತ ಏನ ಹೇಳಲಿಕ್ಕೆ ಬರುವದಿಲ್ಲ. "

" ಹೇಗಾದರೆ ಇರಲಿ. ಮನೆಗೆ ಬರಲಿ ಅಂತೇನ ನಾ...."

" ಹೌದಪ್ಪ....ಇಲ್ಲಾದರ ಎಲ್ಲಾನೂ.... "

ಸುಬ್ಬರಾವನ ದನಿ ಜಗ್ಗಿ ಬಂತು. ಖಂಡುವೂ ಅಲ್ಲಿ ನಿಲ್ಲದೆ ಈಗಾಗಲೇ ಹೋಗಿ ಬಿಟ್ಟಿದ್ದ. ಸುಬ್ಬರಾವ ಒಳಗಿದ್ದಾನೆಂಬುದನ್ನು ಕಂಡುಕೊಂಡಿದ್ದ. ಅದಷ್ಟೇ ಅವನಿಗೆ ಬೇಕಾದುದು.

ಸುಬ್ಬರಾವ ಮುಂದೆ ಓದತೊಡಗಿದ.

× × × +

" ನನಗೆ ಎರಡೇ ಕಣ್ಣುಗಳಿವೆ. ನಾನೇನು ಹೇಳಲಿ ? ಪೋಲೀಸರಿಗೆ ಸಾವಿರ ಕಣ್ಣುಗಳು. "

ಗಣಪತಿ ಪಾಟೀಲ ಪೋಲೀಸ ಅಧಿಕಾರಿಗಳಿಗೆ ಕೊಟ್ಟ ಉತ್ತರವಿದು.

ಪಾಂಡು ಮಾಸ್ತರರ ವಿಷಯ ಕೇಳಿದರೆ—ಬೇಸರ ಬರುವಂತೆ ಒಂದೇ ಸವನೆ ಕೇಳಹತ್ತಿದರೆ—ಯಾವ ಕಾರ್ಯಕರ್ತನೂ ಕೊಡುವ ಉತ್ತರ ಇಂಥದೇ. ಅದಕ್ಕೆ ಪೋಲೀಸ ಅಧಿಕಾರಿ ಅಲ್ಲಿಯೇ ಗುಂಡು ಹಾಕಿ ಗಣಪತಿಯನ್ನು ಕೊಲ್ಲಬೇಕೆ? ಎಂಥ ಅನ್ಯಾಯವಿದು ! ಮೇಲೆ ಪಂಚನಾಮೆಯ ಬಣ್ಣ ಬೇರೇಯೇ. ಪಾಂಡು ಮಾಸ್ತರರ ಪಥಕಕ್ಕೂ ಪೋಲೀಸರಿಗೂ ಎದುರೆದುರು ಹೋರಾಟ ನಡೆದು, ಅದರಲ್ಲಿ ಗಣಪತಿ ಗುಂಡು ತಗಲಿ ಮಡಿದನಂತೆ!

ಪೋಲೀಸರ ತಾಳ್ಮೆಗೆಟ್ಟ ನಡತೆಗೆ ಈ ಬಣ್ಣ, ಬಣ್ಣನೆ. ದುಶೇರೆ ಊರಿನ ಜಾನು ಜಾಧವನ ಗತಿಯೂ ಹೀಗೆಯೇ ಆದುದು. ಆದರೆ ಔಂಥ ಸಂಸ್ಥಾನ ಸುಮ್ಮನಿರಲಿಲ್ಲ. ಆ ಪ್ರಕರಣದ ವಿಚಾರಣೆ ನಿಷ್ಪಕ್ಷಪಾತದಿಂದ ನಡೆಯಬೇಕೆಂದು ಕೇಳಿಕೊಂಡಿತು. ಅವರ ಸಂಸ್ಥಾನದ ಮನುಷ್ಯನಾತ.

ವಿಚಾರಣೆಯಲ್ಲಿ ಗೋಳೀಬಾರ ಅನವಶ್ಯಕವಾಗಿತ್ತೆಂದು ಕಂಡು ಬಂತು. ಪೋಲೀಸಪಾರ್ಟಿ ಬಂತೆಂದು ಓಡುವವರ ಮೇಲೆ ಗುಂಡು ಹಾಕುವದೆಂದರೆ! ಇದೊಂದು ನರಬೇಟೆಯಲ್ಲವೆ ? ಹಿಂದಿನಿಂದ ಜಾನು ಜಾಧವನ ಹೆಂಡತಿಗೆ ಎರಡು ಸಾವಿರ ರೂಪಾಯಿಗಳನ್ನು ತೆತ್ತು ಹಾನಿಯನ್ನು ತುಂಬಿತು ಸರಕಾರ. ಆದರೆ ?

ಈ ಪ್ರಕರಣ ನಡೆಯಲು ಕಾರಣವಾದ ಅಧಿಕಾರಿಗೆ ಏನಾದರೂ ಶಿಕ್ಷೆ ವಿಧಿಸಿತೇ ಸರಕಾರ? ಇಲ್ಲ. ಅಂದಮೇಲೆ ಪ್ರತಿ ಸರಕಾರ ಆ ಕಾರ್ಯವನ್ನು ಸಾಧಿಸಬೇಡವೆ? ಅಪರಾಧಿಗೆ ಶಿಕ್ಷೆಯಾಗದೆ ಹೋಗಬೇಕೆ?

ಎಂದಿಗೂ ಹೋಗಗೊಡಲಿಕ್ಕಿಲ್ಲ ಪ್ರತಿ ಸರಕಾರ.

\+ \+ \+ \+

ಇಂದು ಮಧ್ಯಾಹ್ನ ನಾನು ಹೊರಗಿನಿಂದ ಬರುವಷ್ಟರಲ್ಲಿ ತಂದೆ ಸರಕಾರಿ ಸಮಾಚಾರ ಪತ್ರಿಕೆಯನ್ನು ಕೈಯಲ್ಲಿ ಹಿಡಿದುಕೊಂಡೇ ಕುಳಿತಿದ್ದರು. ನಾನು ಬರುವದೇ ತಡ ಅದನ್ನು ನನಗೆ ತೋರಿಸಿ ಹೇಳಿದರು.

“ನೋಡು, ಕಾಂಗ್ರೆಸ ಕಾರ್ಯಕರ್ತರು ನಡೆಯಿಸಿದ ಆಟವಿದು! ಪೋಲೀಸ ವೇಷ ಹಾಕಿಕೊಂಡು ಲೂಟಿ ಮಾಡುತ್ತಿರುವರಂತೆ.” ನೋಡಿದೆ. ಎಂಥ ಅಪಪ್ರಚಾರವಿದು! ಎಂದುಕೊಂಡೆ. ಆದರೆ ತಂದೆಗೆ ಒಂದು ಶಬ್ದವನ್ನೂ ತಿರುಗಿ ಆಡಲಿಲ್ಲ. ನನ್ನ ಕೋಣೆಗೆ ನಡೆದೆ.

ತಂದೆ ಏನು ಭಾವಿಸಿದರೋ! ಇಂಥ ಸುದ್ದಿಗಳೇನಾದರೂ ಇದ್ದರೆ ನನಗೆ ಬೇಕೆಂತಲೇ ಕರೆದು ಹೇಳುವರು. ಕಾಂಗ್ರೆಸಿನ ವಿಷಯದಲ್ಲಿ ನನ್ನಲ್ಲಿ ಅನಾದರ ಹುಟ್ಟಲೆಂದು ಅವರ ಆಶೆ. ನಾನು ಏನೂ ಉತ್ತರ ಕೊಡದೆ ಹೊರಟಿದ್ದಕ್ಕೆ ತಮ್ಮ ಕಾರ್ಯ ಸಫಲವಾಯಿತೆಂದು ತಿಳಿದುಕೊಂಡಿರಬೇಕು.

ನನಗೂ ಒಮ್ಮೆ ಮನಸ್ಸಿನಲ್ಲಿ ಬಂತು. ಸಾತಾರೆಯಲ್ಲಿ ಪ್ರಕಟವಾಗುವ 'ಐಕ್ಯ' ಪತ್ರಿಕೆಯ ೧೯೪೨ ರ ಆಗಸ್ಟ [illegible]ನೆಯ ತಾರೀಖಿನ ಸಂಚಿಕೆಯಲ್ಲಿ ಪುಂಡರ ಬಗ್ಗೆ ಪ್ರಕಟವಾದ ಲೇಖನ ಒಂದನ್ನು ತೋರಿಸಬೇಕೆಂದು. ಆದರೆ ಏಕೆ? ಹೋಗಲಿ ಬಿಡು ಎಂದು ಸುಮ್ಮನಾದೆ.

ಮಹಾದು ರಾಮೋಶಿ, ಮಾರುತಿ ಶೇಣೇಕರ, ಬಾಪು ಧನಗರ, ಶಿವ್ಯಾ ಮಾಂಗ ಮೊದಲಾದ ದರೋಡೆಖೋರರು ಈ ಭಾಗದಲ್ಲಿ ಮೊದಲಿನಿಂದಲೂ ಪ್ರಸಿದ್ಧರಾದವರು. ಈ ದರೋಡೆಖೋರರು ಆಗಸ್ಟ ಕ್ರಾಂತಿಯ ನಂತರ ಅವರು ಜಪಿಸುವ ಮಂತ್ರ ಯಾವುದು ಗೊತ್ತೇ?

ಕೊಲೆ ಮಾಡುವಾಗ,—

“ಗಾಂಧಿ ಮಹಾರಾಜಕಿ ಜೈ!”

ದರೋಡೆ ಹಾಕುವಾಗ,—
" ಭಾರತಮಾತಾಕಿ ಜೈ ! "

ಅಂದಮೇಲೆ ಅಜ್ಞ .ಜನ ಪತ್ರಿ ಸರಕಾರದ ವಿಷಯಕ್ಕೆ ಏನನ್ನು ಕಲ್ಪಿಸೀತು? ಇದರ ಲಾಭವನ್ನು ಪೋಲೀಸರು ತಕ್ಕೊಳ್ಳುತ್ತಿರುವರು. ಈ ಸಂಗತಿಯನ್ನು ತಂದೆಯವರ ಮುಂದೆ ಹೇಳಿದರೆ ಏನು ಉಪಯೋಗ ? ಮತ್ತಿಷ್ಟು ನನ್ನ ನಡತೆಯ ಮೇಲೆ ಕಣ್ಣನ್ನೇ ಇಡುವರು. ಸೋತು ಗೆಲ್ಲುವುದರಲ್ಲಿಯೇ ಸ್ವಾರಸ್ಯವಿದೆ.

* * * *

ನಾವು ಬಹಳ ಎಚ್ಚರದಿಂದ ನಡೆಯಬೇಕಾಗಿದೆ. ಒಳಸಂಚಿನವರನ್ನು ಚೆನ್ನಾಗಿ ಶಿಕ್ಷಿಸಬೇಕಾಗಿದೆ. ಜ್ಞಾನು ಕುಂಬಾರನಂಥ ದರೋಡೆಖೋರನಿಗೇ ಪೋಲೀಸರು ಆಶ್ರಯ ಕೊಡಬೇಕೆಂದರೆ........ ?

ಜ್ಞಾನು ಕುಂಬಾರನ ಮೇಲೆ ಹತ್ತೆಂಟು ವಾರಂಟುಗಳು.

ಅಂಥವನನ್ನು ಮುಗ್ಗುಲಲ್ಲಿ ಕೂಡಿಸಿಕೊಂಡು ಒಬ್ಬ ಪೋಲೀಸ ಅಧಿಕಾರಿಯು ಯಾವ ಆಶ್ವಾಸನವನ್ನು ಕೊಡುವನು ಗೊತ್ತೇ ? ಕಾಂಗ್ರೆಸ್ಸ ಭೂಮಿಗತ ಕಾರ್ಯಕರ್ತರನ್ನು ಹಿಡಿದು ಕೊಡು ಇಲ್ಲವೆ ಗುಂಡು ಹಾಕಿ ಕೊಲ್ಲು. ಅಂದರೆ ನಿನ್ನ ಮೇಲಿನ ವಾರಂಟು ರದ್ದುಗೊಳಿಸೋಣ.

ಈ ಸುದ್ದಿಯನ್ನು ಕೇಳಿ ನಾನಾ ಪಾಟೀಲನ ರಕ್ತ ಕಾವೇರಿತು. ಕಾರ್ಯಕರ್ತರೆಲ್ಲ ಪ್ರತಿಜ್ಞೆಯನ್ನೇ ತೊಟ್ಟಂತೆ ಮಾಡಿದರು. ಮೂರೇ ಮೂರು ದಿನಗಳಲ್ಲಿ ಜಿಲ್ಲೆಯ ತುಂಬ ಸಂಚರಿಸಿ ಪುಂಡರ ಕರಾಳ ಕೃತಿಗಳನ್ನು — ಪೋಲೀಸರ ಕಾರಸ್ಥಾನಗಳನ್ನು — ಹೊರಗೆಡವಲು ಯತ್ನಿಸಿದೆವು.

ಪ್ರತಿಸರಕಾರದ ಎಲ್ಲ ಶಾಖೆಗಳಿಗೆ ಸೂಚನೆ ಕೊಡುವ ಭಾರ ನನ್ನ ಮೇಲೆ. ಒಮ್ಮೆ ಕೈಯಲ್ಲಿ ಕಾರ್ಯವನ್ನು ತಕ್ಕೊಂಡ ಮೇಲೆ ಕಣ್ಣಿಗೆ ನಿದ್ದೆಯೇ ಹತ್ತುವದಿಲ್ಲ. ಒಂದೇ ಒಂದು ವಾರದಲ್ಲಿ ಶಿರೋಳಪೇಟದೊಳಗಿನ ಆರು ದರೋಡೆಗಳನ್ನು ಗೊತ್ತುಹಚ್ಚಿದೆವು ! ಕರಹಾಡ, ಖಾನಾಪುರ, ವಾಳವೆಗಳಲ್ಲಿಯ ನಾಲ್ಕು ದರೋಡೆಗಳ ವಸ್ತುಗಳನ್ನು ಶೋಧಿಸಿ ಅವರ ಒಡೆಯರಿಗೆ ಒಪ್ಪಿಸಿದೆವು! ಅಪರಾಧಿಗಳಿಗೆ ಎಚ್ಚರಿಕೆಯನ್ನು ಕೊಡಲಾಯಿತು.

ಆದರೆ ಪೋಲೀಸರ ಆಧಾರವಿದ್ದವರು ನಮ್ಮ ಮಾತುಗಳನ್ನು ಕೇಳಿಯಾರೆ? ಮತ್ತೂ ತಮ್ಮ ಕಾರ್ಯ ನಡೆಯಿಸಿದರು. ಆಗ ಕೊನೆಯ ಉಪಾಯ ಕೈಕೊಳ್ಳಬೇಕಾಯಿತು.

ಪ್ರತಿಸರಕಾರದ ಸೈನಿಕರನ್ನು ಅವರ ಮೇಲೆ ಕಳಿಸಿದೆವು. ಸ್ವಾತಂತ್ರ್ಯ ಸೈನಿಕರಿಗೂ ಕಳ್ಳರ ತಂಡಕ್ಕೂ ಕೈಗೆ ಕೈ ಹತ್ತಿತು. ಆದರಲ್ಲಿ ಮಾರುತಿ ಶೇಣೇಕರ ಮಡಿದ. ಇನ್ನಿಬ್ಬರು ದರೋಡೆಖೋರರೂ ನೆಲಕ್ಕುರುಳಿದರು. ಜ್ಞಾನು ಕುಂಬಾರ ಹೆದರಿ ಪೋಲೀಸರ ಸ್ವಾಧೀನನಾದ. ಅವನಿಗೆ ಕೊಲ್ಹಾಪುರ ಸಂಸ್ಥಾನವು ಇಪ್ಪತ್ತು ವರ್ಷ ಶಿಕ್ಷೆ ವಿಧಿಸಿತು. ಅವನ ಜೊತೆಯಲ್ಲಿ ಬಂಧಿಸಿದ ನೂರಾ ಎಂಟು ಜನರಲ್ಲಿ ಒಬ್ಬನೂ ಕಾಂಗ್ರೆಸ ಕಾರ್ಯಕರ್ತನಿರಲಿಲ್ಲ.

ತಂದೆಯವರ ಕಲ್ಪನೆಯೇ ಬೇರೆ. ಇವರೆಲ್ಲರೂ ಕಾಂಗ್ರೆಸ ಕಾರ್ಯಕರ್ತರೆಂದೇ ಅವರ ಭಾವನೆ. ಕೇಸು ಮುಗಿಯುವವರೆಗೆ ದಿನಾಲು ನನಗೆ ಹಂಗಿಸಿದರು. "ಕಾಂಗ್ರೆಸೆಂದರೆ ಇಂಥ ಪುಂಡರ ಸಂತೆಯಾಗಿದೆ!" ಎಂದು ಕ್ಷಣಕ್ಕೊಮ್ಮೆ ಉದ್ಗರಿಸುತ್ತಿದ್ದರು. ಕೋರ್ಟಿನ ನಿರ್ಣಯ ಹೊರಬಿದ್ದರೂ ಅವರಿಗೆ ನಂಬಿಗೆ ಇಲ್ಲ. ಬರಲು ಶಕ್ಯವೇ ಇಲ್ಲ. ಅಂಥ ಮನೋವೃತ್ತಿಯಲ್ಲಿಯೇ ಬೆಳೆದ ಜನವದು. ಪಾರತಂತ್ರ್ಯದ ಅರಿವೇ ಇಲ್ಲ. ಅದು ಅವರಿಗೆ ಸುಖದ ಸ್ವರ್ಗ.

ಅಂದಮೇಲೆ ತರುಣರ ಮನಸ್ಸಿನ ಕಳವಳದ ಅರ್ಥ ಹೇಗಾದೀತು?

† † † †

ನಿನ್ನೆ ಲೋಣಂದ ಸ್ಟೇಶನದ ಮೇಲಿನ ಆ ಪ್ರಸಂಗ! ನೆನಪಾಗಲು ಇನ್ನೂ ಮೈ ಜುಮ್ಮೆನ್ನುವುದು. ಇನ್ನೊಮ್ಮೆ ಗಿಲ್ಬರ್ಟಸಾಹೇಬ ನಮ್ಮ ಹೆಸರನ್ನೂ ಉಚ್ಚರಿಸಲಿಕ್ಕಿಲ್ಲ.

ಹಗಲಿರುಳು ಕ್ರಾಂತಿವೀರರನ್ನು ಬೆನ್ನಟ್ಟಿ ತಿರಗುವದೇನು? ಗುಡ್ಡಗುಹೆಗಳಲ್ಲಿ ಹುಡುಕುವದೇನು? ಸಾತಾರೆಯ ಹೆಸರಾಂತ ಡಿ. ಎಸ್. ಪಿ. ಯಂತೆ! ವಹವ್ವ! ಸುತ್ತಲೂ ನೂರಾರು ಜನ ಪೋಲೀಸರ ಕಾವಲಿಟ್ಟು ನಡುವೆ ಮಲಗುವವರಿಗೆ ಎಂದಾದರೂ ದೇಶಸೇವಕರು ಸಿಕ್ಕುವರೇ?

ಕನಸಿನಲ್ಲಿ ನಮ್ಮ ನಾಯಕ ನಾನಾನನ್ನು ಕಂಡು ಒಮ್ಮೆಲೆ ಎಚ್ಚತ್ತು ಇರುಳೆಲ್ಲ ಒಂದು ಹಳ್ಳಿಯಲ್ಲಿ ಹುಡುಕಿದನಂತೆ! ಮನೆ ಮನೆ ತಿರುಗಿದನಂತೆ. ಯಾರು ಸಿಕ್ಕಬೇಕವನಿಗೆ?

ನಾನಾ ಪಾಟೀಲ—ನಾನಾ ಪಾಟೀಲ—

ಹೀಗೆ ಕನವರಿಸಿದರೆ ಪಾಟೀಲ ಸಿಕ್ಕುವನೆ? ಇಲ್ಲ. ಸಿಟ್ಟಿಗೆದ್ದ ಸಾಹೇಬ. ಪೋಲೀಸರ ಕಾವಲಿಟ್ಟ ಹಳ್ಳಿಗೆ. ಸ್ಟೇಶನಕ್ಕೆ ನಡೆದ. ಇನ್ನೂ ಗುಪ್ತಚಾರರನ್ನು ಕಾಣಬೇಕಲ್ಲ!

ಕಂಡ!

ಗುಪ್ತಚಾರರನ್ನಲ್ಲ.

ನಾನಾ ಪಾಟೀಲನನ್ನು........

ಕೈ ಕುಲುಕಿ ನಾನಾ ಹೇಳಿದ. ನಗುತ್ತ ಹೇಳಿದ.

"ನಾನೇ ಆ ನಾನಾ ಪಾಟೀಲ! ಸಾಹೇಬ, ತಮ್ಮ ಭೆಟ್ಟಿ ಎಂದೂ ಆಗುವದಿಲ್ಲ ನನಗೆ! ಸಹಜ ಇಂದು ಸಿಕ್ಕಿದಿರಿ!"

ಗಿಲ್ಬರ್ಟ ಸಾಹೇಬನ ಶರ್ಟು ತೊಯ್ದಿತು. ಬಾಯಿಂದ ಮಾತೇ ಬರಲಿಲ್ಲ.

ಹೊರಳಿ ನಾನಾನ ಮುಖದ ಕಡೆಗೊಮ್ಮೆ ನೋಡಿದೆ. ಅದೇ ನಗು ಮುಖ. ತೀಕ್ಷ್ಣವಾದ ದೃಷ್ಟಿ. ಮುಖದ ಮೇಲೆ ಯಾವ ಉದ್ರೇಕದ ಭಾವನೆಗಳೂ ಇಲ್ಲ. ಸಾಹೇಬನ ಮುಖದ ಕಡೆಗೆ ದೃಷ್ಟಿ ಹೊರಳಿಸಿದೆ. ಇಬ್ಬನ್ನಿ ಬಿದ್ದ ಒಣ ಆಲದ ಎಲೆಯಂತೆ ಅವನ ಮುಖವಾಗಿದ್ದಿತು.

§ § § §

ಸದಾನಂದ ಸಂಪಾದಿಸುವ, ಸುಮಿತ್ರೆಯು ಹೊಟ್ಟೆಗೆ ಹಾಕುವ, ಇದರ ಸ್ವರೂಪ ನನಗೆ ಬೇರೆಯಾಗಿಯೇ ಕಾಣುವದು. ಇದರಲ್ಲಿ ಸುಮಿತ್ರೆಯು ಗುಲಾಮಳೆನ್ನಿಸಿಕೊಳ್ಳುವುದರಲ್ಲಿ ಏನೂ ಅರ್ಥವಿಲ್ಲ. ಅವಳು ಸ್ವತಂತ್ರ ಳಿದ್ದಾಳೆ. ಬೇಕಾದ ದೇಶಸೇವೆಯನ್ನು ಮಾಡುತ್ತಾಳೆ. ಅವನ ಸಂಸಾರವನ್ನು ಸಾಗಿಸುವಳೆಂದು ಅವನು ಅವಳ ಹೊಟ್ಟೆಗೆ ಹಾಕುವನು. ಕೆಲ ವೊಂದು ಸಲ ಸುಮಿತ್ರೆಯ ಶ್ರಮಕ್ಕೆ ತಕ್ಕ ಪ್ರತಿಫಲವೂ ಸದಾನಂದ ನಿಂದ ಸಿಕ್ಕುತ್ತಿರುವುದಿಲ್ಲ. ಸಂಸಾರದೊಳಗಿನ ಈ ಶ್ರಮವಿಭಾಗದ

ತತ್ವವನ್ನು ಸ್ತ್ರೀಪುರುಷರಿಬ್ಬರೂ ಲಕ್ಷಕ್ಕೆ ತಂದರೆ ಯಾರೂ ಯಾರ ಕಡೆಗೆ ತರತಮ ಭಾವದಿಂದ ನೋಡಬೇಕಾಗಿಲ್ಲ. ಇಬ್ಬರೂ ಸ್ವತಂತ್ರವಾಗಿ ಸ್ವಂತ ಶ್ರಮದ ಮೇಲೆಯೇ ಬದುಕುತ್ತಿದ್ದಾರೆಂಬುದನ್ನು ಇಬ್ಬರೂ ಅರಿಯಲಿಕ್ಕೆ ಬೇಕು.

ಈ ಕಲ್ಪನೆ ಸುಮಿತ್ರೆಯಲ್ಲಾಗಲಿ ಇನ್ನುಳಿದ ಸ್ತ್ರೀಯರಲ್ಲಾಗಲಿ ಬಂದಾಗಲೇ ಅವರು ಸ್ವತಂತ್ರವಾಗಿ ವಿಚಾರ ಮಾಡಲು ಶಕ್ತರಾಗುವರು.

ಕೊಂಡುಬಾಯಿ ಸಾವಂತಳಂತಹ ದೇಶಸೇವಿಕೆಯನ್ನು ಎರಡು ದಿವಸ ಸುಮಿತ್ರೆ ಮನೆಯಲ್ಲಿಟ್ಟುಕೊಂಡರೆ ಏನಾಯಿತು ? ಸದಾನಂದ ಅಷ್ಟು ವಿರೋಧ ಹೋಗಬೇಕೆ ? ಪತಿಯ ವರ್ತನೆಯನ್ನು ನೋಡಿ, ನೊಂದು ನನ್ನೆಡೆಗೆ ಬಂದಳು ಸುಮಾ. ಆದರೆ ಹೆಣ್ಣು ಹೃದಯ. ಅವಳು ಕಣ್ಣೀರು ತಂದು ನುಡಿದಳು.

" ನಿನ್ನ ಈ ಕಟು ಸತ್ಯದಿಂದ ನನ್ನಲ್ಲಿ ಚೇತನೆ ಹುಟ್ಟಿತೇನೋ ನಿಜ. ಆದರೆ ಇದರಿಂದ ಸಂಸಾರದೊಳಗಿನ ರಸಮಯ ಸ್ವರೂಪವೂ ನಷ್ಟವಾಗಿ ಹೋಗುವುದು. ತಾನು ಒಬ್ಬರ ಹತ್ತಿರ ಸೇವಾಭಾವದಿಂದ ಬಾಳುವದು. ಸರ್ವಸ್ವವನ್ನು ಅರ್ಪಿಸುವದು. ಆ ಸೇವೆಯಿಂದ ಸಿಗುವ ಪ್ರತಿಫಲ–ಧನ ನನ್ನದು. ನಾನು ಸ್ವತಂತ್ರಳು ಎಂದು ಕಲ್ಪಿಸಿಕೊಂಡು ತಿರಗುವುದು ಆದೇಕೊ ನನಗೆ ಸೇರದು. "

ಪ್ರಪಂಚದೊಳಗಿನ ಇಬ್ಬರ ಕಡೆಗೂ ನೋಡುವ ನಿನ್ನ ಈ ದೃಷ್ಟಿ-ಕೋನದಿಂದ ನನ್ನಂತಹಳೊಬ್ಬಳಿಗೆ ಸಮಾಧಾನವಾದೀತು. ಆದರೆ ಅನೇಕ ಸಲ ನನಗೆ ಹೀಗನ್ನಿಸುವುದು. ಶ್ರಮದ ಪ್ರತಿಫಲ ಕೊಡಕೊಳ್ಳುವ ವೃತ್ತಿಯಾಗಲಿ, ಇಲ್ಲವೆ ಶ್ರಮದ ಕಡೆಗೆ ಈ ದೃಷ್ಟಿಯಿಂದ ನೋಡುವದಾಗಲಿ, ಇವೆರಡೂ ಮಾನವನ ಮೃದುವಾದ ಭಾವನೆಯಿಂದಾಗಲೇ ಉತ್ಪನ್ನವಾಗಿರುತ್ತವೆ. ತ್ಯಾಗ ನಿರಪೇಕ್ಷ ಸೇವೆಗಳ ಮೂಲದಲ್ಲಿರುವ ಭಾವನೆಯ ಬೆಲೆಯನ್ನು ಕಟ್ಟಲು ಎಂಥ ನುರಿತ ಅರ್ಥಶಾಸ್ತ್ರಜ್ಞನಿಗೂ ಬರುವದಿಲ್ಲ. ಅವುಗಳ ಬೆಲೆ ಕಟ್ಟಲಿಕ್ಕೆ ಬರುವದಿಲ್ಲವಾದರೂ ಅವುಗಳ ಬೆಲೆಯ ಅರಿವು ಹೃದಯಕ್ಕೆ ಆಗುವದು. ಎಂತಲೇ ಹೃದಯ ಮೃದುವಾಗಿರುವುದು, ಆರ್ದ್ರವಾಗಿರುವುದು. ಮಾನವನ ರುಕ್ಷ ಜೀವನಕ್ಕೆ ಇಂಥ ಅಮೌಲ್ಯ ಭಾವನೆಗಳಿಂದಲೇ ಸ್ನಿಗ್ಧತೆ

ಉಂಟಾಗಿದೆ. ಆ ಭಾವನೆಗಳನ್ನು ತೂಗಿ ಬೆಲೆ ಕಟ್ಟಲು ಯಾರು ಯಾವಾಗ ಯತ್ನಿಸುವರೋ—ಈ ವಿಷಯದಲ್ಲಿ ವ್ಯಾಪಾರಿ ಭಾವನೆಯು ಯಾವಾಗ ಜಾಗೃತಗೊಳ್ಳುವುದೋ—ಆಗ ಜೀವನ ಅಸಹ್ಯವಾಗುವುದು.

ನೀನೀಗ ಬ್ರಿಟಿಷ ಸಾಮ್ರಾಜ್ಯಶಾಹಿಯ ಕ್ರೂರ ದಬ್ಬಾಳಿಕೆಗೆ ಒಳಗಾಗಿರುವುದರಿಂದ ಇಂಥ ವಿಚಾರಗಳು ಬರಹತ್ತಿವೆ. ಯಾವ ತಂತ್ರಕ್ಕೂ ಒಳಗಾಗಿ ಬಾಳುವುದು ನಿನಗೆ ಅಸಹ್ಯವೆನಿಸತೊಡಗಿದೆ. ಪ್ರತಿ ಸರಕಾರಕ್ಕೂ ಒಂದು ಆಡಳಿತೆಯಿದೆ.

ನಿನ್ನ ದೇಶಸೇವೆಯೊಂದು ವ್ಯವಹಾರವೆಂದು ಹೇಗೆ ಆರಂಭಿಸಲು ಬರುವದಿಲ್ಲವೋ ಹಾಗೆಯೇ ಸಂಸಾರವೂ ಕೂಡ! ಅದರ ಮೂಲದಲ್ಲಿ ವ್ಯವಹಾರವಿದ್ದರೂ ಕೂಡ ಅದೊಂದು ಸೇವೆಯ ಕ್ಷೇತ್ರವಾಗಿರುವುದೇ ಕ್ಷೇಮಕರ. ಅಂಧ ಶ್ರದ್ಧೆ ಅಳಿಯಬೇಕಾರೂ ಶ್ರದ್ಧೆ ನಷ್ಟವಾಗಬಾರದು.

ನೀನು ಹೇಳುವ ಶ್ರಮ ವಿಭಾಗದ ತತ್ವವನ್ನು ಅಕ್ಷರಶಃ ಪಾಲಿಸಿದರೆ ಸಮಾಜ ಭಾವನೆಯೇ ನಷ್ಟವಾದೀತು. ಒಬ್ಬರು ಇನ್ನೊಬ್ಬರ ಶುದ್ಧ ಕೂಲಿಯಾಗಬೇಕಾದೀತು. ಪುರುಷನಿಗೆ ಪತ್ನಿಯ ಸೇವೆ ಒಗ್ಗದೆ ಹೋದಾಗ ನನ್ನಲ್ಲಿ ನಿಂತಷ್ಟು ದಿನದ ಸಂಬಳ ತಕ್ಕೊಂಡು ಹೋಗಿಬಿಡು ಎಂದು ಹೇಳುವ ಪ್ರಸಂಗ ಬಂದೀತು. ಹಾಗೆಯೇ ಸ್ತ್ರೀಗೂ ಕೂಡ ಈ ಅಧಿಕಾರ ಬರುವದು.

ನೀನು ನನಗೆ ಹೀಗೆ ಹೇಳುವುದರ ಮೂಲದಲ್ಲಿ ನಿನ್ನಲ್ಲೊಂದು—ನನ್ನ ವಿಷಯಕ್ಕೆ—ಉತ್ಕಟ ಭಾವನೆ ಇನ್ನೂ ಜಾಗೃತವಾಗಿರುವುದೇ ಕಾರಣ.

ಸುಮಿತ್ರೆಯ ಕೊನೆಯ ಈ ಮಾತು ನನ್ನಲ್ಲಿ ಆತ್ಮ ನಿರೀಕ್ಷಣೆಯ ದೃಷ್ಟಿಯನ್ನು ಹುಟ್ಟಿಸಿತು. ಹಾಗೆಯೇ ಅತ್ಯಂತ ವೇದನೆಯನ್ನು ಉಂಟು ಮಾಡಿತು. ಅವಳ ಪ್ರಖರ ವ್ಯಕ್ತಿತ್ವದಿಂದ ಒಂದು ಕ್ಷಣ ಬಧಿರನಂತಾದೆ. ಕಲ್ಲಿನಂತೆ ಕುಳಿತೆ.

"ಮನೆತನವನ್ನು ಸಂಬಾಳಿಸಿಕೊಂಡೇ—ಸ್ತ್ರೀತ್ವವನ್ನು—ಸತೀತ್ವವನ್ನು ರಕ್ಷಿಸಿಕೊಂಡೇ ನಿಮ್ಮ ಕಾರ್ಯದಲ್ಲಿ ನೆರವಾಗುವೆ. ವಿಕಾರವನ್ನು ತಡೆಯುವುದು ಸಂಸ್ಕೃತಿಯ ಲಕ್ಷಣ. ವೈಯಕ್ತಿಕ ಅತೃಪ್ತಿಯು ವ್ಯಕ್ತಿಯ ಅಧೋಗತಿಗೆ ಕಾರಣವಾಗದೆ ಉದಾತ್ತತೆಗೆ ಪ್ರಚೋದಕವಾಗಬೇಕು."

ಅನ್ನುವ ಅವಳ ಮಾತಿನ ಅರ್ಥ ಆ ಕ್ಷಣಕ್ಕೆ ನನಗಾಗಲಿಲ್ಲ. ಈಗ ವಿಚಾರಿಸಿದಷ್ಟೂ ಅರ್ಥ ಸ್ಫುರಿಸುತ್ತಿದೆ. ವಿಸ್ತಾರವಾಗುತ್ತಿದೆ. ಸುಮಿತ್ರೆಯ ಬಗ್ಗೆ ಆದರ ಹೆಚ್ಚಾಗುತ್ತಿದೆ.

ಇದರೊಡನೆ ಸುಲೋಚನೆಯ ಕಡೆಗೆ ನೋಡುವ ನನ್ನ ದೃಷ್ಟಿಯೂ ಬದಲಾಗಿದೆ. ಹೃದಯ ಪರಿವರ್ತನವಾಗಿದೆ.

§ § § §

ಹಡಗ ದಡವನ್ನು ಬಿಟ್ಟಿದೆ, ಅನುಕೂಲ ಗಾಳಿಯಿದೆ. ಈ ಗಾಳಿ ಹೀಗೆಯೇ ಬೀಸುತ್ತಲಿದ್ದರೆ ನೋಡುನೋಡುವಷ್ಟರಲ್ಲಿ ಈ ಪಾರತಂತ್ರ್ಯ ಸಮುದ್ರವನ್ನು ದಾಟಬಹುದು. ಬ್ರಿಟಿಷ ಸಾಮ್ರಾಜ್ಯಕ್ಕೆ ಎರಡೂ ಮಗ್ಗಲಿನಿಂದ ಏಟು ಬೀಳುತ್ತಿವೆ. ಹೊರಗೆ ನಿಂತು ಸುಭಾಷಸೇನೆ ಹೋರಾಡುತ್ತಿದೆ. ಒಳಗೆ ಪ್ರತಿ ಸರಕಾರ ನಿರ್ಮಾಣವಾಗಿದೆ. ಮಹಾಯುದ್ಧದ—ನರಮೇಧದಿಂದ—ಜ್ವಾಲೆಯಲ್ಲಿ ನವ ಭಾರತಮಾತೆಯ ಉಗಮವಾಗುತ್ತಿದೆ. ಎಂತಲೇ ಭಾರತೀಯ ಪ್ರತಿಯೊಬ್ಬ ತರುಣನಿಗೂ ಇದರಲ್ಲಿ ಸೇರಲು ಸ್ಫೂರ್ತಿಯುಂಟಾಗುತ್ತಿದೆ.

ಒಮ್ಮೊಮ್ಮೆ ಏನೋ ಸಂಶಯ ಬರುತ್ತಿದೆ. ನಮ್ಮ ದಾರಿ ತಪ್ಪಿರಬೇಕೆ? ಎಂದು. ದಾರಿ ತಪ್ಪಿದರೆ ಅವಶ್ಯ ತಿದ್ದಿಕೊಳ್ಳೋಣ. ನಾಳಿನ ಕಾರ್ಯಕರ್ತರ ಸಭೆಯಲ್ಲಿ ಆಲೋಚಿಸೋಣ. ಸ್ವಾತಂತ್ರ್ಯವು ಸುಖದ ವೃಕ್ಷಕ್ಕೆ ಆಗುವ ಹಣ್ಣಲ್ಲ. ಹಾಗಿದ್ದರೆ ಅದು ಸಿಹಿಯೂ ಅಲ್ಲ. ಅನೇಕ ವೇಳೆ ಮಹಾತ್ಮರು ಹೇಳಿದ ಮಾರ್ಗದಲ್ಲಿಯೂ ನಮ್ಮ ಸಾಧನೆಯ ದಾರಿಯಲ್ಲಿಯೂ ಭಿನ್ನತೆ ಇದ್ದಂತೆ ತೋರುವುದು, ಇರಲಿ. ಈ ಭಿನ್ನ ಭಿನ್ನ ದಾರಿಗಳಿಂದಲೇ ಸಾಗೋಣ. ನಮ್ಮ ಪ್ರಗತಿ ಹೋರಾಟದ ಮೇಲೆ ಅವಲಂಬಿಸಿದೆ. ಸಮಾಧಾನದಿಂದ ಕುಳಿತು ಆಯುಷ್ಯ ಕಳೆಯುವದಕ್ಕಿಂತ ಈ ಸ್ವಾತಂತ್ರ್ಯ ಸಮರದಲ್ಲಿ ಕಳೆಯುವುದು ಒಳ್ಳೆಯದು. ಈ ಕಷ್ಟದಲ್ಲಿ ಕಳೆಯುವ ಆಯುಷ್ಯದ ವಿಭಾಗ ನಿಜವಾದ ಜೀವನವೆನಿಸೀತು.

ಹೋರಾಟಬೇಕು ಅನಿಸುವದೇಕೆ ?

ಬ್ರಿಟಿಷರು ಬಿಟ್ಟ ಗುಂಡರು!

ವಿಧಾಯಕ ಕಾರ್ಯ ಮಾಡುವದಕ್ಕಾಗಿ ಕಾಂಗ್ರೆಸ ಕಾರ್ಯಕರ್ತರು ಭೂಮಿಗತರಾದರು. ಆಗ ಅವರು ಗುಂಡರ ಕಡೆಗೆ ಲಕ್ಷ್ಯ ಹಾಕಲಿಲ್ಲ. ತಾವೂ ಗುಂಡರಿರಲಿಲ್ಲ. ಇದೇ ಕಾಲಕ್ಕೆ ನಾಡಿನಲ್ಲಿ ಗಾಂಧೀ ಟೊಪ್ಪಿಗೆ ಹಾಕಿಕೊಂಡು, 'ಗಾಂಧೀ ಮಹಾರಾಜಕೀ ಜೈ' ಎನ್ನುತ್ತ ದರೋಡೆ ಮಾಡುವ ದಂಡೊಂದು ನಿರ್ಮಾಣವಾಯಿತು. ಅದನ್ನು ನಿರ್ಮಾಣ ಮಾಡಿದುದು ಬ್ರಿಟಿಷ ಸತ್ತೆ, ಸ್ವತಃ ಡಿ. ಎಸ್. ಪಿ. ಯು. ಜ್ಞಾನು ಕುಂಬಾರ ಎಂಬ ದರೋಡೆಖೋರನ ಸಂಗಡ ಸಂಬಂಧವಿಡುವದೆಂದರೆ ಅದರ ಅರ್ಥವೇನು?

ಈ ಗುಂಡರಿಗೆ ಸರಕಾರಕ್ಕೆ ಬೇಡಾದ ವ್ಯಕ್ತಿಗಳನ್ನು ಕೊಲ್ಲಲೂ ಸ್ವಾತಂತ್ರ್ಯ. ಇವರ ಮನೆಯವರಿಗೆ ಸರಕಾರದ ನೆರವು.

ಮೇಲೆ ಕಾಂಗ್ರೆಸಿನ ಬಗ್ಗೆ ಅಪಪ್ರಚಾರ!

"ಕಾಂಗ್ರೆಸಿಗೆ ದುಡ್ಡಿನ ಕೊರತೆಯಿದೆ. ಅದಕ್ಕಾಗಿ ಕೊಲೆ-ಸುಲಿಗೆಗಳನ್ನು ನಡೆಸಿದೆ. ಇದರಿಂದ ನಾಗರಿಕರಿಗೆ ತೊಂದರೆಯಾಗುತ್ತಿದೆ. ಅದರಿಂದ ಗುಂಡರನ್ನು ನಿರ್ನಾಮಗೊಳಿಸಲಿಕ್ಕೆ ಜನತೆ ಸರಕಾರಕ್ಕೆ ಸಹಾಯ ನೀಡಬೇಕು."

ವಹವ್ವ! ಪ್ರಚಾರದ ಪುಂಗಿಯೇ!

ಪ್ರಚಾರಕ್ಕಾಗಿ ಚಿತ್ರಪಟಗಳು, ಜಾಹೀರಾತುಗಳು ರೇಲ್ವೆ ನಿಲ್ದಾಣಗಳನ್ನು ಅಲಂಕರಿಸಿದುವು. ಅಜ್ಞ ಜನರ ಮನಸ್ಸಿನಲ್ಲಿ ಕಾಂಗ್ರೆಸಿನ ಬಗ್ಗೆ ತಪ್ಪು ಕಲ್ಪನೆಯನ್ನು ಮಾಡಿಕೊಡಲು ಪ್ರಯತ್ನಿಸಿದವು.

ಇದನ್ನು ವಿರೋಧಿಸುವುದೊಂದು ನಮ್ಮ ವಿಶಿಷ್ಟ ಕಾರ್ಯಕ್ರಮ.

* * * *

ಇದೇನು?

ನಿತ್ಯ ದಿನಚರಿ ಬರೆಯಬೇಕೆಂದು ಸಂಕಲ್ಪ ಮಾಡಿದ್ದರೂ ಒಂದೂ ದಿನ ಸರಿಯಾಗಿ ಸಾಗದಲ್ಲ!

ಈಗೆರಡು ದಿನ ಕಣ್ಣಿಗೆ ನಿದ್ರೆಯಿಲ್ಲ. ತೂಕಡಿಕೆ ಬರುತ್ತಿದೆ. ಆದರೂ ಈ ಮಾತು ಬರೆಯದೆ ಮನಸ್ಸಿಗೆ ಸಮಾಧಾನವಿಲ್ಲ.

ಶಿರಾಳೆ ಮತ್ತು ವಾಳವೆ ಈ ಎರಡು ತಾಲೂಕುಗಳಲ್ಲಿ ಒಂದೇ ಸವನೆ ತಿರುಗಾಡಿದೆ. ಎಂತಲೇ ಹತ್ತು ದರೋಡೆಗಳು ಹೊರಬಿದ್ದುವು. ಕಾರ್ಯ

ಕರ್ತರಿಗೆ ರಿಪೋರ್ಟ್ರ್ ಕೊಟ್ಟು ಬಂದೆ. ಇನ್ನೆರಡು ದಿನಗಳಲ್ಲಿ ಕಳವಿನ ಮಾಲು ಸಹಿತ ಅವರನ್ನು ಹಿಡಿಯುವರು ಕಾಂಗ್ರೆಸ ಕಾರ್ಯಕರ್ತರು. ಆಗಲೇ ಪ್ರತಿ ಸರಕಾರವೆಂಬ ಹೆಸರು ಸಾರ್ಥಕವಾಗುವುದು.

ತಂದೆ ಹಳ್ಳಿಯ ಹೊಲಗಳ ತೆರಿಗೆ ಎತ್ತಲು ಕಳಿಸಿದರೆ ನಾನು ಮಾಡಿ ಬಂದ ಕೆಲಸವೇ ಬೇರೆ. ಜನತೆಯೂ ಕೂಡ ಕಾಂಗ್ರೆಸ ಕಾರ್ಯಕರ್ತರಿಗೂ ಪುಂಡರಿಗೂ ಸಂಬಂಧ ಹಚ್ಚಲು ಮುಂದೊರಿದಾಗ ನಾವು ಸುಮ್ಮನಿರುವುದೆಂದರೆ....

ಅಲ್ಲಿ ಇಲ್ಲಿ ಕೇಳಿದ ಪೋಲೀಸ ಅತ್ಯಾಚಾರದ ಬಗ್ಗೆಯೂ ಇಂದೇ ಬರೆಯ ಬೇಕಿತ್ತಾದರೂ ನಿದ್ರೆ ಬಹಳ ಬಂದಿದೆ. ಇಷ್ಟಕ್ಕೇ ನಿಲ್ಲಿಸುವೆ.

× × × +

ನಿನ್ನೆ ಬರೆಯದೆ ಉಳಿದ ವಿಷಯ ಬರೆಯುವದಕ್ಕಿಂತ ಮುಂಚೆ ಒಂದು ವಿಷಯ ಹೇಳಬೇಕು. ಆ ವಿಷಯ ಮೊನ್ನೆ ನಾನು ಮಾಡಿದ ಕಾರ್ಯದ ಮೂರ್ತ ಸ್ವರೂಪವಾಗಿದೆ.

ಇಂದು ಬೆಳಗಿನಲ್ಲಿ ಕಾಂಗ್ರೆಸ ಕಾರ್ಯಕರ್ತರಿಗೂ ದರೋಡೆಖೋರರಿಗೂ ಚಕಮಕಿ ನಡೆಯಿತಂತೆ. ಇಬ್ಬರು ದರೋಡೆಖೋರರು ಸತ್ತರು. ಮಧ್ಯಾಹ್ನ ಕಳವಿನ ಮಾಲನ್ನು ಯಾರದವರಿಗೆ ಕೊಟ್ಟುಬಿಟ್ಟರಂತೆ. ಇದರಿಂದ ಜನತೆಯ ಕಣ್ಣಿನ ಮೇಲಿನ ಮಂಜು ಹರಿಯದೆ ಇರದು.

ಇರಲಿ. ನಿನ್ನೆ ಬಿಟ್ಟ ವಿಷಯ ಯಾವುದು? ಹೋ........? ಅದೇ ಅಲ್ಲ ಪೋಲೀಸರ ಕೊಲೆಗಡಕತನ. ನೆನಪಾಗಲು ಅಯ್ಯೋ ಎನಿಸುವುದು.

ಇಸಾಪುರದ ಹೆಡ್ ಮಾಸ್ತರರಿಗೆ ರಕ್ತ ಕಾರುವವರೆಗೆ ಹೊಡೆಯುವುದು! ಕೋನೇಗಾಂವದ ಮುದುಕೆಯನ್ನು ಚಾವಡಿಗೆ ತಂದು ಚಬುಕದಿಂದ ತರಿಯುವುದು!

ಅಂಕಲಕೊಪ್ಪದ ಚನ್ನಪ್ಪ ಪರಭಣಿ....ಅಯ್ಯೋ! ತೊಂಭತ್ತು ವರ್ಷದ ಮುದುಕ ಪಾಪ! ಅಂಥವರಿಗೆ ಬೂಟಿನಿಂದ ಒದೆಯಲು ಫೌಜದಾರನಿಗೆ ನಾಚಿಗೆ ಬರಬಾರದೆ? ಛೀ!

ಇವುಗಳನ್ನು ನೆನೆಯಲು ಕರುಳು ಕತ್ತರಿಸುವುದು, ಅಯ್ಯೋ ಅನ್ನಿಸುವುದು! ಸಾಕು ಈ ಅತ್ಯಾಚಾರಗಳ ನೆನಹು!

‡ ‡ ‡ ‡

ಬ್ರಿಟಿಷ ಅಧಿಕಾರಿಗಳ ಮೂರ್ಖತನ!

ಸರಕಾರಕ್ಕೆ ಬೇಕಾದ ಗುಂಡರೂ ಮಹಾತ್ಮರಾಗುವರು! ಮೊನ್ನೆ ಕಾಂಗ್ರೆಸ ಕಾರ್ಯಕರ್ತರಿಂದ ಕೊಲ್ಲಲ್ಪಟ್ಟ ಗುಂಡರು ಒಳ್ಳೆಯವರಂತೆ! ಅವರ ಶವದ ಮೆರವಣಿಗೆಯೇನು? ದರೋಡೆಖೋರರೊಡನೆ ಹೋರಾಡಿ ಮಡಿದರೆಂಬ ಉಪನ್ಯಾಸವೇನು? ಅವರ ಮಕ್ಕಳೆಲ್ಲ ನೌಕರದಾರರ ಹೆಗಲ ಮೇಲೆ ಮೆರೆದರು! ಅಪಪ್ರಚಾರದ ಪರಮಾವಧಿಯಿದು. ಇದಕ್ಕೆ ಜನತೆಯೇ ಉತ್ತರವೀಯಬೇಕು.

ಕುಮಠೆ, ತಾಕಾರಿ, ಅಂಬಕಗಳಲ್ಲಿ ನಡೆದ ಸ್ತ್ರೀಯರ ಮೇಲಿನ ಅತ್ಯಾಚಾರಗಳನ್ನು ನೆನೆದರೆ ಎದೆ ಬಿರಿಯುವುದು.

ಓದ ಓದುತ್ತ ಎದುರಿಗಿನ ಕಿಡಿಕಿಯ ಕಡೆಗೆ ಸುಬ್ಬರಾವನ ಲಕ್ಷ್ಯ ಹೋಯಿತು. ಎರಡೂ ಕೈಗಳಿಂದ ಕಿಡಕಿಯ ಸಳಿಗಳನ್ನು ಹಿಡಿದು ನಿಂತ ಸುಲೋಚನೆಯನ್ನು ಕಂಡು ಬೆರಗಾದ ಸುಬ್ಬರಾವ. ಕೈಯೊಳಗಿನ ಪುಸ್ತಕವನ್ನು ಚಟ್ಟನೆ ಮುಚ್ಚಿದ. ಅದೇ ಸಮಯಕ್ಕೆ ಅದರ ಹೊಟ್ಟೆಯಲ್ಲಿ ಹುದುಗಿಕೊಂಡಿದ್ದ ಪಾಕೀಟೊಂದು ಸರ್ರನೆ ಜಾರಿ ಅವನ ತೊಡೆಯ ಮೇಲೆ ಬಿತ್ತು. ಬಾಬಾಸಾಹೇಬನ ವಿಳಾಸಕ್ಕೆ ಬಂದ ಪಾಕೀಟದು. ಮೇಲಿನ ಹಸ್ತಾಕ್ಷರದ ಗುರುತೂ ಹತ್ತಿದಂತಾಯಿತು.! ಕುತೂಹಲ ಕೆರಳಿತು. ಆದರೂ ಅದನ್ನು ತಡೆದು ಕೇಳಿದ,—

" ಏಕೆ ಸುಲಾ? ಏನಾದರೂ ಕೆಲಸವಿತ್ತೇನು?"

ಗೊಂದಲದಲ್ಲಿ ಬಿದ್ದವರಂತೆ ಸ್ವರವಿದ್ದಿತು. ಸುಬ್ಬರಾಯನ ಹೃದಯದ ಪ್ರತೀಕವದು.

" ಈಗ ಹಿತ್ತಲೊಳಗೆ ಬಂದಿದ್ದೆ....ನೋಡಿದೆ ಸಹಜ"

ಮಾತು ಹರಕುಮುರುಕಾಗಿ ಬಂತು. ಬಿಸಿಲಿನಿಂದ ಬಾಡಿದ ಅವಳ ಮುಖವನ್ನು ಕಂಡರೆ ಬಹಳ ಹೊತ್ತಿನಿಂದ ಅಲ್ಲಿ ನಿಂತಿರಬೇಕವಳು. ಚಮಕಿತಳಾಗಿ ಚಟ್ಟನೆ ಕೆಳಗಿಳಿದು ಹೊರಟಳು.

" ಸುಲೂ! " ಸುಬ್ಬರಾವ ಕೂಗಿದ.

ತಿರುಗಿ ಬಂದು ಸುಲೋಚನೆ ಮುಖದೋರಿದಳು.

" ವೇಳೆ ಎಷ್ಟಾಯಿತು ?"

" ಐದು ಹೊಡೆದಿರಬೇಕು. "

" ಬಾಬಾಸಾಹೇಬ ಬಂದನೇನು ?"

" ಇ...........ಲ್ಲ..........." ಭಾರವಾಗಿತ್ತವಳ ಸ್ವರ.

ಮಾವ ಸೊಸೆಯರಲ್ಲಿ ಇಷ್ಟೇ ಮಾತಾಯಿತು. ಇಬ್ಬರಲ್ಲಿಯೂ ಮೌನ ಆವರಿಸಿತು ಒಂದು ಕ್ಷಣ ಹಾಗೆಯೇ ನಿಂತಿದ್ದಳು, ಸುಲೋಚನೆ ಸುಬ್ಬರಾಯನ ಬಾಯಿಂದ ಏನು ಮಾತು ಹೊರಡುವದೆಂದು ನಿರೀಕ್ಷಿಸುತ್ತ. ಸುಬ್ಬರಾವ ತನ್ನ ವಿಚಾರದಲ್ಲಿಯೇ ತಾನು ಮಗ್ನನಾದುದನ್ನು ಕಂಡು ಭಾರವಾದ ಹೆಜ್ಜೆಗಳಿಂದ ಹೊರಟು ಒಳಗೆ ಹೋದಳು.

ಸುಬ್ಬರಾವನು ಆ ಪಾಕೀಟು ದಿನಚರಿಗಳ ಕಡೆಗೆ ಒಂದೇ ಸವನೆ ನೋಡುತಲಿದ್ದ. ತಲೆಯಲ್ಲಿ ಏನೇನೋ ವಿಚಾರಗಳ ತಾಕಲಾಟ ನಡೆದಿದ್ದಿತು. ದಿನಚರಿಯು ಇನ್ನೂ ಅರ್ಧಭಾಗ ಓದುವದುಳಿದಿದ್ದಿತು. ಇನ್ನೊಂದು ಮನಸ್ಸಿನ ಚುಂಗು " ಏನು ಓದುವುದು ? ಅವನ ಸ್ವರೂಪ ಗೊತ್ತಾಗಿ ಹೋಯಿತಲ್ಲ" ಎಂದು ತಿಳುವಳಿಕೆ ಹೇಳುವದು.

ಏನು ಗೊತ್ತಾಯಿತೋ ಶಿವನೇ ಬಲ್ಲ.

ಸುಬ್ಬರಾವನಿಗೆ ಎಲ್ಲವೂ ದಿಗಿಲು. ಬಾಬಾಸಾಹೇಬ ಎಲ್ಲಿ ಹೋಗಿರಬೇಕು ? ಏನು ಮಾಡಿರಬೇಕು ? ಯಾವ ಪ್ರಶ್ನೆಗೂ ಉತ್ತರ ಸಿಕ್ಕುವಂತಿಲ್ಲ.

ವಿಚಾರಿಸಿದಷ್ಟೂ ಸುಬ್ಬರಾವನಲ್ಲಿ ಹೆದರಿಕೆ ಹೆಚ್ಚಾಗತೊಡಗಿತು. ಬಾಬಾಸಾಹೇಬ ಇಷ್ಟು ಆಳ ನೀರಿನ ಹುಡುಗನೆಂಬುದು ಅವನಿಗೇ ಗೊತ್ತಿರಲಿಲ್ಲ. ಹೆಂಡತಿಯ ಮನೆಗೆ ಹೋಗುವೆನೆಂದು ಹೇಳಿ ಫರಾರಿ ಜನರೊಡನೆ ತಿರುಗಾಡಲು ಹೋಗಿದ್ದನೆ ? ನಮ್ಮ ಹೊಟ್ಟೆಯಿಂದ ಹುಟ್ಟಿದ ಮಕ್ಕಳ ಹೃದಯ ನಮಗೇ ಗೊತ್ತಿರದಾಗ ಇನ್ನೊಬ್ಬರ ಮನೆಯ ಮಕ್ಕಳನ್ನು ಹೇಗೆ ತಿಳಿದುಕೊಳ್ಳಬಲ್ಲೆವು ? ಸುಮಿತ್ರೆ ಮೇಲೆ ಗಂಡಾತಿ ಒಳಗಿರುವಳೇ ? ಎಂಥ ಗೂಢ ಪ್ರಕೃತಿ ಅವಳದು? ಸುಲೋಚನೆಯ ಅಂತರಂಗದಲ್ಲಿ ಎಂಥ ಜ್ವಾಲಾಮುಖಿ ಅಡಗಿರುವದೊ ! ಬಾಬಾಸಾಹೇಬ ಎಲ್ಲಿ ತೊಳಲುತ್ತಿರುವನೋ !

" ಟಪ್........ಟಪ್........ಟಪ್........"

ಒಂದೆರಡು ಸಲ ಬಾಗಿಲ ಮೇಲೆ ಯಾರೋ ಮೆಲ್ಲನೆ ಬಡಿದರು. ಬಡಿಯುವ ರೀತಿ ಪುರುಷರದೇನಲ್ಲ. ಸುಲೋಚನೆ ಬಡಿಯುತ್ತಿರಬೇಕೆ ? ಆದರೆ ಅವಳಿಗೆ ಇಂಥ ಧೈರ್ಯ ಎಲ್ಲಿಂದ ಬಂದೀತು ?

“ ಯಾರವರು ?”

“ ನಾ........ನಾನು”

“ ಸುಲೋಚನೆ ! ”

ಸುಬ್ಬರಾವನ ಬಾಯಿಂದ ಉದ್ಗಾರ ಹೊರಟಿತು.

“ ಅಹುದು. ಮಧ್ಯಾಹ್ನದ ಚಹಾ........”

“ ಹೂಂ ! ಬಂದೆ. ”

ಬಾಗಿಲ ತೆರೆದ ಸುಬ್ಬರಾವ. ಸುಲೋಚನೆಯ ಇಂಥ ವಿಕೃತ ಮುಖವನ್ನು ಅವನೆಂದೂ ಕಂಡಿರಲಿಲ್ಲ. ಮಾವನಿಗೆ ಚಹ ಕೇಳಲು ಬಂದವಳಿಗೆ ಎದುರು ನಿಲ್ಲುವದಾಗಲಿಲ್ಲವೇನೋ ! ಹೊರಳಿ ಹೋಗಿಬಿಟ್ಟಳು.

ಅವಳ ಮನಸ್ಸು ಒಂದು ತರದ ವಿಷಾದದಿಂದ ತುಂಬಿದ್ದಿತು. ಇಂದು ಹೊತ್ತೇರಿದಂತೆ ಭೂಮಿತಾಯಿ ತನ್ನ ಮಡಲಲ್ಲಿ ಅವಳಿಗೆ ಮಲಗಗೊಡುತ್ತಿಲ್ಲವೇನೋ, ಎಂದೆನಿಸಿತು. ಊಟಕ್ಕೆ ಕುಳಿತರೆ ತುತ್ತು ಅನ್ನ ಹೋಗಲಿಲ್ಲ ಮಲಗಿದರೆ ಕಣ್ಣುರೆಪ್ಪೆ ಒಂದಕೊಂದು ಹತ್ತಲಿಲ್ಲ. ಮಾವನ ಹತ್ತರ ಹೋಗಬೇಕು, ಏನಾದರೂ ಮಾತನಾಡಬೇಕು, ಎಂದೆನಿಸುವುದು. ಆದರೆ ಹೋಗಲಿಕ್ಕೇ ಮನಸ್ಸು ಹಿಂಜರಿಯುವದು. ಏನೋ ಧೈರ್ಯ ತಂದುಕೊಂಡು ಹೋದರೆ ಎದುರಿಗೆ ನಿಲ್ಲಲಿಕ್ಕಾಗದು. ಮುಖ ಮುಚ್ಚಿಕೊಂಡು ಮರಳುವಂತಾಗುವುದು. ಈ ಸಲವೂ ಸುಲೋಚನೆಗೆ ಹಾಗೆಯೇ ಆಯಿತು.

ಸುಲೋಚನೆ ಬಂದು ಹೋದುದೂ ಸುಬ್ಬರಾವನಿಗೆ ಒಂದು ಕನಸಿನಲ್ಲಿ ನಡೆದಂತೆ. ಹಾಗೆಯೇ ತಿರುಗಿ ಕುರ್ಚಿಯ ಮೇಲೆ ಕುಳಿತ. ಮೈ ಭಾರವಾಗಿದ್ದಿತು. ಸುತ್ತಲೂ ನೋಡಿದ, ಕೋಣೆಯೆಲ್ಲ ಭಣ ಭಣವೆನ್ನುತ್ತಿತ್ತು. ಕುರ್ಚಿ, ಮೇಜು, ಕಪಾಟುಗಳೆಲ್ಲ ತನ್ನನ್ನು ಕಂಡು ಅಪಹಾಸ್ಯಗೈಯುತ್ತಿರುವಂತೆ ಭಾಸವಾಗತೊಡಗಿತು. ಅಲ್ಲಿ ಕೂಡುವುದೂ ಅಸಹ್ಯಕರವಾಗಹತ್ತಿತು.

ದಿಗ್ಗನೆ ಎದ್ದ ಸುಬ್ಬರಾವ. ತೊಡೆಯ ಮೇಲಿನ ಪಾಕೀಟು ನೆಲಕ್ಕೆ ಬಿತ್ತು. ಅದರೊಡನೆಯೇ ಒಳಗಿನ ಕಾಗದ ಹೊರಗೆ ಮುಖದೋರಿತು.

“ ನಿನ್ನ

ವಸಂತ”

ಎಂಬಿಷ್ಟೇ ಅಕ್ಷರಗಳು ಸುಬ್ಬರಾವನ ದೃಷ್ಟಿಗೆ ಬಿದ್ದವು. ಏನು ? ವಸಂತನ ಪತ್ರವೆ ? ಯಾವಾಗ ಬರೆದುದಿದು! ಎಂದು ಕೈಯಲ್ಲಿ ತಕ್ಕೊಂಡ. ಅತ್ತ ಇತ್ತ ಹೊರಳಿಸಿದ. ಅಂಚೆಯ ಮುದ್ರೆಯನ್ನು ಹುಡುಕಿದ. ಅದು ಇದ್ದಂತಿರಲಿಲ್ಲ. ಹೇಗೆ ಬಂತಿದು ? ನಿನ್ನೆ ಮೊನ್ನೆ ಬರೆದಂತಿದೆಯಲ್ಲ. ಜೇಲಿನಲ್ಲಿ ಇವನಿಗೆ ಬರೆಯಲಿಕ್ಕೆ ಹೇಗೆ ಸಾಧಿಸಿತು ? ಎಂದು ವಿಚಾರಿಸುತ್ತಿರುವಾಗಲೇ ಕೈಯು ಕೆಲಸ ಮಾಡಿತು. ಕಾಗದವನ್ನು ಹೊರಗೆಳೆಯಿತು. ಮೇಲ್ಭಾಗದ ಮೇಲೆಯೇ ಸುಬ್ಬರಾವನ ದೃಷ್ಟಿ ಹರಿದಾಡಿತು. ಕಾಗದದ ಕೊನೆಯ ನಾಲ್ಕೆಂಟು ಸಾಲುಗಳನ್ನು ಓದಿದ.

“............ಬಾಬಾಸಾಹೇಬ ! ತಪ್ಪಿದ್ದನ್ನು ತಿದ್ದಿಕೊಳ್ಳುವುದರಲ್ಲಿಯೇ ಜಾಣತನವಿದೆಯಲ್ಲವೆ ? ಎಡವಿದ ಕಾಲನ್ನು ಎತ್ತಿಡಬೇಕೇ ಹೊರತಾಗಿ ಎಡೆವಿದೆನಲ್ಲ........ಎಂದು ಕೊರಗುತ್ತ ನಿಲ್ಲುವುದರಲ್ಲಿ ಅರ್ಥವಿಲ್ಲ.

ನಿನ್ನ ತಂದೆಯವರಿಗೆ ನನ್ನನ್ನು ಹಿಡಿದುಕೊಟ್ಟದ್ದಕ್ಕಾಗಿ ಪ್ರತಿಸರಕಾರದ ಹೆದರಿಕೆ ಇರಬೇಕು. ನಿನ್ನ ತಂದೆಯ ಸ್ಥಳದಲ್ಲಿ ಬೇರೊಬ್ಬರಾರಾದರೂ ಇದ್ದಿದ್ದರೆ! ಎಂಬ ವಿಚಾರವೇನೋ ಬರುವದು. ಬೇಡ ಅಂತಹ ವಿಚಾರ ತಲೆಯಲ್ಲಿ ಬರುವುದೇ ಬೇಡ.

ನಾನೇನೋ ಹೀಗೆ ಅಂದುಕೊಳ್ಳುತ್ತಿರುವೆನಾದರೂ ‘ ಪ್ರತಿ ಸರಕಾರ’ ತನ್ನ ಕಾಯಿದೆಯನ್ನು ನಡೆಯಿಸಿಯೇ ತೋರಿಸುವ ಲಕ್ಷಣ ತೋರುತ್ತಿದೆ. ಯಾರಿದ್ದರೇನು ? ತಪ್ಪುಗಾರನು ತಪ್ಪುಗಾರನೇ ಅಲ್ಲವೆ ?

ನಿಮ್ಮ ತಂದೆಯವರಿಗೆ ಹನ್ನೊಂದನೆಯ ಕಲಮು ಹಚ್ಚಿದ್ದಾರಂತೆ.... ಆ ಶಿಕ್ಷೆ, ಆ ತಳಮಳ ನನ್ನಿಂದ ನೆನೆಯುವದಾಗದು. ಆದರೆ ಉಪಾಯ ವಿಲ್ಲ. ನಾನು ಬಲೆಯೊಳಗೆ ಬಿದ್ದ ಸಿಂಹನಂತಾಗಿದ್ದೇನೆ. ನಾಳೆ ಬೆಳಗಾಗು ವುದರಲ್ಲಿ ಯಾವ ಸುದ್ದಿ ಬರುವುದೋ ಏನು ಕತೆಯೋ ಎಂದು ಮೈಯೆಲ್ಲ ಕಿವಿಗಳಾಗಿ ಕೇಳುತ್ತಿರುವೆ.

ನಿನ್ನ ತಂದೆಯನ್ನು ನಿರ್ದೋಷಿಯನ್ನಾಗಿ ಮಾಡುವುದು ನಿನ್ನ ಕೈಯಲ್ಲೇನಾದರೂ ಇದ್ದರೆ ಮಾಡು. ತಪ್ಪದೆ ಮಾಡು. ವೇಳೆಯಿಲ್ಲ ನಲವತ್ತೆಂಟು ತಾಸಿನ ಅವಧಿಯು ಇಲ್ಲ. ಕಾಗದ ಕೈಯೊಳಗೆ ಸೇರುವುದೇ ತಡ, ಮುಂದಿನ ಕೆಲಸಕ್ಕೇನೇ ತೊಡಗಬೇಕು ನೀನು.

ನಿನ್ನ ಗೆಳೆಯನಾಗಿ—ಪ್ರತಿ ಸರಕಾರದ ಪ್ರತಿನಿಧಿಯಾಗಿ— ಇದಕ್ಕೂ ಹೆಚ್ಚಿಗೇನನ್ನು ಹೇಳಬಲ್ಲೆ. ಹೇಳು ನೋಡೋಣ.

ನಿನ್ನ

—**ವಸಂತ**

೩

ಕುಳಿತಲ್ಲಿಯೇ ಸುಬ್ಬರಾಯನ ಮೈಯೊಳಗಿನ ಶಕ್ತಿಯೆಲ್ಲ ಉಡುಗಿ ಹೋದಂತಾಯಿತು. ಸುತ್ತಲೂ ನೋಡಿದ. ಕಿಡಕಿಯ ಬಾಗಿಲಗಳು ಗಟ್ಟಿ ಮುಟ್ಟಾಗಿರುವವೋ ಇಲ್ಲವೋ ಎಂದು ಅವನ ಕಣ್ಣುಗಳು ನಿರುಕಿಸತೊಡಗಿದುವು! ಅದೇ ಕಾಲಕ್ಕೆ ಮುಂಜಾನೆ ಬಂದ ನೋಟೀಸು ನೆನಪಾಗಿ ಅವನನ್ನು ಇನ್ನಷ್ಟು ಅಧೀರನನ್ನಾಗಿ ಮಾಡಿತು. ಪ್ರತಿ ಸರಕಾರ ಹನ್ನೊಂದನೆಯ ಕಲಮು ಹಚ್ಚಿದೆ! ಎಂಬ ಧ್ವನಿ ಅವನ ಕಿವಿಯಲ್ಲಿ ತಿರುತಿರುಗಿ ಸುಳಿಯತೊಡಗಿತು. ಹೃದಯ ನಡುಕದಿಂದ ತುಂಬಿಹೋಯಿತು.

ಹನ್ನೊಂದನೆಯ ಕಲಮು!

ಅಯ್ಯೋ ಆ ಯಾತನೆಯನ್ನು ತಾಳಲಾದೀತೆ? ಕಾಲಿಗೆ ಪತ್ರೆ ಕಟ್ಟುವದು. ಮಳೆಗಳನ್ನು ಜಡೆದು ಮೇಲೆ ಮಣಿಸಿ ಬಿಡುವರಂತೆ. ಯಾವ ಹಾಸ್ಪಿಟಲಿನವರೂ ಕೇಸು ಹಿಡಿಯುವದಿಲ್ಲವಂತೆ!

ಕುಳಿತಲ್ಲಿಯೇ ಬೆದರಿದ ಸುಬ್ಬರಾವ.

ಇನ್ನೇನು ಮಾಡಲಿ! ಈ ಹೊತ್ತು ರಾತ್ರಿ ನಾನು ಉಳಿಯುವುದೇ ಇಲ್ಲ.

ಏನು? ದಿವಾಣಸಾಹೇಬರಿಗೆ ಕಾಗದ ಕಳಿಸಿ ಪೋಲೀಸ ಪಾರ್ಟಿ ಕರೆಸಿಡಲೇ? ಇಂಥ ವೇಳೆಯಲ್ಲಿ ಬಾಬಾಸಾಹೇಬನೇಕಿರಬಾರದು ಮನೆಯಲ್ಲಿ?

ತನ್ನ ಕಣ್ಣಮುಂದೆ ತಂದೆ ಶಿಕ್ಷೆ ಅನುಭವಿಸುವದನ್ನು ಕಾಣಬಾರದೆಂದು ಹೋಗಿರಬೇಕೆ? ಎಂಥ ಮಕ್ಕಳಿರುವರು?

ಸಯಾಜಿ ಈಗ ಇಲ್ಲಿ ಇದ್ದಿದ್ದರೆ ನನಗೇನು ಹೆದರಿಕೆ ಇತ್ತು?

ಪ್ರತಿ ಸರಕಾರ ತನಗೆ ಶಿಕ್ಷೆ ವಿಧಿಸೇ ತೀರುವದೆಂಬುದು ಸುಬ್ಬರಾವನಿಗೆ ಮನದಟ್ಟಾಗಿ ಹೋಯಿತು. ಗದಗದ ನಡುಗಿದನಾತ, ಅಂಥ ಕೋಣೆಯಲ್ಲಿಯೂ ಒಬ್ಬನೇ ಕುಳ್ಳಿರಲು ಹೆದರಿದ.

"ಸು....ಲಾ!" ಎಂದು ಕೂಗಿದ.

ಬಾಯಲ್ಲಿ ನಾದವೇ ಏಳಲಿಲ್ಲ. ಅಷ್ಟರಲ್ಲಿ ಅಡಿಗೆಯವ ಚಹ ತಕ್ಕೊಂಡು ಬಂದ. ಅದೇನೋ ಸುಬ್ಬರಾವನಿಗೆ ತುಸು ಧೈರ್ಯ ಬಂದಂತಾಯಿತು. ದನಿ ಸರಿಪಡಿಸಿಕೊಂಡು ಕೇಳಿದ.

"ಸುಲೋಚನೆ ಎಲ್ಲಿ?"

"ಒಳಗೆ ಇದ್ದಾರೆ."

"ನೀ ಚಹ ತಂದೆ."

"ಅವರೇ ಒಯ್ಯು ಅಂತ ಹೇಳಿ ಕೋಣೆಗೆ ಹೋದರು."

ಸುಮ್ಮನೆ ಕುಳಿತ ಸುಬ್ಬರಾವ. ಮುಂದೆ ಏನೂ ಹೇಳಲಿಲ್ಲ. ಸೊಸೆಯ ನಡತೆಯ ಅರ್ಥ ಅವನಿಗೆ ಆಗದಾಯಿತು.

ನನಗೆ ಆಗತಕ್ಕ ಶಿಕ್ಷೆಯ ಸುದ್ದಿ ಅವಳಿಗೂ ಹತ್ತಿರಬೇಕೆ?

ಬಾಬಾಸಾಹೇಬನೇನಾದರೂ ಹೇಳಿದ್ದರೆ........

ಛೇ! ಅವನೇಕೆ ಹೇಳಲು ಹೋದಾನು? ತಂದೆಗೆ ಹೇಳದವ ಹೆಂಡತಿಗೆ—ಇಂತಹ ಅಪ್ರಿಯ ಹೆಂಡತಿಗೆ—ಹೇಳಿಯಾನೆ?

ಆದರೆ ಅವಳು ನನ್ನ ಎದುರಿಗೆ ಬರುವದಿಲ್ಲವಲ್ಲ. ಏನೋ ಒಂದನ್ನು ಮುಚ್ಚಿಕೊಳ್ಳಲು ಯತ್ನಿಸುವಂತೆ ಅವಳ ನಡತೆಯಿದೆ. ಏನದು? ಇದೇ ಇರಬೇಕು. ಮಾವನ ದುಸ್ಥಿತಿಯನ್ನು ಹೇಗೆ ಕಾಣಬೇಕೆಂದು ಒಳಗೊಳಗೇ ನೊಂದುಕೊಳ್ಳುತ್ತಿರಬೇಕು.

ಅಂತೂ ಅವಳಿಗೂ ಗೊತ್ತಾದುದೇ ನಿಜ.

ನನಗೇ ಗೊತ್ತಾಗಲಿಲ್ಲ. ಹುಚ್ಚು ಮುದುಕ ಸರಳ ಮನಸ್ಸಿನಿಂದ ನಡೆಯುಲಿಕ್ಕೆ ಹೋದೆ. ನನ್ನ ಮಗ, ನನ್ನ ಸೊಸೆ, ಎಂದು ಭಾವಿಸಿದೆ.

ಯಾರೂ ಪಿಟ್ಟೆಂದು ನನ್ನ ಮುಂದೆ ಈ ಸುದ್ದಿಯನ್ನು ಆಡಿ ತೋರಿಸಲಿಲ್ಲ. ಈಗ ಕುತ್ತಿಗೆಗೆ ಉರಲು ಬರಲು ಒಬ್ಬೊಬ್ಬರೇ ಮುಖ ತಪ್ಪಿಸುತ್ತಿರುವರು. ಕೃತಘ್ನರು !

" ಚಹ ಆರುವದು ರಾವಸಾಹೇಬ "

ಅಡಿಗೆಯವನ ಮಾತಿನಿಂದ ಸುಬ್ಬರಾವನ ದೃಷ್ಟಿ ಹೊರಗೆ ಹರಿಯಿತು.

" ಮೇಜಿನ ಮೇಲೆ ಇಟ್ಟು ಹೋಗು."

ಆಗಿನ ಮಾತಿನ ಹೊಲಬನ್ನರಿತು, ಆಳು ಮರುನುಡಿಯದೆ ಚಹ ಮೇಜಿನ ಮೇಲಿಟ್ಟು ನಡೆದ.

" ಸುಲೋಚನೆಯನ್ನು ಇತ್ತ ಕಳಿಸು........"

ಸುಬ್ಬರಾವ ಆಜ್ಞಾಪಿಸುವ ದನಿಯಲ್ಲಿ ಹೇಳಿದ. ತಿರುಗಿ ಕಾಗದವನ್ನು ಕೈಯಲ್ಲಿ ತಕ್ಕೊಂಡ. ಮೊದಲಿನಿಂದಲೂ ಓದಲು ಆರಂಭಿಸಿದ. ಆ ಕ್ಷಣದಲ್ಲಿ ಆಳು ಚಹ ಇಟ್ಟು ಹೋಗಿದ್ದಾನೆಂಬ ಅರಿವೂ ಹಾರಿ ಹೋಯಿತು. ಚಹ ಕುಡಿಯಲು ಯತ್ನಿಸಿದ್ದರೂ ಅದು ಅವನ ಗಂಟಲಲ್ಲಿ ಇಳಿಯುತ್ತಿತ್ತೋ ಇಲ್ಲವೋ ಏನೋ.

ಪ್ರಿಯ ಬಾಬಾಸಾಹೇಬ

ಇಷ್ಟು ಉದ್ದವಾಗಿ ಬರೆದ ಕಾಗದವನ್ನು ನೋಡಿ ನೀನು ಬೆರಗಾಗ ಬಹುದು. ಆದರೆ ಇಲ್ಲಿ ಹೇಳಬೇಕಾದ ವಿಷಯ ನಿನಗಾಗಿ ಅಲ್ಲ, ನಿನ್ನ ತಂದೆಗಾಗಿ. ಅವರು ಮಾಡಿದ ಅಪರಾಧ ರಾಷ್ಟ್ರದ ದೃಷ್ಟಿಯಿಂದ ಎಂಥ ಅಕ್ಷಮ್ಯ ಎಂಬುದು ಅವರಿಗೆ ಅರಿವಾಗಬೇಕು. ಅದರಿಂದ ತಪ್ಪದೆ ಅವರಿಗೆ ಇದನ್ನು ಓದಿ ಹೇಳು. ಕಾರಣವನ್ನು ತಿಳಿದು ಶಿಕ್ಷೆಯನ್ನು ಅನುಭವಿಸುವುದರಲ್ಲಿಯೇ ಶಿಕ್ಷೆಯು ಸಾರ್ಥಕತೆಯಿದೆ.

ಅಗಸ್ಟ ಎಂಟರ ಸಾಯಂಕಾಲ " ಭಾರತ ಬಿಟ್ಟು ತೊಲಗಿರಿ ! " ಠರಾವು ಪಾಸಾಯಿತು. ಅದೇ ರಾತ್ರಿ ಮುಖಂಡರ ಬಂಧನವಾಯಿತು. ಇಷ್ಟೇ ಅಲ್ಲ, ಊರೂರುಗಳಲ್ಲಿಯ ಜನರ ನೇತೃವೆನಿಸಿಕೊಳ್ಳುವವರನ್ನು ಬ್ರಿಟಿಷ ಸತ್ತೆ ಬಂಧಿಸಿಟ್ಟಿತು. ಜನತೆಗೆ ಮಾರ್ಗದರ್ಶನ ದೊರೆಯಬಾರದು, ಅವರಿಗೆ ಧೈರ್ಯ ಹೇಳುವವರೂ ಉಳಿಯಬಾರದು ಎಂಬ ಎಚ್ಚರಿಕೆಯನ್ನು ಸರಕಾರ ತಕ್ಕೊಂಡಿತು.

ಆಗ ಎಲ್ಲೆಡೆಗೂ ಪಸರಿಸಿದ ಬಂಧನವ ಬಲೆಯೊಳಗಿಂದ ಜಾರಿದ ಜನರ ಮೇಲೆಯೇ ಸಾಮೂಹಿಕ ಹೋರಾಟದ ಹೊಣೆಯು ಸ್ವಾಭಾವಿಕ ವಾಗಿ ಬಿದ್ದಿತು. ಆದರೂ ಕಾಂಗ್ರೆಸ ವರ್ಕಿಂಗ ಕಮಿಟಿಯು ಸದಸ್ಯರನ್ನು ಬಂಧಿಸಿದ ತರುವಾಯ ದೇಶದ ಜನತೆಗೆ ಮುಖಂಡರು ಬೇಕಾಗಿರಲಿಲ್ಲ.

ಸ್ವಯಂಸ್ಫೂರ್ತಿಯಿಂದಲೇ ಚಳವಳಿಯನ್ನು ಆರಂಭಿಸಿದರು. ಮುಂಬಯಿ, ಮದ್ರಾಸ, ಕಲಕತ್ತೆಗಳಂಥ ನಗರಗಳಲ್ಲಿ ಉಂಟಾದ ಚಟುವ ಟಿಕೆಗಳು ಈ ಸ್ವರೂಪದವೇ ಇದ್ದುವು. ಶಾಲೆ ಕಾಲೇಜುಗಳು ಮುಚ್ಚಿದುವು. ಸಭೆ ನೆರೆದುವು, ಮೆರವಣಿಗೆ ಹೊರಟವು, ಕಾರಖಾನೆಗಳು ಮುಚ್ಚಲ್ಪಟ್ಟವು, ವಾಹನಗಳು ನಿಂತುವು, ಕೆಲವು ಕಡೆಗೆ ಸುಡುವ ಅನಾಹುತಗಳೂ ಒದಗಿ ಬಂದವು. ಇವೆಲ್ಲವುಗಳ ಮೇಲೆ ಸರಕಾರದ ಪ್ರತಿಬಂಧವಿದ್ದೇ ಇದ್ದಿತು. ಅಶ್ರುವಾಯುವನ್ನು ಬಿಡುವ ಅನಾಚಾರ ನಡೆದೇ ಇದ್ದಿತು. ಲಾಠಿಯು ಹೊಡೆತದ ಸ್ಥಳದಲ್ಲಿ ಗೋಳೀಬಾರ ವ್ಯಾಪಿಸಿದ್ದಿತು. ಜನತೆಯ ಭಾವನೆಯು ಯಾವ ರೀತಿಯಲ್ಲಿಯೂ ವ್ಯಕ್ತವಾಗಕೂಡದೆಂದು ಆಳರಸರು ಲಕ್ಷ್ಯ ಪೂರ್ವಕವಾಗಿ ಪ್ರಯತ್ನಿಸುತ್ತಿದ್ದರು.

ಅಖಿಲ ಭಾರತೀಯ ಕಾಂಗ್ರೆಸ ಸಮಿತಿಗಾಗಿ ನೆರೆದ ಮುಖಂಡರು ಮುಂಬಯಿಯಿಂದ ತಮ್ಮ ತಮ್ಮ ಹಳ್ಳಿಗಳಿಗೆ ಮರಳುತ್ತಿದ್ದರು. ಹಾದಿಯ ಲ್ಲಿಯೇ ಅವರ ಬಂಧನವಾಗುತ್ತಲಿದ್ದಿತು. ಮಹಾತ್ಮರ ಬಂಧನದ ಸುದ್ದಿಯೂ ಊರೂರಿಗೆ ಪಸರಿಸಿತು. ಆಗ ನಾಡಿನ ಮೂಲೆಮೂಲೆಗಳಲ್ಲೆಲ್ಲ ಸ್ವಯಂಸ್ಫೂರ್ತ ಚಳವಳಿಗೆ ಆರಂಭವಾಯಿತು. ಯಾವರೀತಿ ಸ್ವಾತಂತ್ರ್ಯ ಸಂಗ್ರಾಮವನ್ನು ಮುಂದರಿಸಬೇಕೆಂಬುದನ್ನು ತಿಳಿಯದ ಜನತೆ—ಮಾರ್ಗದರ್ಶಕರು ಇಲ್ಲದ್ದ ಕ್ಕಾಗಿ—ತಮಗೆ ಗೊತ್ತಿದ್ದ ೧೯೩೦ ನೆಯ ಇಸ್ವಿಯ ಚಳವಳಿಯ ಸೂತ್ರ ವನ್ನೇ ಅವಲಂಬಿಸಿದರು. ಸಭೆ ಮೆರವಣಿಗೆಗಳ ಮೇಲಿನ ಬಂದಿ, ಸ್ಥಾನ ಬದ್ಧತೆ, ಹದ್ದಪಾರ ಮಾಡುವ ಅಸ್ತ್ರಗಳನ್ನು ಸರಕಾರ ಸಿದ್ಧಪಡಿಸಿಯೇ ಇಟ್ಟಿ ದ್ದಿತು. ಆದರೆ ಅವುಗಳ ಉಪಯೋಗ ಒಮ್ಮೆಲೇ ಎಲ್ಲೆಡೆಗೂ ಆಗಲಿಲ್ಲ. ಆದುದರಿಂದ ಹಳ್ಳಿಹಳ್ಳಿಗೂ ಮನೆಮನೆಗೂ ವ್ಯಾಪಿಸಿದ ಪ್ರಚಾರಕಾರ್ಯವು ಹಾಗೆಯೇ ಸಾಗಿಯೇ ಇದ್ದಿತು. ಅಲ್ಲಲ್ಲಿ ಸಭೆ ಪ್ರಭಾತಫೇರಿಗಳು ನಡದೇ ಇದ್ದುವು.

ಎಂದೂ ಬಾಯಿತೆರೆಯದ ಹಳ್ಳಿಯ ಒಕ್ಕಲಿಗರು ವ್ಯಾಖ್ಯಾತರಾದರು. ಊರೂರಿಗೆ ಸಭೆ ಮಾಡಿದರು. ಜನತೆಯನ್ನು ಅಹಿಂಸಾತ್ಮಕ ಹೋರಾಟಕ್ಕೆ ಸಿದ್ಧಗೊಳಿಸಿದರು. ಇದನ್ನೆಲ್ಲ ಸರಕಾರಿ ಅಧಿಕಾರಿಗಳು ಕಣ್ಮುಟ್ಟ ಕಾಣುತ್ತಿದ್ದರು. ಮೇಲಿನವರಿಗೆ ರಿಪೋರ್ಟನ್ನು ಮಾಡುತ್ತಿದ್ದರು. ಜಿಲ್ಹೆಯ ಮುಖಂಡರೆನ್ನಿಸಿಕೊಳ್ಳುವವರೆಲ್ಲ ಜೇಲು ಸೇರಿದ್ದರು. ಮನೆಗೊಬ್ಬ ಮುಖಂಡನಾಗಿದ್ದನೀಗ. ಮೂರುವಾರಗಳು ಕಳೆದುವು.

ಈ ಸಭೆಗಳ ಬಿರುಗಾಳಿ ಬೀಸುತ್ತಲೇ ಇದ್ದಿತು, ಯಾರೂ ತಡೆಯಲಿಲ್ಲ. ತಡೆಯಲಿಕ್ಕೆ ಆಗುತ್ತಿರಲಿಲ್ಲವೇನೊ? ಇಂತಹ ಜನಜಾಗ್ರತಿಯನ್ನು ವಿರಾಟಪುರುಷನನ್ನು—ಸರಕಾರವು ಈ ಮೊದಲೇ ಎಚ್ಚರಗೊಳಿಸಿದ್ದಿತು. ಇನ್ನು ಅವನ ಕಾರ್ಯದ ದಿಸೆಯನ್ನು ನಿರ್ಣಯಿಸುವದೂ ಸರಕಾರದ ಕೈಯಲ್ಲಿಯೇ ಇತ್ತು; ಪರಿಸ್ಥಿತಿಯ ಕೈಯಲ್ಲಿ ಬಂತು.

ಬಾಬಾಸಾಹೇಬ! ಆಗ ನಮ್ಮ ತಲೆಯಲ್ಲಿ ಪ್ರತಿಸರಕಾರ ಸ್ಥಾಪನೆಯ ವಿಚಾರವೂ ಇರಲಿಲ್ಲ. ನಮ್ಮ ಮೇಲೆ ಒಂದು ಸರಕಾರ ಇದ್ದರಲ್ಲವೇ ಪ್ರತಿ ಸರಕಾರದ ನಿರ್ಮಾಣ ಮಾಡುವುದು? ಇದು ನನ್ನೊಬ್ಬನ ಕಲ್ಪನೆಯಲ್ಲ, ಅಖಿಲ ಭಾರತೀಯರ ವಿಚಾರಗಳೇ ಹಾಗಿದ್ದುವು. ಅಂತಲೇ ತಾಲೂಕ ಕಚೇರಿಗಳ ಮೇಲೆ 'ಮೋರ್ಚೆ' ಒಯ್ಯುತ್ತಿದ್ದೆವಲ್ಲ.

ಬ್ರಿಟಿಷ ಸತ್ತೆಯೇ ಆ ಅಹಿಂಸಾತ್ಮಕ ಪ್ರತ್ಯಕ್ಷ ಹೋರಾಟವನ್ನು ಕೊಲೆ ಮಾಡಿ ಅಪ್ರತ್ಯಕ್ಷ ಯುದ್ಧಕ್ಕೆ ಅನುವುಮಾಡಿಕೊಟ್ಟಿತು. ಜನತೆಯಲ್ಲಿ ಈ ಮೊದಲೇ ಜಾಗೃತವಾದ ಸ್ವಾತಂತ್ರ್ಯ ಭಾವನೆಯು ಬೇರೆ ದಿಸೆಯಲ್ಲಿ ಹರಿಯುತೊಡಗಿತು. ಅವರಿಗೆ ಪರಕೀಯ ಸತ್ತೆಯನ್ನು ಅಲ್ಲಗಳೆಯಬೇಕಾಗಿದ್ದಿತು. ಅದರ ಸುರಕ್ಷಿತತೆಯನ್ನು ನಷ್ಟಪಡಿಸಬೇಕಾಗಿದ್ದಿತು. ಅದಕ್ಕಾಗಿ ತಾರು ಕಡಿಯುವದು, ಸರಕಾರಿ ಹಣವನ್ನು ಎತ್ತಿಹಾಕುವದು, ಸೈನ್ಯಕ್ಕೆ ಹೋಗುವ ಕಾಳು ಕಡಿಗಳನ್ನು ತಡೆಯುವದು ಇತ್ಯಾದಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಯಿತು. ಇಂಥ ಕಾರ್ಯರಂಗಕ್ಕಿಳಿದಾಗ ನಾವು ಒಬ್ಬ ಮನುಷ್ಯನ ಜೀವಕ್ಕಾ ನೋವನ್ನುಂಟು ಮಾಡಿಲ್ಲವೆಂಬುದನ್ನು ನಿಮ್ಮ ತಂದೆ—ಸುಬ್ಬರಾವ—ತಿಳಿದುಕೊಳ್ಳಬೇಕಾಗಿತ್ತು.

ನಾವು ಆರಂಭಿಸಿದ ಕಾರ್ಯದಿಂದ ಬ್ರಿಟಿಷ ಸರಕಾರದ ಸಾಮರ್ಥ್ಯದ ಬಗ್ಗೆ ಜನರಲ್ಲಿದ್ದ ಭೀತಿಯು ಅಳಿಯುತ್ತ ಹೋಯಿತು. ಹಾಗೆಯೇ ಬ್ರಿಟಿಷ ಸತ್ತೆಗೆ ಗುಪ್ತವಾಗಿಯೂ ಜನತೆಗೆ ಪ್ರಕಟವಾಗಿಯೂ ಇದ್ದು, ಸತತ ಸಾಮ್ರಾಜ್ಯಶಾಹಿಗೆ ಪೆಟ್ಟುಕೊಡುವ—ಪ್ರತೀಕಾರ ಮಾಡುವ—ಕಾರ್ಯ ಕರ್ತರ ವರ್ಗವೊಂದು ನಿರ್ಮಾಣವಾಯಿತು. ಅದೇ ಪ್ರತಿಸರಕಾರವಾಯಿತು.

ಇಲ್ಲಿಯುವರೆಗೆ ಜಿಲ್ಹೆಯ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಕಾರ್ಯಕರ್ತರ ಗುಂಪುಗಳು ಕೆಲಸ ಮಾಡುತ್ತಿದ್ದುವು. ಅವುಗಳಲ್ಲಿ ಸಂಘ ಟನೆ ಇರಲಿಲ್ಲ. ಕ್ರಮಬದ್ಧವಾದ ಕಾರ್ಯಪದ್ಧತಿಯೂ ಇರಲಿಲ್ಲ. ಈಗ ಎಲ್ಲರೂ ಕೂಡಿ ತಮ್ಮ ಕಾರ್ಯದ ಸಾಮಾನ್ಯ ಸ್ವರೂಪವನ್ನು ನಿಶ್ಚಯಿಸು ವುದು ಒಳ್ಳೆಯದೆಂದು ತೋರಹತ್ತಿತು. ಅದಕ್ಕಾಗಿ ಜೂನ ೧೯೪೩ ರಲ್ಲಿ ಭೂಮಿಗತ ಕಾರ್ಯಕರ್ತರ ಗುಪ್ತ ಸಭೆಯೊಂದನ್ನು ಕರೆಯಲಾಯಿತು. ಅದರಲ್ಲಿ ಸ್ವೀಕೃತವಾದ ಮುಖ್ಯ ಠರಾವುಗಳು ಮೂರು.

ಈಗ ಸ್ಥಾಪಿಸಲಿರುವ ಪ್ರತಿಸರಕಾರವು ಬ್ರಿಟಿಷ ರಾಜ್ಯಯಂತ್ರವನ್ನು ಮುರಿದು ಬಿಡುವಂತಹ ಆಕ್ರಮಣಶೀಲವಾದ ಕಾರ್ಯಕ್ರಮವನ್ನು ಕೂಡಲೇ ಕೈಕೊಳ್ಳಬೇಕು.

ಪರಕೀಯ ಸರಕಾರದ ಗುಪ್ತಪೋಲೀಸರು ಸ್ವಾತಂತ್ರ್ಯವೀರರಿಗೆ ಘಾತುಕರಾಗಿರುವರು. ಅವರು ನಮ್ಮ ಶತ್ರುಗಳು. ಅವರನ್ನು ದಂಡಿಸುವದು.

ಊರ ಗೌಡ ಕುಲಕರ್ಣಿಯರಿಗೆ ಒಕ್ಕಲಿಗರ ಕಡೆಯಿಂದ ಹೆಚ್ಚಿಗೆ ಧಾನ್ಯ ವಸೂಲ ಮಾಡಬೇಡಿರೆಂದು ಅಪ್ಪಣೆವಿಧಿಸುವುದು.

ಅಲ್ಲಿ ಕೂಡಿದ ಎಲ್ಲ ಕಾರ್ಯಕರ್ತರೂ ಒಪ್ಪಿ ಈ ರೀತಿ ಕಾರ್ಯಕ್ರ ಮವನ್ನು ಆರಂಭಿಸಿದೆವು

ಇದರಿಂದ ವಿಶ್ವಾಸ ಘಾತಕಿಗಳಾದ ದೇಶದ್ರೋಹಿಗಳು—ಬ್ರಿಟಿಷ ಸತ್ತೆಯ ತುಣುಕು ರೊಟ್ಟಿಗಾಗಿ ಅವರ ಬಾಗಿಲಲ್ಲಿ ಬಾಲ ಅಲ್ಲಾಡಿಸುತ್ತ ಬೀಳುವ ನಾಯಿಗಳು—ಅಂಜಿ ನಗರ ಸೇರತೊಡಗಿದರು. ಇವಕ್ಕಿಂತ ಮೊದಲೇ ನಿನ್ನ ತಂದೆಯು ದಿವಾಣಸಾಹೇಬರ ಮಗ್ಗುಲಲ್ಲಿ ಬಂದಿದ್ದನಲ್ಲವೆ? ಒಳ್ಳೆಯ ಧೂರ್ತ. ನೀನೂ ಅಷ್ಟೇ ಮುತ್ಸದ್ದಿಯಾಗುವಿಯೋ ?

ನೀನಿನ್ನೂ ತಂದೆಯ ವಾತ್ಸಲ್ಯದ ಪರೆಯನ್ನು ಹರಿದು ಹೊರಗೆ ಬಂದಿಲ್ಲ. ದೇಶಕಾರ್ಯವನ್ನು ತಂದೆಯ ಹಿಂದೆ ಕಳ್ಳತನದಿಂದ ಮಾಡಬೇಕೆ? ಇದೂ ಏನು ಬೀಡಿ ಸಿಗಾರೇಟುಗಳನ್ನು ಸೇದುವಂಥ ಹೀನಕಾರ್ಯವೇ? ಹೆಂಡತಿಯ ಮನೆಗೆ ಹೋಗುವೆನೆಂದು ಹೇಳಿ, ನಮ್ಮ ಜೊತೆಯಲ್ಲಿ ಬರುವದೇಕೆ? ಮಾತೃಭೂಮಿಯ ಕರೆಗೆ ಓಗೊಡುತ್ತಿರುವೆನೆಂದು ಹೇಳು. ಹೇಳಿ ಹೊರಗೆ ಬಾ. ಬಂದು ನಿಮ್ಮ ತಂದೆ ಮಾಡಿದ ಮಹಾಪರಾಧವನ್ನು ಪ್ರತಿಸರಕಾರವು ಕ್ಷಮಿಸುವಂತಹ ಸೇವೆ ಸಲ್ಲಿಸು.

'ಮೀರಜಾಫರ'ನ ವಂಶಜರು ಇನ್ನೂ ಸಾತಾರಾ ಜಿಲ್ಹೆಯಲ್ಲಿದ್ದಾರೆ. ಭೂಮಿಗತರನ್ನು ಹಿಡಿದುಕೊಡಲಿಕ್ಕೆ ಪೋಲೀಸರ ಬೆನ್ನುಹತ್ತಿ ತಿರುಗುತ್ತಿರುವ ಆ ದೂಧಾರಿ ದೇಶಪಾಂಡೆ ಬಾಬುರಾವನ ಗತಿ ಏನಾಯಿತು ಗೊತ್ತಿಲ್ಲವೆ? ಒಂದೆರಡು ಸಲ ಹೇಳಿನೋಡಿತು. ಕೊನೆಗೆ ಎರಡೂ ಕಾಲುಗಳನ್ನೇ ಕಡಿದುಹಾಕಲಿಲ್ಲವೆ? ಗೋಗಾಮದ ಮೂವರು, ಭೂಮಿಗತನೊಬ್ಬನ ಕೊಲೆ ಮಾಡಿದ್ದಕ್ಕೆ ಯಾವ ಪ್ರತಿಫಲ ಅನುಭವಿಸಿದರೆಂಬುದು ನಿನಗೆ ಗೊತ್ತೇಇದೆ. ಅದೇ ಫಲ ನಿನ್ನ ತಂದೆ ತಿನ್ನಬೇಕು. ಮಾಡಿದ್ದನ್ನು ಉಣ್ಣಲಿಕ್ಕೆಬೇಡವೆ?"

'ಅಯ್ಯೋ!' ಎಂದ ಸುಬ್ಬರಾವ. ಇನ್ನೊಂದು ತಾಸಿನಲ್ಲಿ ನಿನ್ನನ್ನು ಗಲ್ಲಿಗೆ ಹಾಕುವೆನೆಂದು ಹೇಳಿ ಬಿಟ್ಟಂತಾಗಿತ್ತವನ ಸ್ಥಿತಿ. ಮೈಮನಗಳೆಲ್ಲ ಬಧಿರವಾದಂತಾಗಿದ್ದುವು. ಯಾವ ವಿಚಾರವೂ ತಲೆಯಲ್ಲಿ ಸ್ಥಿರವಾಗಿ ಉಳಿಯದು. ಯಾರೋ ಬಂದು ಕಾಲು ಹಿಡಿದು ದರದರ ತನ್ನನ್ನು ಎಳೆದಂತೆಯೂ "ವಸಂತನನ್ನು ಹಿಡಿಸಿದ ದೇಶದ್ರೋಹಿ!" ಎಂದು ಕರ್ಕಶವಾಗಿ ನುಡಿದಂತೆಯೂ ಭಾಸವಾಗುವದು. ದಿಂಬಿಗೆ ಆತು ಕುಳಿತಲ್ಲಿಂದ ಸರಿದಾಡಲೂ ಹೆದರತೊಡಗಿದ.

"ಖಳ್ ಖಳ್ ಖಳ್ಳ್ಳ್"

ಅಡಗಿಯ ಮನೆಯಲ್ಲಿ ಏನೋ ಬಿದ್ದ ಸಪ್ಪಳಾಯಿತು.

ಸುಬ್ಬರಾವ ಕುಳಿತಲ್ಲಿಯೇ ಮೂರು ಮೊಳ ಮೇಲೆ ಹಾರಿದ. ಮೈಮೇಲೆ ಹೆದರಿಕೆಯಿಂದ ಮುಳ್ಳುಗಳೆದ್ದುವು. ತುಟಿಗಳು ಒಣಗಿದುವು.

"ಬಾಬಾಸಾಹೇಬ! ಬಾಬಾಸಾಹೇಬ!"

ಎಂದು ಸುಬ್ಬರಾವನ ಬಾಯಿಂದ ಉದ್ಗಾರ ಹೊರಟಿತು, ಮುಳುಗು ವವ ಬೆಂಡಿಗೂ ತೆಕಿಮುಕ್ಕಿ ಹಾಯುವಂತೆ.

"ಧಡಾರ್"

ಕೋಣೆಯ ಬಾಗಿಲುತೆರೆದು, ಗೋಡೆಗೆ ಬಡೆದು ಸಪ್ಪಳಾಯಿತು, ಸುಬ್ಬರಾವ ಅಂಜಿ ಗಾದಿಯ ಮೇಲೆ ಹೊರಳಿದ, ಬಾಗಿಲ ಕಡೆಗೆ ಬೆದರು ಗಣ್ಣುಗಳಿಂದ ಸಿಟ್ಟಿಸತೊಡಗಿದ, ರೆಪ್ಪೆಯೊಡೆಯಲೂ ಹಿಂಜರಿಯುತಲಿದ್ದ.

ಸುಲೋಚನೆ ಅಂಜುತ್ತಂಜುತ್ತ ಒಳಗೆ ಬಂದಳು ಮಾವನು ಆರ್ತ ಸ್ವರದಿಂದ ಮಗನನ್ನು ಕೂಗಿದ್ದನ್ನು ಕೇಳಿ ಧಾವಿಸಿ ಬಂದಿದ್ದಳಾಕೆ. ಬಾಗಿಲ ಒಳ ಚಿಲಕವಿರಬೇಕೆಂದು ಜೋರಿನಿಂದ ತಟ್ಟಿದ್ದಕ್ಕೆ—ಅವಸರದಲ್ಲಿ ಬಾದು ಹಾಯ್ದುದಕ್ಕೆ ಹೀಗೆ ಸಪ್ಪಳವಾಯಿತು. ಮಾವ ಏನನ್ನುವನೋ ಎಂದು ಹೆದರಿ ಸುಲೋಚನೆ ಒಳಗೆ ಬಂದರೆ ಒಳಗೆ ಯಾರು ಬರುವರೋ ಎಂದು ಹೆದರಿ ಕುಳಿತ ಪ್ರಾಣಿ ಸುಬ್ಬರಾವ. ಮಾವನ ಸ್ಥಿತಿಯನ್ನು ಕಂಡು ಕಕ್ಕಾ ವಿಕ್ಕಿಯಾದಳು, ಸುಲೋಚನೆ. ಪತಿಯ ಚಿಂತೆಯಿಂದ ಬೆಂದ ಮುಖ ಈ ಪ್ರಸಂಗದಿಂದ ವಿಚಿತ್ರ ವಿಕಾರವನ್ನು ತಳೆಯಿತು. ಈ ತಂದೆ ಮಕ್ಕಳ ನಡತೆಯ ರಹಸ್ಯವೇ ಅವಳಿಗೆ ಹೊಳೆಯದೆ ಹೋಯಿತು.

"ಅವರು ಹಾಗೇಕೆ ಹೋದರು? ಇವನು ಹೀಗೇಕೆ ಮಾಡುತ್ತಿರುವ?" ಎಂದು ತನ್ನನ್ನೇ ತಾನು ಕೇಳಿಕೊಳ್ಳ ತೊಡಗಿದಳು.

"ಬಹಳ ಜನ ಬಂದಿದೆಯೇ ಹೊರಗೆ?"

ಸುಬ್ಬರಾವನ ಅದರುವ ಹೃದಯದಿಂದ ಮಾತು ಹೊರಬಿತ್ತು.

"ಆಂ!" ಎಂದಳು ಸುಲೋಚನೆ.

"ನೀವು ಗಂಡ ಹೆಂಡತಿ ಮಾತಾಡಿಕೊಂಡಂತಿದೆ, ಈ ಮುದುಕನ ಫಜೀತಿ ಮಾಡಬೇಕೆಂದು."

ಯಾರನ್ನೂ ನಂಬದ ಸುಬ್ಬರಾವನ ಮನಸ್ಸು ಹೀಗೆ ಆಡಿಸಿತು.

ಸುಲೋಚನೆಗೆ ಏನು ಹೇಳಬೇಕೆಂಬುದು ತಿಳಿಯದಾಯಿತು.

"ಅವರು ಇನ್ನೂ ಬಂದಿಲ್ಲ."

ತಡವರಿಸುತ್ತ ನುಡಿದಳು, ಸುಲೋಚನೆ.

" ಈಗ ಬರುವರೇನೊ ! ಬರುವ ಹೊತ್ತಾಯಿತು ! ಅವರು ಕೊಟ್ಟ ಅವಧಿ ತೀರುತ್ತ ಬಂತು. ಬಂತು. ಬಂದೇಬಿಡುವರು. ಅಯ್ಯೋ ! ಏನು ಮಾಡಲಿ ಸುಲಾ ? ಅವರು ಬಂದರೆ ನನ್ನ ಗತಿ ಏನಾದೀತು ? "

ಸುಲೋಚನೆ ಬೆಪ್ಪಾಗಿ ನಿಂತಳು. ಮಾವನ ಮಾತಿನ ಅರ್ಥವೇ ಹೊಳೆಯುದಂತಾಯಿತವಳಿಗೆ. ರಾತ್ರಿ ತಾದೆ ಮಕ್ಕಳಿಗೆ ಏನಾದರೂ ಜಗಳ ನಡೆದಿರಬೇಕೆ ? ಅದಕ್ಕಾಗಿಯೇ ಅವರು ಮನೆಬಿಟ್ಟು ಹೋದರೆ ? ಅವರು ಹೀಗೆ ಹೋಗಲಿಕ್ಕೆ ನಾನೇನು ಕಾರಣವಾಗಿರಲಿಕ್ಕಿಲ್ಲವಲ್ಲ. ಅಯ್ಯೋ ! ನಾನೇ ಕಾರಣವಾಗಿದ್ದರೆ ಈ ಮುದುಕ ಸುಮ್ಮನಿರುತ್ತಿದ್ದನೇ ? ಇಷ್ಟರಲ್ಲಿಯೇ ನನ್ನನ್ನು ಹರಿದು ತಿಂದು ಬಿಡುತ್ತಿದ್ದ. ಆದರೆ ಅವರು ತಿರುಗಿ ಬಂದರೆ ಇವನಿಗೆ ಹೆದರಿಕೆ ಏಕೆ ? ಅಂಥದೇನು ನಡೆಯಿತು

ಯಾವುದೂ ಹೊಳೆಯದ ಹುಚ್ಚಿಯಂತಾದಳು ಸುಲೋಚನೆ. ಮಾವನ ಮುಖವನ್ನೇ ನಿರುಕಿಸಹತ್ತಿದಳು.

" ಸದಾನಂದನನ್ನಾದರೂ ಕರಸತೀಯಾ ? "

ಸುಬ್ಬರಾವ ಅಂಗಲಾಚಿದ; ಸುಲೋಚನೆ ಸುಮ್ಮನಿದ್ದಳು.

" ಆ ರಾಕ್ಷಸರು ಬಂದಾಗ ನಡುವೆ ತಿಳುವಳಿಕೆ ಹೇಳಲು ಒಬ್ಬನಾದರೂ ಇದ್ದರೆ ನೆಟ್ಟಗಲ್ಲವೆ ? "

" ಅವನಿಗೇ ತಿಳವಳಿಕೆ ಇದ್ದರೆ ಇನ್ನೊಬ್ಬರಿಗೆ ಹೇಳಬೇಕಲ್ಲವೆ ? ಅಷ್ಟು ಬುದ್ಧಿ ಇದ್ದಿದ್ದರೆ ಹೆಂಡತಿಯನ್ನು ಬಿಟ್ಟು ಹೀಗೆ ಮಂಕನಂತೆ ಕುಳಿತಿರುತ್ತಿದ್ದನೆ ? ನೋಡನೋಡುತ್ತ ಸುಮಿತ್ರೆ ಅವರ ಕೂಡ ಸಲಿಗೆ ಬೆಳೆಯಿಸಿದಳು. ಮುಂದೆ ಏನಾಯಿತೆಂಬುದು ಈ ಹುಚ್ಚನಿಗೆ ತಿಳಿಯಲಿಲ್ಲ. ಅವನ ತಿಳಗೇಡಿತನ ನನ್ನ ಬಾಳನ್ನು ಹಾಳಿಗೆ ಹಚ್ಚಿತು. ಇವರು ಅಂಥವರನ್ನು ಕರಿ ಅನ್ನುವರು. ಏತಕ್ಕೊ...."

ಎಂದು ಮನದಲ್ಲಿಯೇ ಅಂದುಕೊಳ್ಳುತ್ತ ಸುಲೋಚನೆ ಹೊರಗೆ ನಡೆದಳು. ಸುಬ್ಬರಾವ ನಿರಾಶ್ರಿತರಂತೆ ತಿರುಗಿ ಕೂಗಿದ :

" ಸುಲೂ ಸುಲೂ ಏಯ್ ಸುಲೂ ! "

ತಿರುಗಿ ಬಂದಳು ಸುಲೋಚನೆ. ಸುಬ್ಬರಾವ ಒಂದೇ ಉಸುರಿನಲ್ಲಿ ಮಾತನ್ನು ಮುಗಿಸುವ ರೀತಿಯಲ್ಲಿ ಹೇಳಲು ಆರಂಭಿಸಿದ.

“ ದಿವಾಣ ಸಾಹೇಬರಿಗೆ ಫೋನ ಮಾಡತಿದ್ದೆ. ಪೋಲೀಸ ಪಾರ್ಟಿಯನ್ನು ಕರಸತಿದ್ದೆ. ಆದರೆ ಮುಂದೆ ನನ್ನ ಮನೆತನದ ಗತಿ ಏನಾಗ್ತಿತ್ತು ? ನೋಡು ಮಗಳೇ! ಬಾಬಾಸಾಹೇಬನಿಗೆ ಎಂಥ ಭಯಂಕರ ಶಿಕ್ಷೆಯಾದೀತು ? ನನ್ನ ರಕ್ಷಣೆಗೆ ಪೋಲೀಸರನ್ನು ಕರೆಯಿಸಿ ಮಗನಿಗೆ ಶಿಕ್ಷೆವಿಧಿಸಲೇ? ಎಂದಿಗೂ ಆಗದು ನನ್ನಿಂದ. ಎಂಥ ಇರುಕಿನಲ್ಲಿ ಸಿಕ್ಕು ಬಿದ್ದೆ ನೋಡು ನಾನು! ಅವನು ಎಲ್ಲಿಯೇ ಇರಲಿ. ಯಾರೋಡನೆಯೇ ಇರಲಿ. ಸುಖವಾಗಿರಲಿ. ಇಷ್ಟೇ ಈ ಮುದುಕನ ಇಚ್ಛೆ, ಮಗನಿಗಾಗಿ ಕಷ್ಟ ಅನುಭವಿಸುವದು ತಂದೆಯಾದವನ ಧರ್ಮವಲ್ಲವೆ ? ಇದು ನೋಡು ಸುಲಾ; ಆ ವಸಂತ ಹೇಗೆ ಬರೆದಿರುವನು ?

ಎಂದು ಕಾಗದವನ್ನು ಕೈಯಲ್ಲಿ ತಕ್ಕೊಂಡು ಮುಂದೆ ಓದಹತ್ತಿದ. ಇನ್ನು ತನ್ನಲ್ಲಿ ಮುಚ್ಚಿಡುವ ಸಂಗತಿ ಏನೂ ಇಲ್ಲ. ಎಂಬಂತಹ ಭಾವವಿದ್ದಿತು, ಆಗ ಸುಬ್ಬರಾವನ ದನಿಯಲ್ಲಿ.

“ ಬಾಬಾಸಾಹೇಬ, ೧೯೪೨ ಅಗಸ್ಟ ಮೂರನೆಯ ತಾರೀಖಿನ ಕಾರ್ಯಕರ್ತರ ಸಭೆಗೆ ನೀನೂ ಬಂದಿದ್ದಿಯಷ್ಟೇ. ಅದೇ ಪ್ರತಿಸರಕಾರದ ಎರಡನೆಯ ಸಭೆಯು. ಅದರಲ್ಲಿ ನಮ್ಮ ಕಾರ್ಯ ಇನ್ನೂ ವಿಧಾಯಕ ಹಾಗೂ ಆಕ್ರಮಣ ಸ್ವರೂಪದ್ದಿರಬೇಕೆಂದು ನಿರ್ಣಯಿಸಲಾದುದು ನಿನಗೂ ಗೊತ್ತಿದೆ. ಇದಕ್ಕೂ ಮೊದಲು ದೇಶಮುಖನ ಕಾಲು ಕಡಿದುದರಿಂದ ಬ್ರಿಟಿಷ ಹಸ್ತಕರಿಗೆ ನಮ್ಮ ಹೆದರಿಕೆ ಚನ್ನಾಗಿಯೇ ಕುಳಿತಿದ್ದಿತು. ಆದುದರಿಂದ ನಮ್ಮ ಗೊಡವೆಗೆ ಯಾರೂ ಬರುತ್ತಿರಲಿಲ್ಲ. ಪೋಲೀಸರು ಹಿಂಡುಗಟ್ಟಿಕೊಂಡು ಹಳ್ಳಿಹಳ್ಳಿ ತಿರುಗಿ ತೆರವುಗೈಯಿಂದ ಮರಳುತ್ತಿದ್ದರು. ಒಬ್ಬ ಕಾರ್ಯಕರ್ತನ ಸುಳಿವೂ ಹತ್ತುತ್ತಿದ್ದಿಲ್ಲ. ಜನತೆ ಸರಕಾರಕ್ಕೆ ಧಾನ್ಯಕೊಡುವುದರಲ್ಲಿಯೂ ನಮ್ಮ ತತ್ವವನ್ನು ಅನುಸರಿಸಿದರು. ಸರಕಾರಕ್ಕೆ ಸಾಕಷ್ಟು ಧಾನ್ಯ ಬರದಾಯಿತು. ಅವರು ಕೆರಳಿ ಅಧಿಕಾರಿಗಳ ಮೇಲೆ ಹುಕುಮಿನ ಬಾಣಬಿಡತೊಡಗಿದರು. ಅಧಿಕಾರಿಗಳು ನೌಕರಿ ಕಾಯ್ದುಕೊಳ್ಳುವದಕ್ಕಾಗಿ ಹಳ್ಳಿಗರ ಮೇಲೆ ಅನ್ಯಾಯ ನಡೆಯಿಸಿದರು. ಇದರಿಂದ ಸ್ವಾಭಾವಿಕವಾಗಿಯೇ ಗ್ರಾಮಸ್ಥರ ಒಲವು ಪ್ರತಿಸರಕಾರದ ಕಡೆಗೆ ಒಲಿಯಿತು. ಅವರು ನಮಗೆ ನೆರವಾಗಿ ನಿಂತರು. ಹಾಗೆ ಅವರ ನೆರವಿಲ್ಲದಿದ್ದರೆ ಆ ನಲವಡಿ ಖಾನಾ

ಪುರಗಳ ನಡುವೆ ಭುವನೇಶ್ವರಿ ಮಂದಿರದಲ್ಲಿ ಸಿಕ್ಕಾಗ ಪೋಲೀಸ ಪಾರ್ಟಿಯ ಪವಡೆಯೊಳಗಿಂದ ನಾವು ಪಾರಾಗುತ್ತಿದ್ದೆವೆ? ಆ ಪ್ರಸಂಗ ಎಷ್ಟು ರೋಮಾಂಚಕಾರಿಯಾದುದು? ಅಂದೇ ನಾವು ಸಿಕ್ಕಿಬಿದ್ದಿದ್ದರೆ ನಿನ್ನ ತಂದೆಯ ಮೇಲೆ ಇಂಥ ಪ್ರಸಂಗ ಬರುತ್ತಿರಲಿಲ್ಲವೇನೊ! ಆದರೆ ನೀನು ಮಾತ್ರ ಸುಲೋಚನೆಯ ಮನೆಯನ್ನು ಸೇರದೆ ಸೆರೆಮನೆಯನ್ನು ಸೇರಬೇಕಾಗುತ್ತಿದ್ದಿತು!

ಅದೊಂದು ಸಂಧಿಕಾಲ. ಶಾಂತತೆಯ ಹೆಸರಿನಲ್ಲಿ ನಡೆದ ಅನ್ಯಾಯ ಅತ್ಯಾಚಾರಗಳಿಂದ ಜನತೆಯಲ್ಲಿಯ ನೈತಿಕ ನಿಷ್ಠೆ ಸ್ಪಷ್ಟವಾಗುವ ಕಾಲ. ಆದರೆ ಅಗಸ್ಟ ಎಂಟರ ಠರಾವು—ಭಾರತ ಬಿಟ್ಟುತೊಲಗಿರಿ!-ಜನರ ಮನಸ್ಸಿನಲ್ಲಿ ಧುಮಧುಮಿಸುತ್ತಿದ್ದಿತು. ಅದು ಆತ್ಮಸಮರ್ಪಣೆಯ ಸ್ಥಿತಿಗೂ ಇಳಿದಿದ್ದಿತು. ಬರಬರುತ್ತ ಅದು ಪ್ರತಿಸ್ಪರ್ಧಿಯ ನಡತೆಯ ಮೂಲಕ ಪರಿಸ್ಥಿತಿಯ ವಿರುದ್ಧ ಹೋರಾಡಲೂ ಸಿದ್ಧವಾಗಿದೆ. ಆಗ ಸಾಮಾನ್ಯ ಜನತೆಯು ತನ್ನಷ್ಟಕ್ಕೆ ತಾನೇ ಸ್ವಾವಲಂಬಿಯಾಗುವದು, ಸಂಘಟನೆಯನ್ನು ಬೆಳೆಯಿಸುವುದು.

ಇಲ್ಲಿಯವರೆಗೆ ಬ್ರಿಟಿಷ ಸರಕಾರದ ರಾಜ್ಯಯಂತ್ರವನ್ನು ಕೊಂಕಿಸುವದೊಂದೇ ಪ್ರತಿಸರಕಾರದ ಉದ್ದೇಶವಾಗಿದ್ದಿತು. ಈಗ ಅದರ ಚಟುವಟಿಕೆಗಳಿಗೆ ಪ್ರತೀಕಾರಗೈಯುವುದೂ ನಮ್ಮ ಧ್ಯೇಯದಲ್ಲಿ ಒಂದಾಗಿ ನಿಂತಿತು. ಅದರಿಂದ ಪ್ರತಿಯೊಂದು ಹಳ್ಳಿಯೂ ಪರಕೀಯರ ಆಕ್ರಮಣವನ್ನು ವಿರೋಧಿಸಲಿಕ್ಕೂ ಲಂಚಗುಳಿತನವನ್ನು ಹೋಗಲಾಡಿಸುವದಕ್ಕೂ ಕೇಂದ್ರಸ್ಥಾನವಾಗಬೇಕಾಯಿತು. ಪ್ರತಿಸರಕಾರಕ್ಕೆ ಇಂಥ ಸ್ವಾಯತ್ ಸತ್ತೆಯ ಹಳ್ಳಿಗಳ ತಳಹದಿ ನಿರ್ಮಾಣವಾಯಿತು.

ಮನೆಕಟ್ಟುವ ಮೊದಲು ಆ ಸ್ಥಳದ ಕಸ-ಕೊಳೆಗಳನ್ನು ತೆಗೆದುಹಾಕಬೇಕಲ್ಲ. ಸ್ವಾಯತ್ ಹಳ್ಳಿಗಳನ್ನು ಸೃಜಿಸುವ ಮೊದಲು ಹಳ್ಳಿಗರಿಗೆ ಕಷ್ಟಕೊಡುತ್ತಿರುವ ಗ್ರಾಮ ಕೀಟಕಗಳನ್ನು ದರೋಡೆಖೋರರನ್ನು ನಿರ್ಮೂಲಗೊಳಿಸಬೇಕಾಯಿತು.

ಸುನಂದಾ ನಿನಗೊಂದು ದೃಷ್ಟಿಯಿಂದ ತಾಯಿಯಾಗಬೇಕಲ್ಲವೆ ಬಾಬಾಸಾಹೇಬ? ಈ ಮಾತನ್ನು ನಿನ್ನ ತಂದೆ ಒಪ್ಪಲಿಕ್ಕಿಲ್ಲ; ನೀನಾದರೂ

ಒಪ್ಪು. ಆಸ್ತಿಯ ಸಂಪಾದನೆಗಾಗಿ ಪ್ರಯತ್ನಿಸಿ ಸುಬ್ಬರಾವನ ಕುಟಿಲ ತಂತ್ರದ ಮುಂದೆ ಕೈಯೂರಬೇಕಾಯಿತವಳಿಗೆ. ಆದರೆ ಹೆಣ್ಣಿನ ನಿರ್ಧಾರ ಬಹಳ ಕೆಟ್ಟ ಬಾಬಾಸಾಹೇಬ! ಹೇಗಾದರೂ ಮಾಡಿ ತನ್ನ ಕಾರ್ಯವನ್ನು ಕೈಗೂಡಿಸಿಕೊಂಡೇ ಬಿಡುವುದು. ಒಲಿದರೆ ನಾರಿ, ಮುನಿದರೆ ಮಾರಿ ಅವಳು. ಸುಬ್ಬರಾವನ ಮುಂದೆ ಕ್ರಮಪ್ರಾಪ್ತ ಉಪಾಯ ಸಾಗದಾಗಲು ಹಿಂಸೆಗೇಸಿ ದಳಾಕೆ. ಆಗ ಮಹಾದು ರಾಮೋಶಿ, ಮಾರುತಿ ಶೇಣೇಕರ, ಬಾವು ಧನಗರ, ಶಿವ್ಯಾ ಮಾಂಗ ಮೊದಲಾದ ದರೋಡೆಖೋರರ ನೆರವನ್ನು ಬಯಸಿದಳು ಸುನಂದ! ಈ ಮಾತನ್ನು ಇಂದು ನಿನ್ನ ಮುಂದೆ ಬಿಚ್ಚಿಹೇಳಬೇಕಾಗಿದೆ. ಪ್ರತಿಸರಕಾರವೆ ಹೆದರಿಕೆಯನ್ನು ಮುಂದೆ ಮಾಡಿ ಸುಬ್ಬರಾವ ಹಳ್ಳಿಯನ್ನು ಬಿಟ್ಟು ನಗರ ಸೇರಿದ, ಸಂಸ್ಥಾನಿಕನ ದಿವಾಣನ ಆಶ್ರಯಕ್ಕೆ ಬಂದುನಿಂತ. ಆದರೆ ನಿಜವಾದ ಹೆದರಿಕೆ ನಮ್ಮದಲ್ಲ, ಬಾಬಾಸಾಹೇಬ. ಆ ಪುಂಡರ ಹೆದರಿಕೆ ನಿಮ್ಮ ತಂದೆಗೆ, ಈ ದರೋಡೆಖೋರರು ಆಗಸ್ಟ ಕ್ರಾಂತಿಯಿಂದ ಈಚಿನವರಲ್ಲ. ಮೊದಲಿನಿಂದಲೂ ಸಾತಾರಾ ಜಿಲ್ಹೆಯಲ್ಲಿ ಪ್ರಸಿದ್ಧರಾದವರು. ಕಳ್ಳರ ತಂಡಗಳನ್ನು ಕಟ್ಟಿಕೊಂಡವರು.

ಇವರಿಗೆ ಪೋಲೀಸರ ಆಶ್ರಯವೂ ಇದೆ ಎಂದು ಜನರ ತರ್ಕ. ಜಿಲ್ಹೆಯೊಳಗಿನ ಕೆಲ ಪ್ರತಿಷ್ಠಿತರ ಬೆಂಬಲ ಇವರಿಗಿದ್ದದ್ದೂ ನಮಗೆ ತಿಳಿದ ವಿಷಯ. ಬಾಬಾಸಾಹೇಬ ಏನು ಹೇಳಲಿ ? ಈ ಪುಂಡರಿಂದ ನಿನ್ನ ಕೊಲೆ ಮಾಡಿಸುವ ಹೊಂಚು ಹಾಕಿದ್ದಳು ಸುನಂದೆ. ಆ ಸಂಕಟದೊಳಗಿಂದ ಇಲ್ಲಿಯುವರೆಗೆ ನಿನ್ನನ್ನು ರಕ್ಷಿಸಿದ ಶ್ರೇಯ ಪ್ರತಿಸರಕಾರಕ್ಕಿದೆ. ಹೀಗೆ ಒಂದೋ ಎರಡೋ ಹಲವು ಕಾರ್ಯಗಳನ್ನು ಪ್ರತಿ ಸರಕಾರ ಜನತೆಗೆ ಗೊತ್ತಿಲ್ಲದೆ ಅವರ ಹಿತವನ್ನು ಸಾಧಿಸಿದೆ. ಆದರೆ ಇನ್ನೂ ನಿನ್ನ ತಾಯಿಯಂತಹರನ್ನು ಜೀವದಿಂದ ಇಡುವದೆಂದರೆ ನಮಗೇ ಲಜ್ಜಾಸ್ಪದ. ಹೌದಲ್ಲ? ನೀನೇ ವಿಚಾರಿಸು.

ಚರೇಗಾಂವದ ದರೋಡೆಯನ್ನು ನಾನಾ ಪಾಟೀಲನೇ ಹಾಕಿರುವನೆಂದು ಪೋಲೀಸರು ಎಲ್ಲೆಡೆಗೂ ಸಾರುತ್ತಿದ್ದರು. ಕೊಲ್ಹಾಪುರದ ಕೋರ್ಟು ಚಹಾನು ಕುಂಬಾರನಿಗೂ ಅವನ ಜತೆಯವರಿಗೂ ವಿಧಿಸಿದ ಶಿಕ್ಷೆಯಿಂದಲೂ

ಕೊಟ್ಟ ನಿರ್ಣಯದಿಂದಲೂ ಈ ಪ್ರಚಾರ ಎಂಥ ಅಪಪ್ರಚಾರವೆಂಬುದು ಸ್ಪಷ್ಟವಾಯಿತು. ಇಷ್ಟೇ ಅಲ್ಲ, ಯಾವ ದರೋಡೆಗಳಿಗೂ ಕಾಂಗ್ರೇಸ ಕಾರ್ಯಕರ್ತರ ಸಂಬಂಧವಿಲ್ಲ ಎಂಬುದು ಸಿದ್ಧವಾಯಿತು.

ಈ ಪ್ರಸಂಗ ಜನತೆಯ ಮೇಲೆ ಅತ್ಯಂತ ಪರಿಣಾಮವನ್ನುಂಟು ಮಾಡಿದೆ. ಪ್ರತಿ ಸರಕಾರದ ವಿಷಯಕ್ಕೆ ಅವರಲ್ಲಿ ಆದರ ಇಮ್ಮಡಿಸಿದೆ. ಈ ಕೊಳೆ–ಸುಲಿಗೆಗಳಿಂದ ನಮ್ಮನ್ನು ಉಳಿಸುವ ಸಮರ್ಥರೆಂದರೆ ನಮ್ಮ ಕಾರ್ಯ ಕರ್ತರೇ ಎಂಬ ನಂಬುಗೆ ಬೆಳೆದಿದೆ. ನಮ್ಮನ್ನು ರಕ್ಷಿಸುವಂತಹರು ನಮ್ಮ ಅಣ್ಣತಮ್ಮಂದಿರು, ಅವರೇ ನಮ್ಮ ಮುಂದಾಳುಗಳು. ಅವರೊಡನೆ ಸಹಕರಿಸುವದೇ ನಮ್ಮೆಲ್ಲರ ಧರ್ಮವೆಂದು ಜನ ಭಾವಿಸಿದೆ.

ಆದ ಮೇಲೆ ಕೇಳುವದೇನು ? ಸಮಾಜ ಕಂಟಕರನ್ನು ನಷ್ಟಗೊಳಿಸಲು ಬಹಳ ವೇಳೆ ಹಿಡಿಯುವದಿಲ್ಲ. ಕಾಂಗ್ರೇಸ ಕಾರ್ಯಕರ್ತರ ಚಲನ ವಲನವನ್ನು ಸರಕಾರಕ್ಕೆ ತಿಳಿಸಿ, ಬಹುಮಾನ ಪಡೆಯುವ ಬಹಾದ್ದೂರರನ್ನು ಗೊತ್ತು ಹಚ್ಚಿ ಅವರಿಗೆ ಶಾರೀರಿಕ ಶಿಕ್ಷೆ ವಿಧಿಸಲಾಗುವದು. ಅವರು ಸಂಪಾದಿಸಿದ ಬಕ್ಷೀಸಿನ ಎರಡರಷ್ಟು ದಂಡವನ್ನು ವಸೂಲ ಮಾಡಲಾಗುವದು. ಹಲವು ಜನ ಗೌಡರಿಗೆ ಊರು ಬಿಟ್ಟು ಹೋಗಲು ತಿಳಿಸಿದೆ. ದೇವರಾಷ್ಟ್ರದ ಪಾಟೀಲನು ಪ್ರತಿ ಸರಕಾರದ ಆಜ್ಞೆಯ ಮೇರೆಗೇನೇ ಹಳ್ಳಿಯನ್ನು ಬಿಟ್ಟರು. ಪ್ರತಿ ಸರಕಾರದ ಶಿಕ್ಷಾವಿಧಿ ಸ್ವಲ್ಪ ಕಠಿಣತರವಾದುದೆನಿಸುವುದೇನೋ ನಿಜ. ಆದರೆ ನಮ್ಮ ಸಾಮರ್ಥ್ಯದ ಕಲ್ಪನೆಯು ಅಧಿಕಾರಿಗಳಿಗೂ ಅಪರಾಧಿಗಳಿಗೂ ಬರುವವರೆಗೆ ನಮ್ಮ ಶಿಕ್ಷಾ ಕ್ರಮವನ್ನು ಸೌಮ್ಯಗೊಳಿಸಲು ಸಾಧ್ಯವಾಗುವದಿಲ್ಲ. ಇದಕ್ಕೆ ನೀನೇನನ್ನುವಿ ?

\+ + + +

" ಹೋಗರಿ ಅಲ್ಲ, ಆ ಬಿಳಿ ಟೊಪ್ಪಿಗೆಯುವರ ಹತ್ತರ ! "

ಕಳವು ಸುಲಿಗೆಗಳಿಂದ ಕಂಗಾಲರಾಗಿ ಸರಕಾರಿ ಅಧಿಕಾರಿಗಳ ಹತ್ತರ ಹೇಳಿಕೊಳ್ಳಲಿಕ್ಕೆ ಹೋದ ಜನತೆಗೆ ಸಿಗುತ್ತಿರುವ ಉತ್ತರವಿದು ! ಪಾಪ ಜನರು ಏನು ಮಾಡಿಯಾರು ? ಇತ್ತ ಪುಂಡರ ಕಾಟ, ಅತ್ತ ಅಧಿಕಾರಿಗಳ ತಾಪ ! ಪೋಲೀಸ ಕಚೇರಿಗೆ ಹೋದರೆ ನಿರಪರಾಧಿಗಳಿಗೆ ನ್ಯಾಯ ದೊರೆಯುವದೆ ಹೊಡೆತಗಳೇ ಬೀಳಹತ್ತಿದುವು.

ಆ ಮೇಲೆ ಕೇಳುವದೇನು ಪುಂಡರ ಚಲ್ಲಾಟ?

“ಕಾಮೇರಿ ಕೋರ್ಟ” “ವಾಘೋಲಿ ಕೋರ್ಟ” ಎಂಬ ಎರಡು ಕೋರ್ಟುಗಳನ್ನು ಸ್ಥಾಪಿಸಿದ್ದಾರೆ. ಅವೂ ಸಾತಾರಾ ಜಿಲ್ಹೆಯ ಗುಡ್ಡಗಾಡು ಪ್ರದೇಶಗಳಲ್ಲಿ. ಅಲ್ಲಿ ಕುಳಿತು ಹುಕುಮು ಹೊರಡಿಸುವರು. ರಾವಣ ರಾಜ್ಯದ ಅಪ್ಪಣೆಗಳವು.

“ನೀನು ಇಷ್ಟು ಸಾವಿರ ರೂಪಾಯಿಗಳನ್ನು ಇಂಥ ಹೊತ್ತಿನಲ್ಲಿ ಅಂಥಲ್ಲಿ ತಂದು ಕೊಡಬೇಕು.”

ಆ ಹುಕುಮುಗಳ ಒಕ್ಕಣೆಯಿದು! ಇದಕ್ಕೆ ಪೋಲೀಸರ ಸಹಕಾರ ಕೇಳುವದೇನು?

ಜಿಲ್ಹೆಯ ತುಂಬೆಲ್ಲ ಈ ಸತ್ರ ಆರಂಭವಾಗಿದೆ. ಸಿಕ್ಕಸಿಕ್ಕ ಸಿರಿವಂತರಿಗೆ ಈ ಆರ್ಡರುಗಳು ಹೋಗಹತ್ತಿವೆ. ಅವರು ಯಾರಲ್ಲಿ ಮೊರೆ ಇಡಬೇಕು ಪಾಪ? ಇದರಿಂದ ಹಳ್ಳಿಗರಿಗೆ ಬಹಳ ಕಷ್ಟವಾಗಿದೆ. ಯಾರ ಬಾಳಿನಲ್ಲಿಯೂ ಕ್ಷೇಮವೆಂಬುದು ಇಲ್ಲದಂತಾಗಿದೆ. ನಾನೀಗ ಜೇಲಿನಲ್ಲಿ. ಹೊರಗೆ ಇದ್ದ ನೀನಾದರೂ ಇತ್ತ ಲಕ್ಷ್ಯ ಹೆಚ್ಚಾಗಿ ಹಾಕು, ಬಾಬಾಸಾಹೇಬ.

ಪ್ರತಿ ಸರಕಾರವು ಇದಿಷ್ಟನ್ನೇ ಮಾಡಿ ಸುಮ್ಮನೆ ಕೂಡುವದಕ್ಕಾಗಿ ಸ್ಥಾಪನೆಯಾಗಿಲ್ಲ. ಅನೇಕ ವಿಧಾಯಕ ಕಾರ್ಯಕ್ರಮವನ್ನು ಅದು ಕೈಕೊಳ್ಳಬೇಕು. ಅಲ್ಲಲ್ಲಿ ಮದ್ಯಪಾನ ನಿರೋಧ ಮಾಡಬೇಕು. ಪಲೂಸ, ಢೋಗಾಂವ, ಕುಂಡಲ, ವಿಟೆ ಮೊದಲಾದ ಭಾಗಗಳಲ್ಲಿ ಹತ್ತು ಸಾವಿರ ರೂಪಾಯಿಗಳಿಗೆ ಹೋಗುವ ಶೆರೆಯ ಲಿಲಾವು ಈಗಾಗಲೇ ಒಂದು ಸಾವಿರಕ್ಕೆ ಇಳಿಯುವಂತೆ ಮಾಡಿದೆ. ಇನ್ನೂ ಆ ಉತ್ಪನ್ನ ಕರಗಬೇಕು. ಅದರೊಡನೆಯೇ ಹಲವು ಕಡೆಗೆ ನೂಲು ನೇಯುವ ಸಂಘಗಳನ್ನು ಸ್ಥಾಪಿಸಬೇಕು. ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಹೆಚ್ಚಾಗಬೇಕು. ಕಳವು ಕೊಲೆ-ಸುಲಿಗೆಗಳು ಸಂಪೂರ್ಣ ನಿಲ್ಲಬೇಕು. ಹಳ್ಳಿ ಹಳ್ಳಿಗೂ ನ್ಯಾಯದಾನ ಮಂಡಲಗಳ ಸ್ಥಾಪನೆಯಾಗಬೇಕು. ವಲವಡಿ, ಚಿಕಾಲ ಮೊದಲಾದ ಸ್ಥಳಗಳಲ್ಲಿ ದಾಳಿಗಳನ್ನು ಮಾಡಿಸುವ ಯೋಜನೆ ಸಿದ್ಧವಾಗಿದೆ, ಕಾರ್ಯ ಪ್ರವೃತ್ತವೂ ಆಗಿದೆ.

ಜಿಲ್ಹೆಯೊಳಗಿನ ಸ್ತ್ರೀ-ಪುರುಷರ ನೈತಿಕ ಹೊಣೆಯನ್ನೂ ಹೊತ್ತು ನಿಂತಿದೆ, ಪ್ರತಿ ಸರಕಾರ. ಇವೆಲ್ಲವುಗಳನ್ನು ಕೇಳಿ ತಿಳಿದ ನಿನ್ನ ತಂದೆ ಸುಖ

ರಾವ—ಪ್ರತಿ ಸರಕಾರಕ್ಕೆ ಇಂಥ ಅನ್ಯಾಯ ಮಾಡಬಾರದಿತ್ತು. ಅನ್ಯಾಯಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವದು ನಮ್ಮ ಧರ್ಮ. ಕೆಲವು ಸ್ಥಳಗಳಲ್ಲಿ ನಾವು ಕೊಟ್ಟ ಶಿಕ್ಷೆಗಳು ಕ್ರೂರ, ಮಧ್ಯಯುಗದ ಮಾದರಿ ಎಂದೆನಿಸಿದರೂ ಅವುಗಳನ್ನು ಕೈಕೊಳ್ಳಲೇಬೇಕಾಯಿತು. ಅದರ ಹಿಂದೆ ಇರುವಂತಹ ಕಾರ್ಯಕರ್ತರ ಕಳವಳ, ಕ್ರಾಂತಿ, ನಿಷ್ಠೆ, ಧ್ಯೇಯ, ಪ್ರೇಮಗಳು ಅಮೌಲ್ಯವಾಗಿವೆ, ಬಾಬಾಸಾಹೇಬ.

§ § § §

ಸುಬ್ಬರಾವನ ಮುಖದಿಂದ ನಿಟ್ಟುಸಿರೊಂದು ತಾನಾಗಿಯೇ ಹೊರಟು ಹೋಯಿತು. ಪ್ರತಿ ಸರಕಾರವೆಂಬುದು ಇಂಥ ಒಂದು ವ್ಯವಸ್ಥಿತ ಸಂಸ್ಥೆಯಿರಬೇಕೆಂಬ ಕಲ್ಪನೆಯು ಅವನ ಕನಸು ಮನಸ್ಸಿನಲ್ಲಿಯೂ ಸುಳಿದಿರಲಿಲ್ಲ. ಅದೊಂದು ಗುಂಡರ ಗುಂಪು, ತುಂಟರ ತಂಡ, ಪುಂಡರ ಪಾರ್ಟಿ ಎಂದಿಷ್ಟೇ ಅವನ ಭಾವನೆ ಇತ್ತು. ಈಗ ತಾನು ಮಾಡಿದ ಕಾರ್ಯಕ್ಕಾಗಿ, ವಸಂತನನ್ನು ಹಿಡಿದು ಕೊಟ್ಟದ್ದಕ್ಕಾಗಿ ಮನದಲ್ಲಿಯೇ ನೊಂದುಕೊಳ್ಳ ತೊಡಗಿದ.

ಮರುಕ್ಷಣದಲ್ಲಿ ಅವನ ಆತ್ಮಪ್ರತಿಷ್ಠೆ ಜಾಗೃತಗೊಂಡಿತು.

ಮೂರ್ಖರು! ಈ ಹುಚ್ಚು ಹುಚ್ಚು ಕಲ್ಪನೆಗಳನ್ನು ನಮ್ಮ ಬಾಬಾಸಾಹೇಬನ ತಲೆಯಲ್ಲಿ ತುಂಬಿಯೇ ಅವನನ್ನು ಹಾಳಿಗೆ ಹಚ್ಚಿದರು. ಇಲ್ಲವಾದರೆ ಅವನೊಂದಾದರೂ ಹೀಗೆ ಮನೆಬಿಟ್ಟು ಹೋಗುತ್ತಿದ್ದನೆ?

ನೈತಿಕನಿಷ್ಠೆಯನ್ನು ಜನತೆಯಲ್ಲಿ ಬೆಳೆಯಿಸಿದರಂತೆ! ಇವರಲ್ಲಿದೆಯೇ ಆ ನಿಷ್ಠೆ?

ಹಾಗಿದ್ದರೆ ಸುಮಾ—ಬಾಬಾಸಾಹೇಬರ ಈ ನಡತೆ ಹೀಗಿರುತ್ತಿದ್ದಿತೆ?

ದೀಪದ ಬುಡಕ್ಕೇನೆ ಕತ್ತಲೆ!

ಸುಮಾ—ಬಾಬಾಸಾಹೇಬ............

ಛೀ! ಇದೇನು ಕೆಟ್ಟ ಕಲ್ಪನೆ ನನ್ನ ಮನಸ್ಸಿನಲ್ಲಿ! ಮಗನ ವಿಷಯಕ್ಕೆ ತಂದೆಯೇ ಕುಳಿತು ಇದೆಲ್ಲ ಕೆಟ್ಟ ಕೆಟ್ಟ ಕಲ್ಪನೆಗಳನ್ನು ಕಟ್ಟುವುದು!

ನಮ್ಮ ಬಾಬು ಅಂಥವನಲ್ಲವೇ ಅಲ್ಲ.

ಪ್ರತಿ ಸರಕಾರದ ಮೇಲಿನ ಸೇಡಿನ ಭಾವನೆ ಇಂಥ ಮಲಿನ ಮನಸ್ಥಿತಿಗೆ ಎಡೆಗೊಡುವುದಿಷ್ಟೇ.

ಸುಬ್ಬರಾವ ಎದುರಿಗೇ ಕುಳಿತ ಸುಲೋಚನೆಯ ಕಡೆಗೆ ದೃಷ್ಟಿ ಬೀರಿದ. ಒಮ್ಮೆಲೇ ಮೈಮೇಲೆ ಮುಳ್ಳುಗಳೆದ್ದುವು.

ನನ್ನ ಭಾವನೆಗಳೆಲ್ಲ ಮುಖದ ಮೇಲೆ ಮೂಡಿದುವೇನೋ. ಹೆಣ್ಣು ದೃಷ್ಟಿ ಬಹು ತೀಕ್ಷ್ಣ. ಏನನ್ನು ತಿಳಿದುಕೊಳ್ಳುವಳೋ ಸುಲೋಚನೆ. ಇಲ್ಲದ್ದನ್ನು ಕಲ್ಪಿಸಿ ಕೊರಗುವ ಜಾತಿಯದು. ನಮ್ಮಾಕೆ ಇಂಥ ವಿಕಲ್ಪನೆಯಿಂದೇ ಕೊನೆಯುವರಗೆ ಕೊರಗಿ ಸತ್ತಳಲ್ಲ! ಈ ಕೊರಗು ಗಂಡನ ನಡತೆಯ ಬಗ್ಗೆ ಬಂದ ಸಂಶಯ, ಮೇಲೆ ಬಸಿರು ಇವುಗಳಿಂದ ಮುದ್ದೆಯಾಗಿ ಹೋದಳು ಅವಳು. ಅಂತಹ ಸಂದರ್ಭ ಮತ್ತೆ ನನ್ನ ಮಗ ಸೊಸೆಯರ ನಡುವೆ ಉಂಟಾಗಬೇಕೇ? ಬೇಡ ಬೇಡ: ಎಂದೂ ಉಂಟಾಗಗೊಡುವುದು ಬೇಡ.

ಕೂಡಲೆ ಮುಖಭಾವವನ್ನು ಬದಲು ಮಾಡುತ್ತ ನುಡಿದ ಸುಬ್ಬರಾವ.

"ಸು................ಲಾ................"

ಬಾಯಿಂದ ನಾದವೇಳಲಿಲ್ಲ. ಕಂಠ ಆರಿದ್ದಿತು.

ಸುಲೋಚನೆ ದಂಗುಬಡೆದು ಕುಳಿತಿದ್ದಳು. ಮಾವನ ಅವಸ್ಥೆಯ ಅರ್ಥ ಅವಳಿಗೆ ಆಗುತ್ತಿರಲಿಲ್ಲ. ಆದಾವ ಪ್ರಸಂಗ? ಏನು ಕತೆ? ತನ್ನ ಪತಿ ಎಲ್ಲಿ ಹೋಗಿರುವ? ಸುಮಿತ್ರೆ ಎಲ್ಲಿ? ಇವರವರಲ್ಲಿ ಎಂಥ ಸಂಬಂಧ? ಈ ಕಾಗದ ಯಾರದು? ಏನು ಬರೆದಿರುವರು? ಏನೂ ತಿಳಿಯದಂತಾಗಿದ್ದಿತವಳಿಗೆ. ಮನಸ್ಸು ಬಧಿರವಾದಂತಿತ್ತು. ಏನೋ ಬಾಯಿಂದ ಮಾತು ಹೊರಬಿತ್ತು.

"ಸಂಜೆಯಾಯಿತು! ಅವರಿನ್ನೂ...."

ಅವಳ ಮನಸ್ಸಿನ ಪ್ರತಿಬಿಂಬದಂತೆ ಇತ್ತವಳ ಮಾತು ಮತ್ತು ಮುಖ.

"ಸಾ—ಜೆ—ಯಾ—ಯಿ—ತು.!"

ಸುಬ್ಬರಾವನ ಬಾಯಿಂದ ಉದ್ಗಾರ ಹೊರಟಿತು. ಅವನ ಕಣ್ಣಿಗೆ ಒಮ್ಮೆಲೇ ಕತ್ತಲೆ ಕವಿದಂತಾಯಿತು. ಸಂಜೆಯೆಂದರೆ ಅವನಿಗೆ ಹೆದರಿಕೆ. ಈ ಇರುಳು ಹೇಗೆ ಕಳೆವುದೊ! ಯಾರು ಬರುವರೋ ಏನು ಶಿಕ್ಷೆ ವಿಧಿಸುವರೋ? ಅಯ್ಯೋ! ನಾನು ಹೇಗೆ ಸಹಿಸುವೆನೋ ಆ ಪ್ರತಿ ಸರಕಾರದ ಶಿಕ್ಷೆಯನ್ನು? ಎನ್ನುವ ಭೀತಿಯೆಲ್ಲ ಒಬ್ಬುಳಿಗೂಡಿ ಮುಖದ ಮೇಲೆ ನೆಲೆನಿಂತಿತೋ ಎನ್ನುವಂತೆ ಬೆಪೆತ ಸುಬ್ಬರಾವ. ಆದರೂ ಕೊನೆಗೆ ಏನು ಬರಿ

ದಿರುವ ನೋಡಬೇಕೆಂದು ಆತುರ, ಭಯಬೆರೆತ ಆತುರ. ನಡುಗುವ ಕೈಗಳಿಂದ ಕಾಗದ ಎತ್ತಿ ಓದತೊಡಗಿದ.

ಸುಲೋಚನೆ ಮನಸ್ಸಿಲ್ಲದ ಮನಸ್ಸಿನಿಂದ ಕೇಳಹತ್ತಿದಳು.

‡ ‡ ‡ ‡

"ದಂಡನೀತಿ"ಯೇ ಎಲ್ಲ ರಾಜಸತ್ತೆಯ ಆಧಾರವಾಗಿದೆ. ಇದಕ್ಕೆ ನಮ್ಮ ಪ್ರಾಚೀನ ಶಾಸ್ತ್ರಗಳೂ ಪುಷ್ಟಿಯನ್ನೀಯುತ್ತಿವೆ. ವ್ಯವಹಾರದಲ್ಲಿಯೂ ಇದೇ ನೀತಿಯ ಸತ್ಯದರ್ಶನ ಎಲ್ಲೆಡೆಗೂ ಕಂಡು ಬರುತ್ತದೆ. ಕೇವಲ ಆತ್ಮ ಬಲದ ಮೇಲೆ ನಿಂತಂಥ 'ರಾಮರಾಜ್ಯ'ದ ಆದರ್ಶವು ಇನ್ನೂ ಕಲ್ಪನೆಯಲ್ಲಿಯೇ ಇದೆ. ನಿಮ್ಮ ತಂದೆಯವರಂತಹ ಚಾಣಕ್ಯಗುರುಗಳು ಸಮಾಜದಲ್ಲಿರುವವರೆಗೆ 'ರಾಮರಾಜ್ಯ' 'ಲೋಕರಾಜ್ಯ'ಗಳೆಲ್ಲ ಮುಗಿಲ ಮಲ್ಲಿಗೆಗಳೇ. ಸಾಮಾನ್ಯ ಒಂದು ಜಿಲ್ಹೆಯ ಆಡಳಿತೆ ಸುಸೂತ್ರಸಾಗಬೇಕಾದರೆ ನಾವೊಂದು ಬಲಿಷ್ಠವಾದ ಸೇನೆಯನ್ನೇ ಕಟ್ಟಬೇಕಾಯಿತು. ನೂರಾರು ಜನ ಭೂಮಿಗತರಿಂದ ಏನಾಗುವದು? ಪ್ರತಿ ಸರಕಾರದ ಗ್ರಾಮರಾಜ್ಯದೊಡನೆಯೇ ಈ 'ಸ್ವರಾಜ್ಯಸೈನ್ಯ'ವೂ ನಿರ್ಮಾಣವಾದುದು ನಿನಗೆ ಗೊತ್ತುಂಟು.

ಬಾಬಾಸಾಹೇಬ, ಇತಿಹಾಸ ಬಹಳ ವಿಚಿತ್ರವಿದೆ. ಅದು ರೂಪುಗೊಳ್ಳುವ ರೀತಿಯೇ ಬೇರೆ. ಅದನ್ನು ವ್ಯವಸ್ಥಿತಗೊಳಿಸಿ ಕಾಲಾನುಕ್ರಮದಿಂದ ಬುದ್ಧಿಪೂರ್ವಕವಾಗಿ ಯಾರೂ ಕಟ್ಟುವದಿಲ್ಲ. ಆಗಸ್ಟ ಕ್ರಾಂತಿಯ ಬಿರುಗಾಳಿಯಲ್ಲಿ ಅದೆಂತೋ ರೂಪುಗೊಂಡು ಬಿಟ್ಟಿದೆ.

ಮೊದಲೇ ನಮ್ಮ ಜಿಲ್ಹೆಯಲ್ಲಿ ಊರೂರಿಗೊಂದು ವ್ಯಾಯಾಮ ಮಂದಿರಗಳಿವೆ, ಚಾವಡಿ ಹನುಮಂತನ ಗುಡಿಗಳಿದ್ದಂತೆ. ನಮ್ಮಲ್ಲಿಯ ತರುಣರು ದೇಹದಿಂದ ಸುದೃಢನೆಂಬುದು ಎಲ್ಲರಿಗೂ ತಿಳಿದ ವಿಷಯ. ಅವರಲ್ಲಿ ಶಿಸ್ತು ಸಂಘಟನೆಗಳಷ್ಟು ಬಂದರೆ ತೀರಿತು. ಹಳ್ಳಿ ಹಳ್ಳಿಗಳಲ್ಲಿಯ ಪೈಲವಾನರ ಗುಂಪು 'ರಾಷ್ಟ್ರಸೇವಾದಳ'ವಾಗುವದೆಂಬುದನ್ನು ಕಂಡು ಹಿಡಿದವರು ನಮ್ಮ ನಾಯಕಮಣಿ ನಾನಾ ಪಾಟೀಲ. ಎಂದಿನಿಂದಲೇ ಗರಡೀ ಮನೆಯಲ್ಲಿಯೇ ಬೆಳೆದ ಜೀವವದು. ಅದಕ್ಕಂತಲೇ ಎಲ್ಲೆಲ್ಲಿ ಕಾಂಗ್ರೆಸಿಗೆ ಭೂಮಿ ಅನುಕೂಲವಿದ್ದಿತೋ ಅಲ್ಲೆಲ್ಲ ಗರಡೀ ಸಾಧಕರ ಸೇವಾದಳಗಳು ರೂಪುಗೊಂಡವು. ಅವರಿಗೆ ಸೈನ್ಯದ ಶಿಕ್ಷಣ ಕೊಡಲಾಯಿತು. ಅದೇ ನಮ್ಮ

ಜಿಲ್ಹೆಯ ಆಜಾದ ಸೇನೆ ಬಾಬಾ ಸಾಹೇಬ. ಬ್ರಿಟಿಷರ ಸೇನೆಗೂ ಬಗ್ಗದ "ಬಾಹಿರ್ಜೀಪಥಕ" ವಿದು. ಇದರ ಪ್ರಭಾವವನ್ನು ನೀನು ಕಾಡೇ ಇರುವಿ. ಇದು ಸರ್ವವ್ಯಾಪಿ. ಅಲ್ಲಿ ಇಲ್ಲಿ ಅನ್ನುವಂತಿಲ್ಲ. ನಿಮ್ಮ ತಂದೆ ಪೋಲೀಸ ಪಾರ್ಟಿಯ ಆಧಾರದ ಮೇಲೆ ನಂಬಿರಬೇಕು. ಪೋಲೀಸ ಪಾರ್ಟಿಯು ಹೊರಗಿನಿಂದ ಬರಬೇಕು. ನಮ್ಮ ಸೇನಾನಾಯಕರು ನಿಮ್ಮ ಮನೆಯ ಆಳು ಹೋಳಾಗಿಯೂ ಒಳಗೆ ಇದ್ದಾರೆ. ಇದು ಲಕ್ಷ್ಯದಲ್ಲಿರಬೇಕು. 'ಪ್ರತಿ ಸರಕಾರ' ಎಲ್ಲಿಯೋ ಗುಡ್ಡದಲ್ಲಿ ಅಡಗಿ ಇಲಿಗಳಂತೆ ತಿರುಗುವ ನಾಲ್ಕು ಜನ ಪುಂಡರ ತಂಡವಲ್ಲವೆಂಬುದು ಸುಬ್ಬರಾವನ ಲಕ್ಷ್ಯಕ್ಕೆ ಬರಬೇಕು. ನಿರ್ಭಯವಾಗಿ ಮನೆ ಮನೆಯಲ್ಲಿ ಇರುವ—ಸಮಯ ದೊರೆತಾಗ ಜೀವದ ಹಂಗು ತೊರೆದು ಹೋರಾಡುವ—ಬ್ರಿಟಿಷರ ಹೊದರಿನಲ್ಲಿ ಬೆಚ್ಚಗೆ ಕುಳಿತಿರುವೆವೆಂಬ ಹೆಣ್ಣುಜಿಂಕೆಗಳ ಬೇಟೆಯಾಡುವ—ತರುಣ ಹುಲಿಗಳ ಹಿಂಡಿನಿಂದ ಪ್ರತಿ ಸರಕಾರ ರೂಪುಗೊಂಡಿದೆ.

ಬಾಬಾಸಾಹೇಬ, ಕುಡೇಲ ಶಿಬಿರಕ್ಕೆ ನನ್ನೊಡನೆ ನೀನೊಮ್ಮೆ ಬಂದಿದ್ದೆಯಲ್ಲ—ಅಲ್ಲಿಯೇ ಈ ಆಜಾದ ಸೇನೆಗೆ ಶಿಕ್ಷಣ ಕೊಡುವ ವ್ಯವಸ್ಥೆಯಾಗಿದೆ. ಅವರಿಗೆ ಪ್ರತಿ ಸರಕಾರದ ಉದ್ದೇಶವನ್ನೂ ಗ್ರಾಮರಾಜ್ಯದ ಪರಿಚಯವನ್ನೂ ಅಲ್ಲಿ ಮಾಡಿಕೊಡಲಾಗುತ್ತಿದ್ದಿತು. ಬರೀ ಹಳ್ಳಿಯ ಪೈಲವಾನರನ್ನು ಹಿಡಿದು ಪ್ರತಿ ಸರಕಾರದ ಪ್ರತಿನಿಧಿಗಳೆಂದು ಬರೆದುಕೊಟ್ಟು, ಪುಂಡತನಕ್ಕೆ ಆಸ್ಪದ ಮಾಡಗೊಟ್ಟಿಲ್ಲ ನಾವು. ಅವರಿಗೆ ಲೋಕರಾಜ್ಯದ ಆದರ್ಶವನ್ನು ತಿಳಿಸಿ ಹೇಳಿದೆ. ಲೋಕ ಸಂಗ್ರಹದ ರೀತಿಯನ್ನು ಕಲಿಸಿದೆ. ಶಿಸ್ತಿನ ಕ್ರಮವನ್ನು ಮೈಗೂಡಿಸಿದೆ. ಅಂತಲೇ ಅವರು ಪ್ರತಿ ಸರಕಾರದ ಆದೇಶವನ್ನು ಜಂಟಿಗಾಲಿನ ಮೇಲೆ ಅಮಲಿನಲ್ಲಿ ತರಲು ಸಿದ್ಧರಾದ ಪುರೋಗಾಮಿಗಳಾದರು. ಇಂಥ ತರುಣರೇ ಪ್ರತಿಸರಕಾರದ ಗುಪ್ತ ಪೋಲೀಸರು, ಅತ್ಯಾಚಾರಕ್ಕೆ ಪ್ರತಿಕಾರ ಮಾಡುವವರು. ಇವರಿಂದಲೇ ಬ್ರಿಟಿಷ ಸೇವೆಯ ಚಲನವಲನವೆಲ್ಲ ನಮ್ಮ ಕೇಂದ್ರಕ್ಕೆ ತಿಳಿಯುತ್ತಿದ್ದುದು. ಅಂತಲೇ ಕಣ್ಣಿಗೆ ನಿದ್ರೆ ಇಲ್ಲದೆ ನೂರು ನೂರು ತಿಂಗಳು ಪರಕೀಯರ ಪಡೆಯು ಜಿಲ್ಹೆಯಲ್ಲಿ ತಿರುಗಿದರೂ ಒಬ್ಬ ಭೂಮಿಗತನ ನೆರಳೂ ಅವರಿಗೆ ಸಿಕ್ಕಲಿಲ್ಲ. ಎಲ್ಲಿಯೋ ನನ್ನಂಥವರು

ಒಬ್ಬಿಬ್ಬರು ಸಿಕ್ಕಿದ್ದರೆ ಸುಬ್ಬರಾವನಂತಹ ಕುಲಕಂಟಕರಿಂದಲೇ ಸಿಕ್ಕಿರುವರು. ಆದರೆ ಆ ಕುಲಂಕಟಕರನ್ನು ನಿರ್ಮೂಲಗೊಳಿಸಲು ಪ್ರತಿಸರಕಾರ ಕಂಕಣಬದ್ಧವಾಗಿದೆ.

ಇದು ಲಕ್ಷದಲ್ಲಿರಲಿ. ಪ್ರತಿಸರಕಾರದ ಎದುರಿಗೆ ನ್ಯಾಯದೇವತೆಯೊಬ್ಬಳೇ ಇದ್ದಾಳೆ. ಅವರ ಕಣ್ಣಿಗೆ ಕಾಣುವುದು ಭಾರತದ ಸ್ವಾತಂತ್ರ್ಯ ಒಂದೇ. ಅಲ್ಲಿ ಅಣ್ಣ, ತಮ್ಮ, ತಂದೆ, ತಾಯಿ, ಬಂಧು, ಬಳಗ ಇದಾವುದೂ ಸಂಬಂಧ ಅಡ್ಡ ಬಾರದು. ಅನ್ಯಾಯಿಗೆ ಶಿಕ್ಷೆಯಾಗಲೇ ಬೇಕು. ಅಂದ ಮೇಲೆ ಸುಬ್ಬರಾವ ನಿನ್ನ ತಂದೆಯಾದರೇನು ? ನನ್ನ ತಂದೆಯಾದರೇನು ?

ಆತ ದೇಶದ್ರೋಹಿ! ಪ್ರತಿಸರಕಾರದ ವಿರೋಧಿ! ಬ್ರಿಟಿಷಸತ್ತೆಯ ಕೈಗೊಂಬೆ! ಹಿಂದೂ ಅಬಲೆಯ ಸೊತ್ತನ್ನು ಅಪಹರಿಸಿದ ಧೂರ್ತಪಟು! ಸಿನೇಮಾ ನೋಡಲಿಕ್ಕೆಂದು ವಿಶ್ವಾಸದಿಂದ ಕಾರುಕಳಿಸಿಕೊಟ್ಟು ನನ್ನನ್ನು ಹಿಡಿಸಿದ ವಿಶ್ವಾಸಘಾತಕಿ!

ಇಂಥ ಅಪರಾಧಿಗೆ ಯಾವ ಶಿಕ್ಷೆಯಾಗಬೇಕು ನೀನೇ ಹೇಳು! ಆ ಶಿಕ್ಷೆಯ ಪರಿಮಾರ್ಜನೆಗೆ ಯಾವ ಸೇವೆ ಸಲ್ಲಬೇಕು ನೀನೇ ಯೋಚಿಸು!

\+ + + +

“ ದಾದಾ! ದಾದಾ! ”

ಸುಬ್ಬರಾಯನ ಕೈಯೊಳಗಿನ ಕಾಗದ ಅಷ್ಟಕ್ಕೇ ನಿಂತಿತು. ಗಾಬರಿಯಿಂದ ಕೂಡಲೆ ಮಡಚಿದ. ಬೆದರುಗಣ್ಣುಗಳಿಂದ ಸುತ್ತಲೂ ನಿಟ್ಟಿಸುತ್ತ,-

“ ಯಾರವರು ? ” ಎಂದ ನಡಗುವ ಸ್ವರದಿಂದ.

“ ನಾಽನಽರಿ! ”

ಸುಬ್ಬರಾಯನಿಗೆ ಅರ್ಥವಾಗಲಿಲ್ಲ. ಏನೋ ಗೊಂದಲದಲ್ಲಿ ಬಿದ್ದಂತಿದ್ದ.

“ ನಮ್ಮ....ಖಂಡು ಅಲ್ಲೇನರಿ....? ”

ಸುಲೋಚನೆ ಮಾವನ ಭಾವವನ್ನು ಅರಿತು ನುಡಿದಳು.

“ಹೀಗೋ ? ನನಗ ದನಿಯ ಗುರುತೇ ಹತ್ತಲಿಲ್ಲವಲ್ಲ ? ”

ಹುಚ್ಚು ನಗೆ ನಕ್ಕು, ಹೆದರಿಕೆಯನ್ನು ಮುಚ್ಚಲು ಯತ್ನಿಸುತ್ತ ನುಡಿದ:

" ಯಾಕೋ ? ಏನ ಕೆಲಸವಿತ್ತು ? "ಸ್ವಲ್ಪ ತಡೆದು" ಎಲ್ಲೀದ ಸ್ವರ ತೆಗೆದೋ ಇಂಥಾದ್ದು ? " ಎಂದು ಕೇಳಿದ ಸುಬ್ಬರಾವ.

"ಎಲ್ಲಾನೂ ಇಂದ ಹೊಸದೇ ಆಗಿದೆ....ರಾಯರಿಗೆ"

ಎಂದು ಮನದಲ್ಲಿಯೇ ಅಂದುಕೊಂಡ ಖಾಡು, ಏನೋ ರಹಸ್ಯದ ನಗೆ ಬೀರುತ್ತ. ಆಗ ಬಾಗಿಲಿನಿಂದ ಒಳಗೆ ಮುಖ ಚಾಚಿದ್ದನಾತ.

ಸುಲೋಚನೆಗೆ-ಏನು ಅರ್ಥ ಹೊಳೆಯಿತೋ ಏನೋ-ತಟ್ಟನೆಕೇಳಿದಳು.

"ಅವರು ಬಂದರೇನು ? " ಧ್ವನಿಯಲ್ಲಿ ಆತುರತೆ ಇತ್ತು.

" ಇಲ್ಲಿ ಬಂದಿಲ್ಲ !"

" ಇಲ್ಲಿ ಬಂದಿಲ್ಲ ಅಂದರೆ ? "

ಸುಬ್ಬರಾವ ಉಲ್ಹಸಿತ ಸ್ವರದಿಂದ ಕೇಳಿದ.

" ಹೊರಗೆ ಸದಾನಂದ ಬಂದಾರರಿ........?"

" ಸದಾನಂದ ಅಲ್ಲೋ ಬಾಬಾಸಾಹೇಬ ?"

ಬೇಸತ್ತ ಸ್ವರದಿಂದ ಕೇಳಿದ ಸುಬ್ಬರಾವ.

" ಏನು ಸುದ್ದಿ ತಂದರೆ ?"

ನಡುವೆಯೇ ಸುಲೋಚನೆ ಮಾತು ಸೇರಿಸಿ ಕೇಳಿದಳು.

" ಏನೋ ಹೇಳತಿದ್ದರು. ದಾದಾನ್ನ ಕರೀತೇನಂತ ಬಂದೆ."

" ಹೀಗೋ !"

ಎಂದು ಸುಬ್ಬರಾವ ಎದ್ದು ಲಗುಬಗೆಯಿಂದ ಹೊರಗೆ ಬಂದ. ಮಗನ ಸುದ್ದಿಯನ್ನು ಕೇಳಲಿಕ್ಕೆ ಆತುರಗೊಂಡ ಮನಸ್ಥಿತಿಯಲ್ಲಿ ಮೈ ಮೇಲಿನ ಅಸ್ತ ವ್ಯಸ್ತ ಅರಿವೆಗಳೊಡನೆ ಹಾಗೆಯೇ ಪಡಸಾಲೆಗೆ ಬರುತ್ತ.

" ಎಲ್ಲಿದ್ದಾನ ಸದಾನಂದ ?" ಎಂದ.

" ಹೊರಗ ತಲೆ ಬಾಗಿಲೊಳಗ ನಿಂತಿದ್ದ !"

ಸುಲೋಚನೆ ಮನದಲ್ಲಿಯೇ ಸದಾನಂದನ ಮೇಲೆ ಸಿಟ್ಟಾದಳು. ಪತಿಯ ಸುದ್ದಿಯನ್ನು ತಾನೂ ಕೇಳಬೇಕೆಂಬ ಕುತೂಹಲ ಅವಳಿಗೆ. ಆದರೆ ಅವಳು ಮಾವನೊಡನೆ ಹೊರಗೆ ಹೋಗುವಂತಿಲ್ಲ. " ಗೋಷಾ " ಪದ್ಧತಿ ಯಲ್ಲಿರುವ ಇನಾಮದಾರನ ಮನೆಯ ಸೊಸೆಯಾಕೆ. ಒಳಗೊಳಗೇ ಅಂದು ಕೊಂಡಳು—

" ಎಷ್ಟು ಸೊಕ್ಕು ನೋಡು ಇವನದು.? ಬಾಗಿಲಲ್ಲಿ ನಿಂತೇ ಹೇಳಿ ಕಳಿಸಿದಾನ..........? ಇವರ ಇದ್ದರಂತ ನಾಲ್ಕ ತುತ್ತ ಅನ್ನಾ ಕಂಡಾನ. ಈಗೇನು ಇಷ್ಟರಿಂದೇ ಆಯ್ತೇನು. ಹೀಗೆ ನಡಿಯಲಿಕ್ಕೆ ? ಇವರೇನು ಮಾಡಿಯಾರು—ಇವನ ಹೆಂಡತಿ ಹೀಗೆ ಹೋದರೆ ?"

ಅಸ್ವಸ್ಥ ಮನಸ್ಥಿತಿಯ ಬಾಲೆ ಇನ್ನೂ ಏನೇನು ಆಡಿಕೊಳ್ಳುತ್ತಿದ್ದಳೋ ಏನೋ ಅಷ್ಟರಲ್ಲಿ ಹೊರಗಿನಿಂದ ಮಾವನ ದನಿ ಕೇಳಬಂತು.

" ಸುಲಾ, ನನ್ನ ಕೋಟು, ಬೆತ್ತ ತಾ !"

ಅವಸರದಿಂದ ಸುಲೋಚನೆ ತಂದು ಕೊಡುತ್ತ ಕೇಳಿದಳು.

" ಏಕೆ ?"

ಸುಬ್ಬರಾವನ ಹೃದಯ ಹಾರುತ್ತಿದ್ದಿತು. ಬಾಯಿಂದ ಮಾತು ಕೂಡಲೇ ಹೊರಡಲಿಲ್ಲ. ತೇಕುತ್ತ ತೇಕುತ್ತ ನುಡಿದ. ಮಾತು ಅನುಮಾನದ ಸ್ವರದಲ್ಲಿತ್ತು.

" ಬಾಬಾಸಾಹೇಬನ್ನ ಪೋಲೀಸರು ಹಿಡಿದು ತಂದಾರಂತ ಸಂಭಾಜಿ ಪಾರ್ಕಿನೊಳಗ........"

" ಆಂ!" ಇದಿಷ್ಟೇ ಸುಲೋಚನೆಯ ಬಾಯಿಂದ ಉದ್ಗಾರ ಹೊರಟಿದು.

" ಸದಾನಂದ ಪೋಲೀಸರಿಗೆ ವರದಿ ಕೊಟ್ಟಿದ್ದಂತ........ಮುಂಜಾನೆ ಬುದ್ಧಿಗೇಡಿ ಸೂ........ಮಗ ಉಂಡ ಮನೆ ಗಳಾ ಎಣಿಸುವ ಜಾತಿ...."

" ಎಲ್ಲಿದಾನ ಆತ ?"

"ಹಾಳಾಗಿ ಹೋಗಿದಾನ ಆಗs" ಮೊಚ್ಚಿ ಮೆಟ್ಟಿ ಹೊರಗೆ ಹೊರಡುತ್ತ " ಖಂಡು ಹೇಳಿದ ನನಗೆ ಈಗ...." ಎಂದ ಸುಬ್ಬರಾಯ.

ನಿಂತಲ್ಲಿಯೇ ದಿಗಿಲುಗೊಂಡು ನಿಂತಳು ಸುಲೋಚನೆ, ಮಾವ ಹೋಗುವದನ್ನು ನೋಡುತ್ತ. ಅದೆಷ್ಟು ಹೊತ್ತು ನಿಂತಿದ್ದಳೋ ಏನೋ ! ಕೊನೆಗೆ ನುಡಿಳದು—

" ಆಕಿನ್ನೂ ತಾದಿರಬೇಕಿಲ್ಲ ಹಾಗಾದರ ಹಿಡಿದ.......?"

ತನ್ನಲ್ಲಿಯೇ ಆಡಿಕೊಂಡ ಮಾತಿದು ! ಆದರೆ ಸ್ವಲ್ಪ ರಭಸದಿಂದಲೇ ಆವಳ ಬಾಯಿಂದ ಹೊರಬಿದ್ದಿತು.

"ಬಾಯಿಸಾಹೇಬ, ಮನೆಯೊಳಗ ಇದ್ದ ಕಾರಕೂನನ ಹೆಂಡತಿ ಯನ್ನ ಎತ್ತಿಕೊಂಡ ಹೋದರ ಏನು ಮಾಡಬೇಕು ಪಾಪ! ಒಂದೊಂದ ಮದಿವೆ ಆಗ ಬೇಕಾದರೆ ಹತ್ತತ್ತ ವರ್ಷ ಚಾಕರಿ ಹಾಕಬೇಕಾಗತದ. ಈಗ ಪೋಲೀಸರಿಗೆ ವರದಿ ಯಾಕ ಕೊಟ್ಟರು ಅಂತ ಸಿಟ್ಟಿಗೆ ಬಂದರ ಬಡವನ ಬಾಳುವೆ ಹೇಗೆ ಆಗೋದು ?" ಧ್ವನಿ ರಹಸ್ಯ ಪೂರ್ಣವಾಗಿದ್ದಿತು.

ಎಂದೂ ಇಷ್ಟುದ್ದ ಮಾತಾಡದ ಆಳು ಖಂಡು ಇಂದು ಉದ್ಧಟನಾಗಿ ಹೀಗೆ ಮಾತಾಡಿದ್ದನ್ನು ಕೇಳಿ ಸುಲೋಚನೆಯಲ್ಲಿಯ ಇನಾಮದಾರಿಕೆ ಜಾಗೃತವಾಯಿತು.

"ತನ್ನ ಹೆಂಡತಿನ್ನ ತನ್ನ ಕೈಯೊಳಗ ಇಟ್ಟುಕೊಳ್ಳಬೇಕು ? ಆಕೆಗೇನ ಜೆನ್ನಹತ್ತಿ ಹೋಗ ಅಂದಿದ್ದರೇನ ಯಾರು ? ದಿನಾ ಬಂದ ಇವರ ಸುತ್ತ ಹತ್ತಿದ್ದಳು. ಹೀಗಾದರೆ ಯಾರೇನ ಮಾಡಿಯಾರು ?"

ಅಧಿಕಾರ ವಾಣಿಯಿಂದ ನುಡಿದಳು, ಸುಲೋಚನೆ ಗದರಿಸುವ ಸ್ವರದಿಂದ.

‡ ‡ ‡ ‡

ಸುಲೋಚನೆಗೆ ತುಂಬ ಕುತೂಹಲ. ಇದು ನಡೆದುದೆಲ್ಲ ಏನು ? ಮಾವನು ತನಗೆ ಓದಿ ತೋರಿಸಿದ ಪತ್ರ ಯಾರಿಗೆ ಬಂದುದು ? ಅವರ ಕೈಯ ಲ್ಲಿದ್ದ ಆ ಸುಂದರ ಪುಸ್ತಕ ಏನು ? ಅದನ್ನು ನಮ್ಮವರ ಮೇಜಿನ ಮೇಲೆ ಒಂದೆರಡು ಸಲ ನೋಡಿದಂತಿತ್ತಲ್ಲ. ಅದರಲ್ಲೇನು ಬರೆದಿದೆ ? ರಾತ್ರಿ ಒಮ್ಮಿಂದೊಮ್ಮೆಲೇ ಇವರು ಹೋದುದಾದರೂ ಎಲ್ಲಿ ? ಆ ಸುಮತ್ರಿಗೆ ಇಷ್ಟು ಮರುಳಾಗಿರುವರೆ ? ಹೀಗೆ ಅನೇಕ ಪಶ್ನೆಗಳು ಅವಳ ಮುಂದೆ ನಿಂತುವು. ಯಾವುದಕ್ಕೂ ಸಮರ್ಪಕ ಉತ್ತರ ಹುಡುಕುವ ಸ್ಥಿತಿಯಲ್ಲಿ ಅವಳ ಮನಸ್ಸು ಇರಲಿಲ್ಲ. ಮೊದಲೇನೋ ಪೋಲೀಸರು ಇಬ್ಬರನ್ನು ಹಿಡಿದು ತಂದುದು ಒಳ್ಳೆಯದಾಯಿತೆಂದು ಎನಿಸಿತಾದರೂ ಈಗ ತನ್ನ ಪತಿಯನ್ನು ಬೇಗ ಬಿಡುವರೋ ಇಲ್ಲೋ ಎಂಬ ಚಿಂತೆಗೊಳಗಾದಳು. ಒಮ್ಮೊಮ್ಮೆ ಮನಸಿನಲ್ಲಿ ಬರುವದು—ಇವರು ಸುಮತಿಗಾಗಿ ಮನೆಬಿಟ್ಟು ಹೋದವರಲ್ಲ. ಏನೋ ಕೆಲಸವಿರಬೇಕು. ಅಗತ್ಯದ ಕೆಲಸವಿರಬೇಕು. ಅದಕ್ಕಾಗಿಯೇ ನನ್ನ ಪರಿವೆ ಮಾಡದೆ ಹೋದರು. ಸುಬ್ಬರಾಯರಿಗೆ ಹೇಳಿದರೆ ಬಿಡುವದಿಲ್ಲ

ಜೇರಿ. ಇವರ ಗೆಳೆಯರು ಒಬ್ಬರೋ ಇಬ್ಬರೋ ಆಗ ಬಂದಿರಲಿಲ್ಲವೆ ನಮ್ಮ ಮನೆಗೆ ? ಯಾವುದೋ ಒಂದು ಕೆಲಸಕ್ಕೆ ಹೋಗಬೇಕಾಗಿದ್ದಿತು. ನನ್ನ ಕಡೆಗೆ ಹೋಗುವೆನೆಂದು ಹೇಳಿಬಂದರಲ್ಲ. ಯಾವಾಗಲೂ ನನ್ನ ವಿಷಯಕ್ಕೆ ಆಕರ್ಷಣೆ ಕಡಿಮೆ ಅವರಿಗೆ ಅದೇಕೋ. ಸುಮಿತ್ರೆಯೊಡನೆ ಇವರ ಸಂಬಂಧ ಎಂಥದೋ !

ಈ ವಿಚಾರ ಬರುವುದೇ ತಡ, ಸುಲೋಚನೆಯ ಮನಸ್ಸಿನಲ್ಲಿ ಬಾಬಾ ಸಾಹೇಬನ ದಿನಚರಿ ನೋಡಬೇಕೆಂಬ ಕುತೂಹಲ ಕೆರಳಿತು. ಆತುರದಿಂದ ಕೋಣೆಯಲ್ಲಿ ಹೊಕ್ಕಳು- ವಿದ್ಯುದ್ದೀಪದ ಬಟನು ಒತ್ತದೆಯೇ ಹಾಸಿಗೆಯ ಮೇಲೆ ಕೈಯಾಡಿಸತೊಡಗಿದಳು. ಕತ್ತಲೆಯಲ್ಲಿ ಕೈಗೆ ಏನೂ ಸಿಕ್ಕದಾಯಿತು. ಎದ್ದು ಬಂದು ಬಟನ್ನು ಒತ್ತಿದಳು. ಕೋಣೆಯ ತುಂಬೆಲ್ಲ ಬೆಳಕು ಪಸರಿಸಿತು. ಅದೇಕೋ ಒಂದು ತರದ ಚೈತನ್ಯ ಅವಳ ಅಂಗಾಂಗಗಳಲ್ಲಿ ಸ್ಫುರಿಸಿದಂತಾಯಿತು. ಮನದ ಕತ್ತಲೆ ಹರಿದಂತಾಯಿತು.

ಮೊದಲು ಅವಳ ದೃಷ್ಟಿಗೆ ಪತ್ರದ ಕೊನೆಯ "ನಿನ್ನ ವಸಂತ" ಎಂಬ ಶಬ್ದಗಳು ಬಿದ್ದುವು.

"ಹೋ! ಆ ವಸಂತ ಪಾಟೀಲರದೋ ಈ ಕಾಗದ!"

ಎಂಬ ವಾಕ್ಯ ತನ್ನಿಂದ ತಾನೇ ಅವಳ ಬಾಯಿಂದ ಹೊರಬಿದ್ದಿತು. ಇಲ್ಲಿ ಬಂದಾಗ ಪೋಲೀಸರ ಕೈಗೆ ಸಿಕ್ಕವರವರು. ಎಲ್ಲ ನಮ್ಮ ಮಾವನ ತಂತ್ರ ಎಂದುಕೊಂಡಳು. ಹಾಗೆಯೇ ಕಾಗದದ ಮೇಲೂ ಕಣ್ಣಾಡಿಸಿದಳು.

"ಈ ಕಾಗದ ಕೈಸೇರುವುದೇ ತಡ, ನೀನು ಮುಂದಿನ ಕೆಲಸಕ್ಕೇನೇ ತೊಡಗಬೇಕು."

ಯಾವ ಕೆಲಸವಿರಬೇಕಿವರದು? ಇನ್ನೂ ನಮ್ಮವರ ಬೆನ್ನು ಬಿಡವಲ್ಲರಲ್ಲ ಇವರು. ನಮ್ಮ ಮಾವನ ಕೈ ಗೊತ್ತಾಗಿಲ್ಲವೇನು ಮತ್ತೆ! ಎಂಥೆಂಥವರನ್ನು ಬಲೆಯಲ್ಲಿ ಕೆಡವಿ ಬಿಡುವರು. ದಿವಾಣಸಾಹೇಬರೆಂದರೆ........

ಅಂಥವರ ಹೊಟ್ಟೆಯಿಂದ ಹುಟ್ಟಿದವರಿವರು. ಕೇಳುವದೇನು? ಏನು ಮಾಡಿಯಾರು ಏನು ಇಲ್ಲ.

ಸದಾನಂದ ಇಷ್ಟರಲ್ಲಿಯೇ ಪೋಲೀಸರಿಗೆ ತಿಳಿಸಿ ಕೆಡಿಸಿ ಇಟ್ಟ. ಎಲ್ಲದಕ್ಕೂ ಹೀಗೇ ಈತ. ಅವರನ್ನು ನೋಡಿದರೆ ಎಳ್ಳಷ್ಟೂ ಸಹನವಿಲ್ಲ. ಒಳ್ಳೆಯ-

ಅರಿವೆ ತೊಟ್ಟರೆ ನೋಡುವದಾಗದು. ಕ್ರಾಪು ಬಾಚಿಕೊಂಡರೆ ಮೂಗು ಮುರಿಯುವುದು. ಪರೀಕ್ಷೆ ಪಾಸಾದರೆ ಅಸೂಯೆ. ಏನಾದರೂ ಹೊಟ್ಟೇ ಕಿಚ್ಚಿನ ಮನುಷ್ಯ. ಆಗಾಗ ಮಾವನ ಮುಂದೆ ಅವರ ವಿಷಯಕ್ಕೆ ಇಲ್ಲದ ಸಲ್ಲದ ಸಂಗತಿ ಹೇಳಿ ಮನಸ್ಸು ಕೆಡಿಸುವದೆಂದರೆ....

ಎಷ್ಟಾದರೂ ತಂದೆ ಮಕ್ಕಳು ಒಂದೇ ಎಂಬ ತಿಳುವಳಿಕೆ ಇಲ್ಲ ಆವನಿಗೆ. ಮನೆ ಮುರುಕ ಸ್ವಭಾವ ಅವನದು.

ಎಂದು ಏನೇನೋ ವಿಚಾರಿಸುತ್ತಲೇ ಬಾಬಾಸಾಹೇಬನ ದಿನಚರಿ ತೆರೆದಳು. ಓದಲಿಕ್ಕೆ ಆರಂಭಿಸಿದಳು. ಸ್ವಲ್ಪ ಹೊತ್ತಿನಲ್ಲಿ ಅದರಲ್ಲಿ ತನ್ಮಯಳಾದಳು.

ಒಂದು, ಎರಡು, ಮೂರು, ನಾಲ್ಕು. ಸ್ವಲ್ಪ ಹೊತ್ತಿನಲ್ಲಿ ಸುಲೋಚನೆಯು ಒಂದರ ಮೇಲೊಂದು ದಿನಚರಿಯ ಪುಟಗಳನ್ನು ತಿರುವಿ ಹಾಕಿದಳು. ಒಂದು ಲಲಿತ ಕಥೆಯನ್ನು ಓದಲು ತಕ್ಕೊಂಡಂತೆ ಆಗಿತ್ತವಳ ಮನಸ್ಸಿಗೆ. ಓದ ಓದುತ್ತ ಅವಳು ಮುಂದೆ ಸಾಗಿದಂತೆ ಅವಳ ಅಂತರಂಗದಲ್ಲಿ ಬೆಳಕು ಬಿತ್ತು. ಹೊರಗಿನ ವಿದ್ಯುದ್ದೀಪದ ಪ್ರಕಾಶಕ್ಕಿಂತಲೂ ಅದು ಮಿಗಿಲಾಗಿತ್ತು. ಆ ದಿನಚರಿಯನ್ನು ಕೈಯಲ್ಲಿ ಹಿಡಿದು 'ಸಂಭಾಜಿ ಪಾರ್ಕಿಗೆ ಓಡಬೇಕೆಂದೆನಿಸಿತವಳಿಗೆ. ಅಷ್ಟರಲ್ಲಿ—

"ದಾದಾ ! ದಾದಾ ! "

ಯಾರೋ ಹೊರಗೆ ನಿಂತು ಕರೆಯುತ್ತಿರುವಂತೆ ಸುಲೋಚನೆಗೆ ಅನಿಸಿತು. ಓದುವ ಗುಂಗಿನಲ್ಲಿದ್ದ ಅವಳಿಗೆ ಆ ದನಿಯ ಗುರುತು ಒಮ್ಮೆಲೇ ಸಿಕ್ಕಲಿಲ್ಲ. ತುಸು ತಡೆದಳು. ಮತ್ತೆ ಅದೇ ಕರೆ. ಅಹುದು. ಅವನದೇ ಸ್ವರ. ಸದಾನಂದನೇ ಈತ. "ಆ ! ಇವನು ಹೇಗೆ ಇಲ್ಲಿ? ಮಾಮಾ ಪಾರ್ಕಿಗೆ ಹೋದುದು ಇವನಿಗೆ ಗೊತ್ತಿಲ್ಲವೆ ?"

ಎಂದು ಬಾಯಲ್ಲಿ ಅಂದುಕೊಳ್ಳುತ್ತಲೇ ಹೊರಗೆ ಸುಲೊಚನೆ ಬಂದಳು. ಕೈಯಲ್ಲಿ ಕಾಗದ ದಿನಚರಿಗಳು ಹಾಗೆಯೇ ಇದ್ದುವು.

" ದಾದಾ ಇಲ್ಲಾ ? " ಸದಾನಂದ ಕೇಳಿದ.

" ದಾದಾ! ?" ಸುಲೋಚನೆಯ ಬಾಯಿಂದ ಉತ್ತರ ರೂಪವಾಗಿ ಹೊರಟ ಉದ್ಗಾರವಿದು.

" ಹೂಂ ! "

" ಇಲ್ಲ! "

ತಿರುಗಿ ನಡೆದ ಸದಾನಂದ. ಭ್ರಮೆ ಹಿಡಿದವರಂತೆ ಆಗಿದ್ದನಾತ. ಸ್ವಲ್ಪ ತಡೆದು ಸುಲೋಚನೆ ಕೇಳಿದಳು.

" ಎಲ್ಲಿ ನಡೆದಿರಿ ? "

" ಸುಡುಗಾಡಿಗೆ ! "

ಸದಾನಂದನ ಸ್ವರ ಭಾರವಾಗಿತ್ತು. ಸುಲೋಚನೆ ತಟಸ್ಥಳಾಗಿ ವಿಚಾರಿಸಿದಳು. ಇವನಿಗೆ ಪಾರ್ಕಿನ ಸುದ್ದಿ ಗೊತ್ತಿಲ್ಲವೇನೋ. ಖಂಡು ಹುಚ್ಚರಂತೆ ಅದೇನು ಹೇಳಿ ಮಾವನನ್ನು ಕಳಿಸಿದ ?

" ಇಲ್ನೋಡ್ರಿ ! " ಸುಲೋಚನೆ ಮತ್ತೆ ಕರೆದಳು.

" ಏನು ? " ಎಂದು ತಿರುಗಿದ ಸದಾನಂದ.

ಅದೇನನ್ನೋ ಕೇಳಬೇಕೆಂದು ಸುಲೋಚನೆಯ ತುಟಿಗಳು ಅಲುಗಿದುವು. ಆದರೆ ಅದೇಕೋ ಅವಳು ಕೇಳಲಿಲ್ಲ. ಕೈಯೊಳಗಿನ ಕಾಗದ ದಿನ-ಚರಿಗಳೆರಡನ್ನೂ ಸದಾನಂದನ ಕೈಗಿತ್ತಳು.

ಆತ ದೀಪದ ಬೆಳಕಿನಲ್ಲಿ ಮೇಲೆ ಕೆಳಗೆ ತಿರುವಿನೋಡಿದ. ನಿಂತಲ್ಲಿಯೇ ಓದಲಿಕ್ಕೆ ಆರಂಭಿಸಿದ. ಮರುಕ್ಷಣದಲ್ಲಿ ಮಗ್ನನಾಗಿ ಬಿಟ್ಟ.

" ಖಂಡೂ !, ಏ ಖಂಡೂ ! "

ಎಂದು ಕರೆಯುತ್ತ ಸೂಲೋಚನೆ ಪಡಸಾಲೆಗೆ ಸಾಗಿದಳು.

† † † †

ಸುಬ್ಬರಾಯನು ಉಪನಗರ ಬಿಟ್ಟು ಹೊರಗೆ ಬಂದನು. ಸಂಭಾಜಿ ಪಾರ್ಕನ್ನು ಸೇರುವ ಆತುರದಿಂದ ಮುಂದೆ ಮುಂದೆ ಸಾಗುತ್ತಿದ್ದಾನೆ. ಮುಂಜಾನೆಯಿಂದ ಅಗಲಿದ ಮಗನನ್ನು ಕಾಣುವ ಹಂಬಲದಿಂದ ಮಿತಿ ಮೀರಿದ ವೇಗದಲ್ಲಿ ನಡೆಯುತ್ತಿದ್ದಾನೆ. ಇಳಿ ವಯಸ್ಸಾದುದರಿಂದ ತೇಕು ಹತ್ತಿದೆ. ಅದರ ಪರಿವೆ ಇಲ್ಲವನಿಗೆ. ಆದಷ್ಟು ಬೇಗ ಪಾರ್ಕನ್ನು ಸೇರುವ ಬಯಕೆ, ಆತುರ. ದೇಹ ಇಲ್ಲಿದ್ದರೆ ಮನಸ್ಸು ಈಗಾಗಲೇ ಪಾರ್ಕಿನಲ್ಲಿ. ವಿಚಾರ ಅದೆಲ್ಲಿಯೋ ಸುತ್ತಾಡುತ್ತಿದ್ದಿತು.

ಸುಬ್ಬರಾಯನ ಕಣ್ಣುಗಳು ಕೆಂಪಾದುವು, ಕಿಡಿಕಾರತೊಡಗಿದುವು.

ಅಪಮಾನದ ಬೆಂಕಿಯಲ್ಲಿ ಬೆಂದುಹೋದ, ಸಿಡಿಮಿಡಿಗೊಂಡ.

ಮನೆತನದ ಮರ್ಯಾದೆ ಹೋಯಿತು. ಒಂದು ಹೆಣ್ಣಿಗಾಗಿ ಇದೆಲ್ಲ. ನಾಳೆ ನನ್ನ ಸರಿ ಜೋಡಿಯವರಲ್ಲಿ ಹೇಗೆ ಮುಖತೋರಿಸುವುದು ? ದಿವಾಣ ಸಾಹೇಬರು ಏನಂದಾರು ? ನನ್ನ ಸ್ಥಾನ! ನನ್ನ ಮಾನ!

ಚಂಡಾಲ ! ಕಾರಕೂನನ ಹೆಂಡತಿಗೆ ಮೋಹಿಸಿದ!

ಹಾ! ಹಗ್ಗದಿಂದ ರಟ್ಟೆಯನ್ನು ಬಿಗಿದಿರುವರಲ್ಲ. ಬಾಬಾಸಾಹೇಬ, ನನ್ನ ಬಾಬಾಸಾಹೇಬ, ಇಂಥ ಕೆಲಸ ಹೇಗೆ ಮಾಡಿದೆ? ಕಾಲೇಜಿನ ನಿನ್ನ ಓದೆಲ್ಲ ಇದಕ್ಕೇನೇ ಉಪಯೋಗವಾದುದೆ? ಹೇಗೆ ನಿಂತಿದ್ದಾಳೆ ನೋಡಿ ! ನಿರ್ಲಜ್ಜೆ ! ಮಾಯಾವಿ. ಹುಡುಗನನ್ನು ಮರುಳು ಮಾಡಿದ ಹೆಣ್ಣು. ಕೂಡಿ ಬೆಳೆದರೇನಾಯಿತು ? ಇಂಥ ಉದ್ಯಮಕ್ಕೆ ಇಳಿಯಬೇಕೆ ? ಗಂಡನಿರಲಿಲ್ಲವೆ? ಎಂಥ ಬಂಗಾರದಂಥ ಹುಡುಗ ಸದಾನಂದ.

ಸದಾನಂದ!

ಕೃತಘ್ನ ! ಹೊಟ್ಟೆಗಿಲ್ಲದೆ ಅಲೆದಾಡುವ ಇವನನ್ನು ಮನೆಯಲ್ಲಿ ಇಟ್ಟು ಕೊಂಡು ಕೆಲಸ ಹಚ್ಚಿದೆ. ಸಂಬಳ ಕೊಟ್ಟೆ. ಮೇಲೆ ಹೊಟ್ಟೆಯ ಮಗಳಂತೆ ಜೋಕೆಮಾಡಿದಹುಡಿಗೆ—ಸುಮಿತ್ರೆ—ಯನ್ನು ಕೊಟ್ಟು ಮದುವೆ ಮಾಡಿದೆ. ಇಂದು ಒಂದು ದಿನ ಪೋಲೀಸರಿಗೆ ವರದಿ ಕೊಡದೆ ಹೋಗಿದ್ದರೆ ಇವನದೇನು ಗಂಟು ಖರ್ಚಾಗುತ್ತಿದ್ದಿತು ? ತನ್ನ ಮಾನವನ್ನು ಕಳೆದುಕೊಂಡ. ಅವನಿಗೆ ಮಾನ–ಅಪಮಾನ ಇದ್ದರಲ್ಲವೇ ಕಳೆದುಕೊಳ್ಳುವುದು? ಇಂಥ ಅಲ್ಪರ ಬೆನ್ನು ಹತ್ತಿ ನಾನೇ ಹಾಳಾದೆ; ತೀರಿತು. ಅವಳಂತೂ ಪರದೇಶಿ ಬಡಹುಡಿಗೆ. ಇನಾಮುನಾರನ ಮನೆಯಲ್ಲಿ ಬೆಳೆದರೇನಾಯಿತು ? ವತನದಾರರ ಗಾಂಭೀರ್ಯ ಬಂದೀತೆ? ಇದೇ ನಮ್ಮ ಸುಲಾ ನೋಡು ಎಂಥ ಗಾಂಭೀರ್ಯ! ಎಂಥ ಗೌರವ! ಒಂದೇ ಹೊಲದ ಇನಾಮು ಇದ್ದರೂ ಆ ರಕ್ತವೇ ಬೇರೆ. ಆ ಗುಣ ಈ ಹುಡಿಗೆಯಲ್ಲಿ ಬಂದೀತೆ ? ರೂಪು ಇದ್ದರೇನಾಯಿತು ?

ಹೊರ ಮಿಂಚಿಗೆ ಮರುಳಾಗಿ ಹಾಳಾದ ಬಾಬು. ನನ್ನ ಮೋರೆಗೆ ಮಸಿ ಹಚ್ಚಿದ. ಕೂಟು ಕೂಟಿಗೆ ನಿಂತ ಪೋಲೀಸರಿಂದ ನಮಸ್ಕಾರ ಮಾಡಿ ಸಿಕೊಳ್ಳುವ ನಾನು ಅವರ ಮುಂದೇ ಬಾಯ್ತೆರೆಯಬೇಕಾದೀತು. ಎಂಥ ಅನುಚಿತ.

ಇವನ ವರ್ತನವನ್ನು ಕಂಡು ಸುನಂದೆ ಏನಂದಾಳು ? ಅವಳಿಗೆ ಸಿಕ್ಕ ಸಿಕ್ಕದ್ದನ್ನ ಆಡಿದ್ದೆ. ನನ್ನ ತಮ್ಮನನ್ನು ಹಾಳಿಗೆ ಹಚ್ಚಿದ ಮಾರಿ ಅಂದಿದ್ದೆ. ಆಗೆಲ್ಲ ಅವಳು ನನಗೆ ಹಾಕಿದ ಪ್ರಶ್ನೆ ಒಂದೇ.

" ಪುರುಷರು ಒಳ್ಳೆಯವರಿದ್ದರೆ ಹೆಂಗಸರೇಕೆ ಹಾಳಾಗುವರು? "

ಅಹುದು. ಅವಳು ಅಂದು ಅಂದುದೂ ನಿಜ. ನನ್ನ ತಮ್ಮನೇ ಹೋಗ ದಿದ್ದರೆ ಅವಳೇನು ಮಾಡುತ್ತಿದ್ದಳು? ಅವನೇ ಹೋಗಿ ದೀಪದ ಮೇಲೆ ಪತಂಗ ಬಿದ್ದಂತೆ ಬಿದ್ದ. ತಾನು ಸುಟ್ಟುಕೊಂಡು ಸತ್ತ. ಸಂಗಡ ಮನೆ ತನವನ್ನು—

ಅದೇ ಜಾತಿಯ ಹುಡುಗನೀತ. ಇವನ ನಡತೆಯಿಂದ ನಾನು ತಲೆ ತಗ್ಗಿಸಬೇಕು, ಸುನಂದೆಯ ಮುಂದೆ.

ಹೀಗೆ ಏನೇನೋ ವಿಚಾರ ಚಕ್ರ ತಿರಗುತ್ತಿದ್ದಿತು ಸುಬ್ಬರಾಯನ ತಲೆ ಯಲ್ಲಿ. ಬಗೆಗಣ್ಣಿನೆದುರು ಅನೇಕ ದೃಶ್ಯಗಳು ಬಂದು ನಿಂತು ಮಾಯವಾಗು ತ್ತಿದ್ದುವು. ಸಾಗಿದ್ದ ಮುಂದೆ. ದಾರಿಯಲ್ಲಿ ಬರುಹೋಗುವ ಜನರ ಪರಿವೆ ಇರಲಿಲ್ಲ ಅವನಿಗೆ.

ಹಠಾತ್ತಾಗಿ ಒಂದು ದನಿ ಅವನ ಕರ್ಣರಂಧ್ರವನ್ನು ಬಂದು ಸೇರಿತು.

"ವಿಶೇಷ ಸುದ್ದಿ ! ಸ್ಪೆಶಲ್ ವಾಯರಿನಿಂದ ಬಂದುದು !

"ವಸಂತ ಜೇಲು ಒಡೆದು ಓಡಿ ಹೋದ !

"ಪೋಲೀಸರಿಗೂ ಪ್ರತಿಸರಕಾರದವರಿಗೂ ಚಕಮಕಿ !

" ಇಬ್ಬರು ಪೋಲೀಸರು ಠಾರ ! ಒಬ್ಬ ಫೌಜದಾರನಿಗೆ ಪ್ರಾಣಾಂತಿಕ ಘಾಯ ! ಕುದುರೆ ಸವಾರರು ಬೆನ್ನು ಹತ್ತಿದರೂ ಸಿಕ್ಕಲಿಲ್ಲ ಗುಂಡರು ! ಸ್ತ್ರೀಯೊಬ್ಬಳ ಅಪೂರ್ವ ಸಾಹಸ ! ಕಾರ್ಯಕರ್ತರು ಪಾರಾಗುವವರೆಗೆ ಗುಂಡಿನ ಸುರಿಮಳೆ ಸುರಿಸಿದಳಂತೆ.

"ಗಾಯಗೊಂಡ ವೀರಮಹಿಳೆಯ ಶವವನ್ನು ಹೊತ್ತುಕೊಂಡೇ ಬೆಳೆ ಯಲ್ಲಿ ಹೊಕ್ಕರಂತೆ.... ! ಮಾಯವಾದರಂತೆ ! ಅದ್ಭುತ ಸಾಹಸ !"

'ಅಖಂಡ ಭಾರತ'ವನ್ನು ಮಾರುವ ಚಿಕ್ಕ ಹುಡುಗನೊಬ್ಬ ಒದರಿ ಒದರಿ ಹೇಳುತ್ತಿದ್ದ.

' ವಸಂತ ಪಾರಾದ! '

ಚಿಟ್ಟನೆ ಚೀರಿ ನೆಲಕ್ಕೆ ಕುಳಿತ ಸುಬ್ಬರಾವ. ನೆಲ ಮುಗಿಲುಗಳೆಲ್ಲ ಬಿರ್ರನೆ ತಿರುಗಿದಂತಾಯಿತು. ಕಣ್ಣಿಗೆ ಕತ್ತಲು ಕವಿದಿತು.

" ಪ್ರತಿಸರಕಾರ ! ಪ್ರತಿಸರಕಾರ ! "

ಹೃದಯದಲ್ಲಿ ಧ್ವನಿ ನಿನದಿಸಿತು.

" ಕಾಲಿಗೆ ನಾಲು ಕಟ್ಟುವರು. ಅಯ್ಯೋ ! ಮನೆ ಬಿಟ್ಟು ಹೊರಗೇಕೆ ಬಂದೆ? ಯಾರ ಮೋಸವಿದು ? "

ಎಂದು ಎದ್ದು ನಿಂತ. ಹಿಂದಿರುಗಿದ. ಊರು ದೂರದಲ್ಲಿ ಉಳಿಯಿತು. ಮುಂದೆ ಪಾರ್ಕು ಸನಿಹದಲ್ಲಿದೆ. ಎತ್ತ ಸಾಗಬೇಕು ?

ಸೂರ್ಯಾಸ್ತವಾಗಿ ತಾಸಾಯಿತು. ಪಾರ್ಕಿನಿಂದ ಈಗಾಗಲೇ ಜನ ಹೊರಟು ಹೋಗಿದೆ. ಎಲ್ಲಿಯೋ ಒಂದಿಬ್ಬರು ಆಗೊಮ್ಮೆ ಈಗೊಮ್ಮೆ ಊರ ಕಡೆಗೆ ಹೊರಟಿದ್ದಾರೆ. ನವದಂಪತಿಗಳ ಜೋಡೊಂದು ನಗುತ್ತ ಕೆಲೆಯುತ್ತ ಸುಬ್ಬರಾಯನ ಎದುರಿನಿಂದಲೇ ಹೋಯಿತು. ಅವರ ನಗೆ ಮುಪ್ಪಿನ ವಿಕಟ ಹಾಸ್ಯವಿದ್ದಂತೆ ಎನಿಸಿತವನಿಗೆ. ನಿಂತ. ಕಲ್ಲಿನಂತೆ ನಿಂತ.

ಎದುರಿನಿಂದ ಒಬ್ಬ ಮುದುಕ ಬಂದ. ಯಾವನೋ ಪೆನ್ಶನರ ಇರಬೇಕು. ಗಾಳಿ ಸವಾರಿಗೆಂದು ಹೋಗಿದ್ದನೇನೋ ! ಕೈಯೊಳಗಿನ ಬೆತ್ತವನ್ನು ಜೋರಿನಿಂದ ತಿರುವುತ್ತ ಊರ ಕಡೆಗೆ ಸಾಗಿದ್ದ.

" ಪಾರ್ಕಿನ ಕಡೆಗೆ ಯಾರಾದರೂ ಹೋದರೆ ? "

ಪೆಚ್ಚು ಮೋರೆಯಿಂದ ಸುಬ್ಬರಾಯ ಕೇಳಿದ.

" ಯಾರು ಬೇಕು ನಿಮಗೆ? "

ಆ ವ್ಯಕ್ತಿ ಕೇಳಿತು. ನಿರುತ್ತರನಾಗಿ ನಿಂತ ಸುಬ್ಬರಾಯ. ಇವನ ಮುಖದ ಮೇಲಿನ ಹುಚ್ಚು ಕಳೆಯನ್ನು ನೋಡಿ ಆತ.—

"ಇಷ್ಟು ಹೊತ್ತಾದ ಮೇಲೆ ಪಾರ್ಕಿನ ಕಡೆಗೆ ಯಾರು ಹೋದಾರು?"

" ಯಾರು ಹೋದಾರು! "

ಸುಬ್ಬರಾಯನ ಈ ಉದ್ಗಾರದಿಂದ ಇವನು ಯಾವನೋ ಭ್ರಮಿಷ್ಠ ನಿರಬೇಕೆಂದುಕೊಂಡು ಮುಂದೆ ಸಾಗಿದನಾತ.

ಸ್ವಲ್ಪ ಹೊತ್ತು ಅವನ ಕಡೆಗೇ ನೋಡುತ್ತ ನಿಂತ ಸುಬ್ಬರಾಯ. ಆ ಮೇಲೆ 'ನಾನೂ ಬರತೇನ ನಿಲ್ಲಿರಲ್ಲ!' ಎಂದ.

ಧ್ವನಿ ವಿಚಿತ್ರವಾಗಿತ್ತು. ಆ ದಾರಿಕಾರ ಏನು ಭಾವಿಸಿದನೋ ಏನೋ, ಸುಬ್ಬರಾಯನ ಬರವಿಗಾಗಿ ನಿಲ್ಲದೆ ಒತ್ತರದಿಂದ ಮುಂದೆ ಸಾಗಿದ.

"ಇನ್ನೆಲ್ಲಿ ಹೋಗುವಿ ನಿಲ್ಲು! ಹೋಗಲಿಕ್ಕೆ ಬಂದಿರುವಿ ಏನು?"

ಎಲ್ಲಿಂದಲೋ ಗಡಸು ದನಿಯೊಂದು ಕೇಳಬಂದಿತು. ಸಂಜೆಯ ಶಾಂತತೆಯಲ್ಲಿ ಮುಂಗಾರಿನ ಮುಗಿಲು ಗುಡುಗಿದಂತಾಯಿತು.

"ನಮ್ಮ ಸದಾನಂದ ಹೋಗಲಿಲ್ಲ ಇತ್ತ?"

ಸುಬ್ಬರಾಯ ಮತ್ತು ಕೇಳುತ್ತ ಮುನ್ನಡೆದ.

"ಪಾರ್ಕಿನಲ್ಲಿ ಇದ್ದಾನ ನಿಮ್ಮ ಬಾಬಾಸಾಹೇಬನ ಹತ್ತರ."

ಕೊಂಕುದನಿಯಿಂದ ನಡಿಯುತ್ತ ಒಂದು ವ್ಯಕ್ತಿ ಗಿಡದ ಮರೆಯಿಂದ ಎದ್ದು ಎದುರಿಗೆ ಬಂದಿತು!

ಗದಗದ ನಡುಗಿದ ಸುಬ್ಬರಾಯ. ಪ್ರತಿಸರಕಾರದ ಶಿಕ್ಷಾವಿಧಿ ಎಲ್ಲವೂ ಅವನ ಕಣ್ಣು ಮುಂದೆ ಒಮ್ಮೆಲೇ ಸುಳಿದು ಹೋಯಿತು. "ಅಯ್ಯೋ!" ಎಂದು ಕಿರುಚಲೆತ್ನಿಸಿದ. ಬಾಯಂಗಳಲ್ಲಿ ನಾದವೇ ಏಳಲಿಲ್ಲ. ಹೆಜ್ಜೆ ಇಡ ಬೇಕೆಂದರೂ ಕಾಲುಗಳು ಏಳಲಿಲ್ಲ. ಭ್ರಮೆಗೊಂಡು ನಿಂತ.

ಸ್ವಲ್ಪ ಕಾಲ ಸಂದಿತು. ಆ ವ್ಯಕ್ತಿ ಮುಂದೆ ಬರಹತ್ತಿತು. ಎತ್ತರ ವಾದ ಆಳು. ಗಟ್ಟಿ ಮುಟ್ಟಾದ ಮೈ. ಸುಬ್ಬರಾಯನಿಗೆ ಅವನನ್ನು ಕಂಡ ಗುರುತಿಲ್ಲ. ಯಾವುದೋ ಅಪರಿಚಿತ ವ್ಯಕ್ತಿ. ಗಹಗಹಿಸಿ ನಗುತ್ತ,—

"ಇನ್ನು ಹೋಗಬಹುದು ನೀವು...."

ಎಂದ. ಆಡಿಸಿ ಕೊಲ್ಲುವ ಬೆಕ್ಕಿನ ನೀತಿಯಂತೆ ಕಂಡಿತವನ ನಡತೆ.

"ಇಂತಹ ಹೊತ್ತಿನೊಳಗೆ ಮನೆ ಹೇಗೆ ಬಿಟ್ಟಿರಿ? ಇನಾಮುದಾರರ ಲ್ಲವೆ ನೀವು? ಪಾರ್ಕಿನ ಕಡೆಗೆ ಸಹಜ ತಿರುಗಾಡಲೆಂದು ಬಂದಿರಿ. ಕಾಣತದ. ಪಾಪ! ಏನು ಮಾಡೀರಿ? ಕಾಲು ಗುಡುಗುಡು ಆನ್ನತಿರಬೇಕು"

ಎಂದ ಕೊಂಕುದನಿಯಲ್ಲಿ ಆತ. ಸುಬ್ಬರಾಯನಿಗೆ ಏನೂ ತಿಳಿಯ ದಂತಾಯಿತು. ಕನಸಿನಲ್ಲಿ ಇದ್ದಂತಿದ್ದ. ಆಗೊಂದು ಈಗೊಂದು ದೂರ ದಲ್ಲಿ ಎಲ್ಲಿಯೋ ಒಂದು ಕಾರು ಹೋದ ಸಪ್ಪಳವಾಗುವದು. ದಿವಾಣ

ತಾಯಿಯು ಮನೆಯಲ್ಲಿ ಕರೆಯುವ ಪ್ರೀತಿಯ ಹೆಸರನ್ನು ಎತ್ತಿ.

" ಹೀಗೆ ವೇಳೆ ಕಳೆಯಲು ಹೊತ್ತಿಲ್ಲ....! "

" ಅಹದು. ಸುಬ್ಬರಾಯನ ಕೂದಲೆಳೆಯೂ ಕೊಂಕದಂತೆ ನೋಡಿ ಕೊಳ್ಳಲಿಕ್ಕೆಬೇಕು. ನಾವು...."

" ಬಾಬಾಸಾಹೇಬನ ಇಚ್ಛೆಯೋ ? "

" ಅವನ ಇಚ್ಛೆಯಲ್ಲ. ನನ್ನ ಇಚ್ಛೆ ! "

ನಿಶ್ಚಲ ಸ್ವರದಿಂದ ನುಡಿದ ವಸಂತ.

" ಆದೀತಲ್ಲ. ಅದಕ್ಕೇನು ? "

ಎಂದವನೇ ಲಾಡ ಕಾರಿನ ವ್ಯವಸ್ಥೆಗೆ ಸ್ವಯಂಸೇವಕರನ್ನು ಕಳುಹಿದ. ಕವಾಯಿತಿಗೆ " ಆರಾಮ " ಕೊಡಲಾಯಿತು. ಆ ಮೇಲೆ ಲಾಡ ಕೇಳಿದ.

" ಶಿಕ್ಷೆ ಬದಲಿಸುವ ಸಂದರ್ಭವೇನು ಬಂತು ? "

" ಅಘಟಿತ ಘಟನೆಯದು ! ಇಂದಿನ 'ಅಖಂಡ ಭಾರತ' ಸುದ್ದಿ ಯನ್ನೂ ಕೊಟ್ಟಿದೆ. ನಿಮಗಿನ್ನೂ ಮುಟ್ಟಲಿಲ್ಲವೆ ? "

" ಏನು ನಿಮ್ಮ ವಾಯರೋ, ರೇಡಿಯೋ ಸುದ್ದಿಯೋ? "

" ಅದೂ ವ್ಯವಸ್ಥೆ ಆದೀತು ಪ್ರತಿಸರಕಾರದಿಂದ ಇಂದಿಲ್ಲ ನಾಳೆ. ನೋಡುತ ಇರು ನೀನು...."

ವಸಂತ ಲಾಡನ ಬಿಗುಹನ್ನು ಕಂಡು ನಡುವೆಯೋ ನಕ್ಕು ನುಡಿದ.

" ಟಪಾಲಿನಿಂದ ಇಂತಹ ಕೆಲಸ ಆದಮೇಲೆ ವಾಯರಿನಿಂದ ಏನಾಗ ಬೇಡ ? "

ನಾಗನಾಥನ ಪುಷ್ಟಿದಾಯಕ ಮಾತಿದು!

" ಅಹುದು. ನನಗೆ ಜೇಲಿನಲ್ಲಿ ಸುಬ್ಬರಾಯನ ಶಿಕ್ಷೆಯ ಸುದ್ದಿ ತಿಳಿ ದೊಡನೆಯೇ ಬಾಬಾಸಾಹೇಬನಿಗೆ ಒಂದು ಕಾಗದ ಬರೆದೆ. ಕಾಗದವೆಂದರೆ ಸಾಮಾನ್ಯವಲ್ಲದು. ವಾರ್ಡರನ ನೆರವಿತ್ತೆಂದೇ ಅಷ್ಟುದ್ದ ಕಾಗದ ಬರೆಯ ಲಿಕ್ಕಾಯಿತು. ಬರೆದದ್ದೂ ಸಾರ್ಥಕವಾಯಿತು. ಬಾಬಾಸಾಹೇಬ ಇಷ್ಟು ಆಳು ನೀರಿನ ಹುಡುಗನೆಂದು ಎನಿಸಿರಲಿಲ್ಲ, ನನಗೆ. ಅವನಿಗಿಂತ ಆ ಸುಮ ತಿಯ ಸಾಹಸವೇ ಹೆಚ್ಚೆಂದು ನನಗನಿಸುವದು. ಅವಳೇ ಅವನ ಸ್ಫೂರ್ತಿದೇವಿ. "

ವಸಂತ ಇನ್ನೆಷ್ಟು ವಿವರಿಸುತ್ತಿದ್ದನೋ! ನಾಗನಾಥನಿಗೆ ಹುರುಪು ಬಾತು. ತಾನು ಹೇಳಲಿಕ್ಕೆ ಆರಂಭಿಸಿದ.

“ ನಿನ್ನೆ ರಾತ್ರಿ ಬಾಬಾಸಾಹೇಬ ನನ್ನ ಹತ್ತರ ಬಂದಾಗ ನನಗೂ ಮೊದ ಮೊದಲು ಧೈರ್ಯವಾಗಲಿಲ್ಲ. ರಾಜಧಾನಿಯ ಜೇಲು. ಪೂರ್ವಸಿದ್ಧತೆ ಇಲ್ಲ ಎಂದು ಅನುಮಾನಿಸಿದೆ. ‘ಇಪ್ಪತ್ತು ಜನರನ್ನು ನನ್ನ ಸಂಗಡ ಕಳಿಸಿ ಕೊಡಿರಿ ಸಾಕು’ ಎಂದು ಬಾಬಾಸಾಹೇಬ ಎಂದಾಗ ನಾನೆದ್ದೆ.

“ ಸುಮಾ ಇಲ್ಲದಿದ್ದರೆ ನಿಮ್ಮ ಸಾಹಸವೆಲ್ಲ ತಿಳೀತಿದ್ದಿತು.

“ ನೀನು ಹೆಂಗಸು, ಬೇಡ; ಬರಬೇಡ. ವೇಳೆ ಹೇಳಿಕೇಳಿ ಬರುವ ವಿಲ್ಲ ಅನತಿದ್ದೆ. ಆದರೆ ಅವಳು ಕೇಳಲಿಲ್ಲ, ವೀರ ಸ್ತ್ರೀ. ಗುಂಡು ತಗುಲಿದರೂ ಕೈಯೊಳಗಿನ ಬಂದೂಕು ಕೆಳಗಿಡಲಿಲ್ಲ.”

ಬೆರಗಿನಿಂದ ಸೇನಾಪತಿ ನಾಗನಾಥನೇ ವಿವರಿಸಿದ, ಸುಮಿತ್ರೆಯ ಶೌರ್ಯವನ್ನು.

“ ಹಿಂದೆ ಅವರ ಮನೆಗೆ ಹೋದಾಗ ಕಂಡಿರುವೆ. ಅವಳ ಮುತ್ಸದ್ದಿ ಗಿರಿಯನ್ನು. ಸೌ॥ ಲೀಲಾ ಪಾಟೀಲಳಿಗಿಂತ ಒಂದು ಹೆಜ್ಜೆ ಮುಂದಿನವಳು....” ವಸಂತ ಶಿಫಾರಸು ಮಾಡಿದ.

ಈ ಮಾತು ಅದೇಕೋ ಲಾಡನಿಗೆ ಸಹನವಾಗಲಿಲ್ಲ.

“ ಲೀಲಾ ಎಲ್ಲಿ ಏನು ? ಸಸೂನ ಹಾಸ್ಪಿಟಲಿನಿಂದ ಪಾರಾಗಿ ಬಂದ ಹೆಣ್ಣು ಮಗಳವಳು! ಅದೂ ಪ್ರಸೂತ ಕಾಲದಲ್ಲಿ. ಅದೇನು ಸಾಮಾನ್ಯ ಸಾಹಸವೆ? ಏಳು ವರ್ಷ ಶಿಕ್ಷೆ ಎಲ್ಲಿ? ಯುರವಡಾ ಜೇಲೆಲ್ಲಿ? ಪೋಲೀಸರ ತ್ರಾಸಿನಿಂದ ಗರ್ಭಪಾತ ಒದಗಬೇಕೆಂದರೇನು, ಹಾಸ್ಪಿಟಲಿಗೆ ತರಬೇಕೆಂದ ರೇನು—ಅವಳು ಅಲ್ಲಿಂದ ಪಾರಾಗಿ ಬಂದು ಇಲ್ಲಿ ಸಾತಾರೆಯಲ್ಲಿ ಇರುವ ದೆಂದರೇನು ? ”

“ ಸುಮಾನೂ ಅದೇ ಜಾತಿಯ ಸ್ತ್ರೀ. ಅವಳನ್ನು ಕಂಡ ಮೇಲೆ ನೀನನ್ನುವಿ. ಅವಳಷ್ಟು ಡಾಕ್ಟರ ಉತ್ತಮರಾವನ ಹೆಂಡತಿ. ಇವಳು ಕಾರಕೂನ ಸದಾನಂದನ ಹೆಂಡತಿ. ಇಷ್ಟೇ ವ್ಯತ್ಯಾಸ ...”

ನಾಗನಾಥನ ಮಾತು ಮುಗಿಯುವದರಲ್ಲಿ ಕಾರಿನ ಹಾರ್ನ ಕೇಳಿಸಿತು.

§ § § §

"ಇರಬೇಕು,ನಿನ್ನ ಮಗ ಪ್ರತಿಸರಕಾರದಲ್ಲಿ ಪ್ರತಿನಿಧಿ! ಆದರೆ ನೀನು?" ಇದಕ್ಕೆ ಪ್ರತಿಯಾಗಿ ಸುಬ್ಬರಾಯನ ಬಾಯಿಂದ ಮಾತು ಹೊರಡಲಿಲ್ಲ. ಅಷ್ಟರಲ್ಲಿ ಒಬ್ಬ ಬಂದು ಸುಬ್ಬರಾಯನ ಎರಡೂ ಕಾಲುಗಳನ್ನು ಬಿಗಿದ. ಚೀರ ಲೆತ್ನಿಸಿದ ಸುಬ್ಬರಾಯ. ದನಿ ಹೊರಡುವ ಮೊದಲೇ ಬಾಯಲ್ಲಿ ತುರುಕುವ ಗಾಟನ್ನು ತೋರಿದರು. ಅದನ್ನು ನೋಡಿಯೇ ಸುಬ್ಬರಾಯ ತಣ್ಣಗಾದ. ಪಿಳಪಿಳನೆ ಕಣ್ಣುಗಳನ್ನು ಬಿಡುತ್ತ ಎಲ್ಲರ ಮುಖವನ್ನು ನೋಡಹತ್ತಿದ.

ಒಬ್ಬ ಪ್ರತಿಸರಕಾರದ ಆಜ್ಞೆಯನ್ನು ಓದಿ ಹೇಳಹತ್ತಿದ.

"ಪ್ರತಿಸರಕಾರದ ಪ್ರತಿನಿಧಿಯನ್ನು ಮೋಸತನದಿಂದ ಹಿಡಿದುಕೊಟ್ಟ ನಿನಗೆ ಹನ್ನೊಂದನೆಯ ಕಲಮಿನನ್ವಯ ಶಿಕ್ಷೆ ವಿಧಿಸಲಾಗಿದೆ. ಹನ್ನೊಂದನೆಯ ಕಲಮು ಅಂದರೆ ಎರಡೂ ಕಾಲುಗಳನ್ನು ಬಿಗಿದು, ಅಂಗಾಲಿನ ಮೇಲೆ ಇಪ್ಪತ್ತೇಳು ಏಟುಗಳನ್ನು ಬಡಿಗೆಯಿಂದ ಹೊಡೆಯುವದು; ಅಲ್ಲದೆ ನೀನು ಐನೂರು ರೂಪಾಯಿ ದಂಡವನ್ನು ಪ್ರತಿಸರಕಾರಕ್ಕೆ ತುಂಬತಕ್ಕದ್ದು."

ಸುಬ್ಬರಾಯನ ಜೀವದಲ್ಲಿ ಜೀವಿಲ್ಲದಂತಾಯಿತು. ಒಳಗೊಳಗೇ ಉಂಿದ. ಆದರೆ ಮಾಡುವನೇನು? ಅವನ ಗೆಳೆಯ ದಿವಾಣನಾಗಲಿ, ಕ್ಯಾಪ್ಟನ್ ಮಗನಾಗಲಿ ಈಗ ಉಳಿಸಲಿಕ್ಕೆ ಬರುವಂತಿರಲಿಲ್ಲ. ಕೈಮಾಡಿ ಕರೆದರೆ ಬರುವ ಪೋಲೀಸಪಾರ್ಟಿಯು ನೆರವು ಕನಸಿನದಾಯಿತವನಿಗೆ. ಜನತೆಯ ಸರಕಾರದ ಮುಂದೆ ಯಾವ ಬಲವೂ ನಿಲ್ಲದು....ನಿಲ್ಲದು....

"ಬಾಬಾಸಾಹೇಬ. ಬಾ....ಬಾ....ಸಾ....ಹೇ....ಬ"

ಆರ್ತಸ್ವರದಿಂದ ಒದರಿದ ಸುಬ್ಬರಾಯ.

"ಹೂಂ! ಯಾವಾಗ್ಗೆ ತುಂಬುವಿ ಐನೂರು ರೂಪಾಯಿಗಳನ್ನು?" ಗದರಿಸಿ ಕೇಳಿದ ಒಬ್ಬ ಕಾರ್ಯಕರ್ತ. ದನಿ ಗುಡುಗಿನಂತಿತ್ತು. ಸಾತಾರಾ ಜಿಲ್ಲೆಯ ಕುಸ್ತಿ ಆಳಿನ ದನಿಯದು. ಶಿವ ಪ್ರಭುವಿನ ನಾಡಿನ ಗುಡುಗದು.

"ಒಂದು ವಾರ ಅವಕಾಶವಿದೆ. ಅಷ್ಟರಲ್ಲಿ ಪ್ರತಿಸರಕಾರದ ಪ್ರತಿನಿಧಿಗೆ ತಲುಪಿಸಬೇಕು ತಿಳಿಯಿತೋ?"

ಸೂಚಿಸಿದ ಇನ್ನೊಬ್ಬ.

"ನಮ್ಮ ನೋಟೀಸು ಬಂದೊಡನೆ ಹೇಳಿದ ಸ್ಥಳಕ್ಕೆ ತಂದು ಮುಟ್ಟಿಸಬೇಕು....ಇಲ್ಲವಾದರೆ ಮುಂದಿನ ಸ್ಥಿತಿ ಏನೆಂಬುದು ಈಗ ತಿಳಿಯುವದಲ್ಲ!"

"ಅವಕಾಶವಿಲ್ಲ...."

ಅವರಲ್ಲಿಯ ಒಬ್ಬ ಇನ್ನೊಬ್ಬನಿಗೆ ಸೂಚಿಸಿದ.

" ಆಯ್ತುಲ್ಲ! " ಎಂದವನೇ ಬಡಿಗೆಗೆ ಕೈಯಿಕ್ಕಿದನಾತ.

ಇಷ್ಟರಲ್ಲಿ ಕಾರಿನ ಹಾರ್ನ ಕೇಳಿತು. ಬೆಳಕೂ ಮುಖದ ಮೇಲೆ ಬಿತ್ತು!

\+ + + +

ಮಧ್ಯಾಹ್ನದ ಮೂರು ಗಂಟೆಯ ಸಮಯ. ಪ್ರತಿಸರಕಾರದ ಫೀಲ್ಡ್ ಮಾರ್ಶಲ ಜಿ. ಡಿ. ಲಾಡ ಸೈನಿಕ ಶಿಕ್ಷಣ ಕೊಡುತ್ತಲಿದ್ದಾನೆ. ಸುತ್ತಲೂ ದಟ್ಟವಾಗಿ ಬೆಳೆದ ಗಿಡ ಮರಗಳು. ನಿರ್ಭಯವಾಗಿ ಕವಾಯತು ಸಾಗಿದೆ.

ಅಕಸ್ಮಾತ್ ವಸಂತ ಅಲ್ಲಿಗೆ ಬಂದು ಬಿಟ್ಟ.

ಕವಾಯಿತು ಅಷ್ಟಕ್ಕೇ ನಿಂತಿತು. ಎಲ್ಲರೂ ಬೆರಗಿನಿಂದ ವಸಂತನನ್ನೇ ನಿರುಕಿಸತೊಡಗಿದರು.

" ನಾಗನಾಥ, ನಿನ್ನಿನಿಂದೂ ನೀವೆಲ್ಲಿ ಕಾಣತಿರಲಿಲ್ಲ ? "

ವಸಂತನ ಜೊತೆಗಿದ್ದ ಇನ್ನೊಬ್ಬ ವ್ಯಕ್ತಿಯನ್ನು ಉದ್ದೇಶಿಸಿ ಲಾಡ ಕೇಳಿದ. ಆತ ನೇರವಾಗಿ ಅವನ ಮಾತಿಗೆ ಉತ್ತರ ಕೊಡುವ ಬದಲು ಪ್ರಶ್ನೆ ಹಾಕಿದ.

" ಇಂದಿನ ಕಾರ್ಯಕ್ರಮಕ್ಕೆ ಜನಹೋಯಿತೆ ? "

" ಆಗಲೇ ಹೋಗಿ ಬಿಟ್ಟಿತಲ್ಲ! "

ವಸಂತನ ಮುಖದ ಕಡೆಗೆ ಹುಳುಹುಳು ನೋಡಿದ ನಾಗನಾಥ.

" ಸ್ವರಾಜ್ಯ ಇಲ್ಲವೆ ಸಾವು ಅನ್ನುವವ ಅವನು! ತನ್ನ ಕಾರ್ಯವನ್ನು ಹಿಂದೆ ಬೀಳಗೊಡುವನೆ? "

ವಸಂತ ಕರ್ತವ್ಯಕರ್ಮವನ್ನು ನೆರವೇರಿಸಿದುದಕ್ಕೆ ಪ್ರೋತ್ಸಾಹ ಕೊಡುತ್ತ ನುಡಿದನಾದರೂ ಮಾತು ತೂಗಾಟದಲ್ಲಿತ್ತು. ಮುಖ ಮ್ಲಾನವಾಗಿತ್ತು. ಅದರಲ್ಲಿ ವಿಚಾರದ ರೇಷೆಗಳೂ ಮೂಡಿದ್ದುವು.

" ಪುಣೆಯ ಎಸ್. ಪಿ. ಕಾಲೇಜ ಬಿಟ್ಟು ಯಾತಕ್ಕೆ ಬಂದಿರುವನಾತ ? "

ಸೇನಾಪತಿ ನಾಗನಾಥ ಕೇಳಿದ.

" ಎರಡು ಸಾರೆ ಗೋಳೀಬಾರಿನಲ್ಲಿ ಉಳಿಸಿದ ದೈವದ ಉದ್ದೇಶವೇನು?"

ನಗುತ್ತ ಕೇಳಿದ ಫೀಲ್ಡ ಮಾರ್ಶಲ ಲಾಡ.

" ಹೇಳಿ ಕೇಳಿ ನೀನು ಬಾಪುಸಾಹೇಬ...." ಎಂದ ಇನ್ನೊಬ್ಬ, ಅವನ

ಸಾಹೇಬರ ಕಾರು ಈಗ ಇತ್ತ ಬರಬಾರದೆ? ಎಂದು ಹುಚ್ಚು ಹಂಬಲ ವೊಂದು ಮನದಲ್ಲಿ ಹುಟ್ಟಿತು. ಇನ್ನೇನು ತನ್ನ ಕಾಲಿಗೆ ನಾಲು ಕಟ್ಟಿಸಿ ಕೊಳ್ಳುವಪ್ರಸಂಗ ಬಂತೆಂದೇ ಆತ ನಿಶ್ಚಯಿಸಿದ. ಆದರೂ ತನ್ನ ಮುಗನ ದಿನಚರಿಯಿಂದೇ ಓದಿದ್ದ. ಎಂತಲೇ ಏನೋ ನುಡಿದ—

"ನಮ್ಮ ಬಾಬಾಸಾಹೇಬ ಇಲ್ಲಿ ಬರುವವನಿದ್ದ. ಅದಕ್ಕೆ ಬಂದಿದ್ದೆ."

ತುಂಬ ಧೈರ್ಯ ತಂದುಕೊಳ್ಳಲು ಯತ್ನಿಸಿದ್ದನಾದರೂ ದನಿ ನಡುಗ ದಿರಲಿಲ್ಲ.

"ವಸಂತ ಬಂದಿದ್ದರೆ ಬಾಬಾಸಾಹೇಬ ಬರಬೇಕಲ್ಲ....?"

ಸುಬ್ಬರಾಯನ ಅಪರಾಧವನ್ನು ನೆನಪು ಕೊಡಲೆಂದು ನುಡಿದ, ಆ ಪ್ರತಿಸರಕಾರದ ಪ್ರತಿನಿಧಿ. ಅದನ್ನರಿಯುದಲೇ ಸುಬ್ಬರಾಯು ಹೇಳಿದ—

"ವಸಂತ ಬಾಬಾಸಾಹೇಬ ಕೂಡಿ ಉಂಡ ಗೆಳೆಯರು ಇಷ್ಟೇ ಏಕೆ...."

ಇನ್ನೂ ಏನೇನೋ ಹೇಳುವವನಿದ್ದ. ಅಷ್ಟರಲ್ಲಿ ಹಿಂದಿನಿಂದ ಇನ್ನೊಂದು ಯಾವುದೋ ವ್ಯಕ್ತಿ ನಡುವೆಯೇ ನುಡಿದ. ದನಿ ಬಿರುಸಾಗಿದ್ದಿತು.

"ಅಂತಲೇ ಮೋಸತನದಿಂದ ಹಿಡಿಸಿಕೊಟ್ಟೆಯಲ್ಲ?"

ಬೆದರಿದ ಚಿಗರೆಯಂತೆ ಸುತ್ತಲೂ ನೋಡಿದ ಇನಾಮುದಾರ. ನಾಲ್ಕಾರು ಜನರು ಹಠಾತ್ತಾಗಿ ಮುಂದೆ ಬರುತ್ತಿದ್ದರು. ಅವರ ಕೈಯಲ್ಲಿ ಬಡಿಗೆ ಹಗ್ಗಗಳೂ ಇದ್ದುವು. ತನ್ನ ಇತಿಶ್ರೀ ಇಲ್ಲಿಯೇ ಆಯ್ತೆಂದು ಬಗೆದನಾತ.

"ಖಂಡುನ ಮಾತ ಕೇಳಿ ಒಳ್ಳೆ ಹೊರಬಿದ್ದಪ್ಪ ಮುದುಕ?"

ಎಂದ ಒಬ್ಬ.

"ಅಷ್ಟ ತಂತ್ರ ಹೂಡತಾನ ಬಿಡು ಆತ!"

ಎಂದ ಇನ್ನೊಬ್ಬ.

"ಹೀಗೆ ಮನೆ ಮನೆಗೂ ತಂತ್ರಗಾರರಾದರೆ ತೀರಿತು. ಈ ಇನಾಮು ದಾರರ ಪಾಡು ನಾಯೀ ಪಾಡು-"

"ಇನಾಮುದಾರಿಕೆ ಏನು ಸುಟ್ಟಿತು ಇವರದು? ಇನ್ನೊಬ್ಬರ ಬೂಟು ನೆಕ್ಕುವ ಜಾತಿ ಇದು...."

ಬೇಕೆಂತಲೇ ಕೆರಳಿಸಲೆಂದೇ ತಲೆಗೊಂದು ಆಡುತ್ತಿದ್ದರು. ಆದರೆ ಸುಬ್ಬರಾಯನ ಮನದ ಸಿಟ್ಟು ರಟ್ಟೆಯಲ್ಲಿರಲಿಲ್ಲ, ಹೋಗಲಿ; ಮಾತಿನಲ್ಲಿಯೂ ಬರಲಿಲ್ಲ. ಮುಂಜಾನೆಯಿಂದ ಮಗನ ಅಗಲುವಿಕೆ. ಮಗನನ್ನು ಕಾಣಬಂದರೆ ಈ ಬೇತಾಳದ ಬಾಯಲ್ಲಿ ಸಿಕ್ಕುದು. ಮನೆಯ ನಂಬಿಗಸ್ಥ ಆಳು ಖುದ್ದು ಕೂಡ ಮೋಸಗೊಳಿಸಿದುದು. ಬಾಬಾಸಾಹೇಬನನ್ನು ಪೋಲೀಸರು ಹಿಡಿದು ತಂದಿದ್ದಾರೆಂದು ಹೇಳದಿದ್ದರೆ ತಾನೆಂದಿಗೂ ಹೀಗೆ ಹೊರಬೀಳುತ್ತಿರಲಿಲ್ಲ. ಈ ದುಷ್ಟರಿಗೆ ಬಂಗಲೆಯಲ್ಲಿ ಬರಲು ಎದೆ ಆಗುತ್ತಿರಲಿಲ್ಲ. ತಿಳಿದೂ ತಿಳಿದೂ ಈ ಪುಂಡರ ಕೈಗೆ ಸಿಕ್ಕಿಬಿದ್ದೆನಲ್ಲ. ಈಗ ನನ್ನ ಆ ಸಯಾಜಿ ಮನೆಯಲ್ಲಿ ಇದ್ದಿದ್ದರೆ ಹೀಗಾಗುತ್ತಿತ್ತೇ? ಸೈನ್ಯದ ಕಮಾಂಡರನಾತ. ಇಂಥವರಿಗೆ ಸೊಪ್ಪು ಹಾಕಗೊಡುತ್ತಿದ್ದನೆ? ಅವನಿದ್ದಿದ್ದರೆ ಆ ಹಳ್ಳಿಯನ್ನು ಬಿಟ್ಟು ಇಲ್ಲಿ ಬರುತ್ತಲೇ ಇರಲಿಲ್ಲ. ಏಕೆ ಬರಬೇಕು? ಆ ಸ್ವನಾದೆಗೆ ಅಂಜಿ? ಎಷ್ಟು ಜನರನ್ನು ಈ ಸುಬ್ಬರಾಯ ಜೇಬಿನಲ್ಲಿ ಹಾಕಲಿಲ್ಲ ಆದರೆ....

ಒಂದು ಕ್ಷಣದಲ್ಲಿ ಇಷ್ಟೆಲ್ಲ ವಿಚಾರಗಳು ಸುಬ್ಬರಾಯನ ತಲೆಯಲ್ಲಿ ಸುಟ್ಟುರೆ ಗಾಳಿಯಂತೆ ಸುತ್ತಿದುವು. ಮತ್ತೇನೋ ಯೋಚಿಸಿದ ಹುಚ್ಚನಂತೆ.

ಇಲ್ಲಿ ನನಗಾವ ಶಿಕ್ಷೆ ಕಾದಿದೆಯೋ? ಪ್ರಾಣಾಂತಿಕ ದಂಡನೆಯಿದ್ದರೆ—ಕಣ್ಣಿಂದ ದಳದಳ ನೀರಿಳಿದುವು. ಬಾಯಿ ಜಿಗುಟಾಯಿತು.

ಸಯಾಜಿ ಯಾವ ನಾಡಿನಲ್ಲಿಯೋ? ಬಾಬಾಸಾಹೇಬ ಈಗೆಲ್ಲಿಯೋ? ಇಲ್ಲಿ ನನ್ನ ಇತಿಶ್ರೀ! ಪಕ್ಕ ಕಿತ್ತಿದ ಹಕ್ಕಿ ನಾನು........, ನಾನು........!

ಸುಬ್ಬರಾಯನ ಮೈಯೊಳಗಿನ ರಕ್ತವೆಲ್ಲ ಒಮ್ಮೆಲೇ ಸೇದಿ ಹೋದಂತಾಯಿತು. ಪಟಕ್ಕನೆ ನೆಲಕ್ಕೆ ಕುಳಿತ. ಅಷ್ಟರಲ್ಲಿ ಸುತ್ತಲಿನಿಂದ ನಾಲ್ಕು ಜನರು ಅವನ ಹತ್ತರ ಬಂದರು. ಇದೀಗ ಭೂಮಿಯ ಮೇಲೆ ಪಸರಿಸುತ್ತಿರುವ ಮಬ್ಬುಗತ್ತಲೆಯಲ್ಲಿ ಅವರ ಗುರುತು ಸುಬ್ಬರಾಯನಿಗೆ ಹತ್ತುವಂತಿರಲಿಲ್ಲ. ಗುರುತು ಹಿಡಿಯುವಷ್ಟು ಅವನ ಬುದ್ಧಿಯೂ ಎಚ್ಚರದಲ್ಲಿರಲಿಲ್ಲ. ಆದರೂ ಕಿರುಚಿದ–

“ನನ್ನ ಮಗ ಬಾಬಾಸಾಹೇಬ ಪ್ರತಿಸರಕಾರದವ.

" ವೇಳೆ ಆಯ್ತು! "

ನಿರಾಶೆಯಿಂದ ನುಡಿದ ಬಾಬಾಸಾಹೇಬ.

' ಇಲ್ಲ; ಹೊತ್ತಿಗೆ ಸರಿಯಾಗಿ ಹೋಗ್ತೇವೆ. '

ವಸಂತ ಸಮಾಧಾನ ಹೇಳುವ ಸ್ವರದಲ್ಲಿ ಹೇಳಿದ.

" ಏನಾಗ್ತದನೋ. ಹನ್ನೊಂದನೆಯ ಕಲಮು ಬೇರೆ. "

ಚಿಂತೆಯಿಂದ ವ್ಯಾಕುಲಗೊಂಡು ಬಾಬಾಸಾಹೇಬ ಉಸುರಿದ.

" ಇರಲಿ, ನೆಟ್ಟಗೆ ಸಂಭಾಜಿ ಪಾರ್ಕಿಗೇನೇ ಹೋಗೋಣ. ಎಲ್ಲವೂ ಸರಿಯಾಗುವುದು. "

'ಸಂಭಾಜಿ ಪಾರ್ಕ್, ರಾತ್ರಿ ಎಂಟು ಗಂಟೆಯಲ್ಲಿ ಎಂದು ಹೇಳಿದನಲ್ಲ!'

ಬಾಬಾಸಾಹೇಬ ಹೇಳಿದ " ಆದರೆ ದಾದಾ ಪಾರ್ಕಿಗೆ ಬರುವುದು ಅಸಂಭವ. ಇಂಥ ಹೊತ್ತಿನಲ್ಲಿ ಒಬ್ಬರೇ ಮನೆಯನ್ನು ಎಂದೂ ಬಿಡುವದಿಲ್ಲ. ಅದರಲ್ಲಿ ನಾನೂ ಮನೆಯಲ್ಲಿ ಇಲ್ಲ." ಧ್ವನಿಯಲ್ಲಿ ಕಿಂಚಿತ್ ಸಮಾಧಾನ ವಿದ್ದಂತಿತ್ತು. ಆದರೂ ಅನುಮಾನದ ತೂಗಾಟದಲ್ಲಿತ್ತು ಮಾತು.

ವಸಂತ ಮನದಲ್ಲಿಯೇ ಅಂದುಕೊಂಡ.

"ಬೇಕಾದದ್ದನ್ನು ಮಾಡಿ ಹೊರಗೆ ಬರುವಂತೆ ಮಾಡುವರು, ಸುಬ್ಬ ರಾಯನನ್ನು ಹೊರಗೆ ತರುವದು ಎಷ್ಟರ ಕೆಲಸ? ಮನೆಯ ಆಳು ಖಾಡು ಇವರ ಕೈಯಲ್ಲಿ ಇದ್ದ ಮೇಲೆ ಏನಾಗುವದಿಲ್ಲ? "

ಬಾಬಾಸಾಹೇಬನಲ್ಲಿ ಇನ್ನೂ ಅಧೈರ್ಯ ಹೆಚ್ಚೀತೆಂದು ವಸಂತ ಬಾಯಿಬಿಚ್ಚಿ ಆಡದಿದ್ದರೂ ಮನದಲ್ಲಿಯೇ ಚಿಂತಿಸಿದ. ಕೈಗಡಿಯಾರದ ಕಡೆಗೆ ಒಂದೇಸವನೆ ನಿಟ್ಟಿಸುತ್ತಿದ್ದ. ಅದರಲ್ಲೂ ಆತುರದ ದನಿಯಿಂದ ಡ್ರಾಯ್‌ವ್ಹರನಿಗ ಹೇಳಿದ—

" ಸ್ವಲ್ಪ ವೇಗವಾಗಿಯೇ ಹೋಗಲಿ ಕಾರು! "

ಕಾರು ಒಂದೇಸವನೆ ಓಡುತ್ತಲಿದೆ. ಅದಕ್ಕೂ ಮುಂದೆ ಒಳಗೆ ಕುಳಿತ ತರುಣರ ಮನಸ್ಸು ಹರಿಯುತ್ತಿದೆ. ಕಾರಿನ ಮುಂಬೆಳಕಿನಲ್ಲಿ ಎದುರಿಗೆ ಬಂದ ಗಿಡ ಮರಗಳೆಲ್ಲ ಮರುಕ್ಷಣದಲ್ಲಿ ನೋಡಿ ಕಪ್ಪಾಗಿ ಹಿಂದೆ ಸರಿಯುತ್ತಲಿವೆ.

ಸಂಜೆಯ ಆಗಸದೊಳಗಿನ ಕೆಂಪು ಇನ್ನೂ ಸಂಪೂರ್ಣ ಮಾಯವಾಗಿಲ್ಲ. ಆದರೂ ಕತ್ತಲೆ ಮೆಲ್ಲ ಮೆಲ್ಲನೆ ಅದರ ಮೇಲೆ ಆವರಿಸುತ್ತಲಿದೆ.

ಬಾಬಾಸಾಹೇಬನು ಹೊರಗೇನೇ ನಿರೀಕ್ಷಿಸುತ್ತಿದ್ದಾನೆ. ಗುರುತಿನ ಒಂದೊಂದು ಸ್ಥಳಗಳನ್ನು ನೋಡಿ ಈಗ ತಾವೆಲ್ಲಿ ಬಂದಿರುವೆವೆಂಬುದನ್ನು ಅನುಮಾನಿಸುತ್ತಿದ್ದಾನೆ. ಸಂಭಾಜಿ ಪಾರ್ಕನ್ನು ಸೇರಲು ಇನ್ನೆಷ್ಟು ದಾರಿ ಉಳಿಯಿತೆಂಬುದನ್ನು ಯೋಚಿಸುವ. ಇದೇ ವೇಗದಿಂದ ಸಾಗಿದರೆ ಇನ್ನೆಷ್ಟು ವೇಳೆ ಹಿಡಿದೀತೆಂಬುದನ್ನು ಲೆಕ್ಕ ಹಾಕುವ; ಗುಣಿಸುವ; ಹೊರಗೆ ನೋಡುವ; ಕುಳಿತಲ್ಲಿ ಕೂಡದೆ ಏಳುವ. ಮೋಟಾರಿನ ವೇಗಕ್ಕೆ ಜೋಲಿ ಹೋಗಿ ಕುಸಿದು ಬೀಳುವ.

" ಅಲ್ಲಿ ಸುಮಾ ಏನಾಗಿರುವಳೋ? "

ವಸಂತ ಏನೋ ವಿಚಾರದಲ್ಲಿದ್ದು ಕೊನೆಗೆ ನುಡಿದ.

"ಅವಳಿಗೇನೂ ಆಗಲಿಕ್ಕಿಲ್ಲ. ಗುಂಡು ಮರ್ಮಕ್ಕೆ ತಾಕಿದಂತಿಲ್ಲ."

" ಆದರೂ ಬಹಳ ನಿಸ್ಸತ್ವ ಆಗಿದ್ದಾಳೆ...."

" ರಕ್ತ ಬಹಳ ಹೋಯಿತು. "

" ಅದಕ್ಕೇ ಡಾಕ್ಟರರು ಕೊಂಚ ಅನುಮಾನಿಸಿದರು...."

" ನೋಡಬೇಕು " ಸ್ವಲ್ಪ ತಡೆದು ಬಾಬಾಸಾಹೇಬ ನುಡಿದ. "ಅವಳ ಬಾಳು ಬಹಳ ಹದಗೆಡುವುದು." ಚಿಂತೆಯಿಂದ ಭಾರವಾಗಿತ್ತವನ ಮನಸ್ಸು. ನದಿಯು ಮುಖದಲ್ಲಿ ಟಿಸಿಲೊಡೆದ ಸ್ಥಾನಕ್ಕೆ ತೇಲಿ ಬಂದು ಎರಡು ಸೆಳೆತಕ್ಕೆ ಸಿಕ್ಕ ಕಟ್ಟಿಗೆಯ ತುಂಡುಗಳಂತೆ ಮಾತುಗಳು ಬಾಬಾಸಾಹೇಬನ ಹೃದಯದಿಂದ ಮೇಲೆದ್ದು ಬಂದುವು.

" ಸದಾನಂದನು ಇಂಥವನೆ? "

ಬಾಬಾಸಾಹೇಬ ವಸಂತನ ಮಾತಿಗೆ ಏನೂ ಹೇಳಲಿಲ್ಲ. ತುಸು ತಡೆದ ಹಾಗೆಯೇ ಜೇಬಿನೊಳಗಿನ ಕಾಗದದ ತುಂಡೊಂದನ್ನು ಹೊರಗೆ ತೆಗೆದು ವಸಂತನ ಕೈಯಲ್ಲಿ ಕೊಟ್ಟ.

" ಪ್ರಿಯ ಸದಾನಂದ,

ನಿನ್ನ ಕಾಗದ ತಲುಪಿತು. ಅದರಂತೆ ನಾವು ಜೇಲಿನ ಸಮೀಪದಲ್ಲಿ ಅಡಗಿ ಕುಳಿತು, ಪೋಲೀಸರಲ್ಲಿ ಸೇರಿ ಬಾಬಾಸಾಹೇಬನನ್ನು ಇಹಲೋಕ ದಿಂದ ಇಲ್ಲದಂತೆ ಮಾಡುತ್ತೇವೆ. ಪೋಲೀಸರ ಹೆಸರಿನಲ್ಲಿ ನಮ್ಮ ಕಾರ್ಯ ಸಾಧಿಸುವದು. ಸುನಂದೆ ನಿನಗೆ ಯಾವಾಗಲೂ ಕೃತಜ್ಞಳು.

ವಸಂತ ಕಾಗದವನ್ನು ಕೆಳಗೆ ಮೇಲೆ ಹೊರಳಿಸಿ ನೋಡಿದ. ಯಾರ ಸಹಿಯೂ ಕಾಣಲಿಲ್ಲ, ವಿಚಾರ ಮುದ್ರೆಯಿಂದ ಕೇಳಿದ.

" ಏನಿದು ಗೌಡ ಬಂಗಾಲ ?"

" ಗೌಡ ಬಂಗಾಲವಲ್ಲ ವಸಂತ ಇದೊಂದು ನನ್ನನ್ನು ಕೊಲೆಮಾಡುವ ತಂತ್ರ"

" ಅದರಲ್ಲಿ ಸದಾನಂದನ ಸಹಕಾರ !"

ವಸಂತ ತುಂಬ ಆಶ್ಚರ್ಯದಿಂದ ಉದ್ಗಾರ ತೆಗೆದ.

" ಅಹುದು. ಅವನಿಗೆ ಮೊದಲಿನಿಂದಲೂ ಸ್ವಲ್ಪ ಸಂಶಯ, ನನ್ನ ಮೇಲೆ. ಸುಮಾ ನನ್ನೊಡನೆ ಸಲಿಗೆಯಿಂದ ವರ್ತಿಸುತ್ತಿದ್ದಳಲ್ಲ."

" ನೀನು ರಾತ್ರಿ ಈ ಕೆಲಸಕ್ಕೆ ಹೊರಡುವೆಯೆಂದು ಅವನಿಗೇನು ಗೊತ್ತು ?"

ಮತ್ತೂ ವಿಚಾರ ತಿರುಗಣಿಯಲ್ಲಿ ಸಿಕ್ಕು ವಸಂತ ಕೇಳಿದ. ಪ್ರತಿ ಸರಕಾರದ ವ್ಯವಹಾರವೆಲ್ಲ ಇಷ್ಟು ಬೈಲಿಗೆ ಬಿದ್ದಿದೆಯೋ ಎಂಬಚಿಂತೆ ಅವನಿಗೆ.

" ನಮ್ಮ ಕ್ಲಾರ್ಕನಾತ. ಎಲ್ಲಟಪಾಲುಗಳೂ ಅವನ ಕೈಯಲ್ಲಿ ಬರತಿರತಾವೆ. ಮನೆಯ ಹೊರಗೆ ಇರುವವ ಅವನ ನಿನ್ನ ಟಪಾಲು ಒಡೆದು ಬಂದಂತೆ ಆಗಲೇ ಅನಿಸಿತೆನಗೆ..........."

[illegible] ರಿಸುತ್ತ ವಸಂತನು ಕೇಳಿದ

ಆಗ [illegible] ಬಿದ್ದಿತು.

“ ಡಾಕ್ಟರರ ಹೋದನಂತರ ಸುಮಾ ನನ್ನ ಕೈಗಿತ್ತಳಿದನ್ನು. ರಾ
ಅವಳಿಗೆ “ ... ಕೇಳ
ಕೋವಿಯ ... ಗೆ ನ
ಮೇಲೆ ಸ ... ಅ
ಕೈಯಿಂದ ... ಹೊ
ಗೊಡುವ ... ಲ
ಯತ್ನಿಸಬ ...
ಹಾಗೆಯೇ ...
ಸುತ್ತ ಕೂ ... ಚಾ
ಬಾಬಾಸಾ ... ಕೊ
ಆಮೇಲೆ ... ನಾ
ಸುಮಾ, ... ವಾ
ದಳು ವ ... ರ
ಅವಳ ಕೊ ... ಅದ
ಆಗಲಿಲ್ಲ. ... ಕ್ಕಾ
ನಂತೆ ನ ... ಗ್ಗಿ
ಮಾತು ... ತ್ರ

“ ... ಡಿ
ಗುಡಿಸಲಿ ... ಸಿರ
ಬೇಕು. ... ನಲ್ಲಿ
ಒಳ್ಳೇ ... ರದ
ನೆರವಿಗೆಂ ... ಇವೆ.
ಇದಕ್ಕಿಂತ ... ರೆ.
ಇವಳಿಗಂ ... ವೇ
ಇಲ್ಲ.”

“ ಹಾಗಾದರೆ ಒಳ್ಳೆಯದಾಯ್ತು !”